

……ಮರ್ಯಾದೆಗೆ ಮಾತ್ರ, ಎಂದೂ ಭಂಗ ತಂದುಕೊಳ್ಳಲಾರೆವು. ಪುಟ ೪೯

ಕ್ರಾಂತಿ

ಲೇಖಕರು :

ಗರುಡ ಸದಾಶಿವರಾಯರು

೧೯೪೧

ಬೆಲೆ * ೮ ಆಣೆ

ಮುದ್ರಕರು :
ರಾ. ಶ್ರೀ. ಹುಕ್ಕೇರಿಕರ
ವಸಂತ ಮುದ್ರಣಾಲಯು, ಧಾರವಾಡ

೧೯೪೧

ಪ್ರಕಾಶಕರು :
ಗರುಡ ಸದಾಶಿವರಾವ
ದತ್ತಾತ್ರೇಯ ಬುಕ್ ಡಿಪೋ ಗದಗ

|| ಶ್ರೀ ದತ್ತರಾಜ ಸಮರ್ಥ ||

ಮುನ್ನುಡಿ

●

ಸಮಾಜವು ಸರಿಯಾದ ಸ್ಥಿತಿಯಲ್ಲಿರಬೇಕು. ಅದರಿಂದ ಜನರ ಸೌಂದರ್ಯವು ಬೆಳೆಯಬೇಕು. ಚತುರ್ವಿಧ ಪುರುಷಾರ್ಥಗಳು ಹೆಚ್ಚು ಪ್ರಮಾಣದಿಂದ ಸಾಧಿಸಲ್ಪಡಬೇಕು. ಇವೇ ಮೊದಲಾದ ವಿಚಾರಗಳಲ್ಲಿ ಮಗ್ನನಿರುವಾಗ್ಗೆ ಪ್ರಾಮುಖ್ಯವಾಗಿ ಸಮಾಜದ ಅಸ್ತಿಗತವಾದ ಎರಡು ದೊಡ್ಡ ರೋಗಗಳು ನನ್ನ ಕಣ್ಣೆದುರಲ್ಲಿ ಅಕ್ರಾಳ ವಿಕ್ರಾಳ ರೂಪದಿಂದ ಕಂಡವು. ಒಂದು ವರದಕ್ಷಿಣೆ ಕೊಳ್ಳುವದು ಮತ್ತೊಂದು ತೆರವು (ಕನ್ಯಾ ಶುಲ್ಕ).

ಮಗಳನ್ನು ಲಗ್ನವಾಗುವ ವರನಿಗೆ ಶಕ್ತ್ಯಾನುಸಾರ ಲಗ್ನಕಾಲಕ್ಕೆ ಸಂತೋಷದಿಂದ ಅರ್ಪಿಸುವ ಕಾಣಿಕೆಯೇ ವರದಕ್ಷಿಣೆ. ಅದೇ ಮಾದರಿ ಕನ್ನೆಗಾಗಿ ಕೊಡುವ ನಿಧಿಯೇ ಕನ್ಯಾಶುಲ್ಕ. ಮೊದಲಿನದು ಯೋಗ್ಯವೆಂತಲೂ ಎರಡನೆಯದು ಅಯೋಗ್ಯವೆಂತಲೂ ಹೇಳುವದುಂಟು. ಕೊಡತಕ್ಕವರಿಗೆ ಹಿಂಸೆಯಾದರೆ ಎರಡೂ ಅಯೋಗ್ಯ ಪದ್ಧತಿಗಳೆಂದು ನಿಸ್ಸಂಕೋಚವಾಗಿ ಹೇಳಬಹುದು. ಹೀಗೆ ಅಯೋಗ್ಯ ತಳಹದಿಯ ಮೇಲೆ ಕಟ್ಟಲ್ಪಟ್ಟ ಸಂಸಾರ ಕಟ್ಟಡವು ಸರಿಯಾಗಿ ತಾಳಬಾಳದು. ಅದು ಪ್ರಪಂಚದ ಅಧಃಪತನ ಸಾಧನವಾಗುವದು. ಮೇಲೆ ಕಾಣಿಸಿದ ರೋಗವು ಅತ್ಯಲ್ಪ ಪ್ರಮಾಣದಿಂದ ಇರುತ್ತಿದ್ದರೆ ಅದನ್ನು ಕಡೆಗಣಿಸಬಹುದಾಗಿತ್ತು. ಅದು ಸರ್ವನಾಶ ಮಾಡುವಷ್ಟು ಬಲಿತಿರುವಾಗ್ಗೆ ಸಾಧ್ಯವಾಗಿ ಕಾಣುವ ಮದ್ದನ್ನು ವಿಚಾರಶೀಲರಾದವರೆಲ್ಲರೂ ಅತ್ಯಾಗ್ರಹದಿಂದ ಕೊಟ್ಟು ಆ ರೋಗದ ಉಚ್ಚಾಟನೆಗಾಗಿ ಪ್ರಯತ್ನಿಸುವದು ನ್ಯಾಯವು.

ಸುಶಿಕ್ಷಿತರಾಗಿ ಸಮಾಜದ ಪ್ರತಿಯೊಂದು ಹಿತಸಾಧನೆಯ ಕಾರ್ಯದಲ್ಲಿ ಮುಂದಾಳುಗಳಾಗಬೇಕೆನ್ನುವವರನ್ನಂತೂ ಈ ರೋಗವು ಸಂಪೂರ್ಣ ಆವರಿಸಿ

ಬಿಟ್ಟಿದೆ. ಆದ್ದರಿಂದಲೇ ವಿಷಮವಿವಾಹಗಳ ಸುಗ್ಗಿಯೆದ್ದು ನೀರಸದಾಂಪತ್ಯ ಜೀವನಜೀವಿಮಯವಾಗಿ, ಹೃದಯಶೂನ್ಯ ಹೇಡಿಗಳು ಹೆಚ್ಚಾಗಿ ಹುಟ್ಟಿ ಜಗದಧೋಗತಿಗೆ – ಅದರಲ್ಲಿಯೂ ಹೆಚ್ಚಾಗಿ ನಮ್ಮ ಭಾರತದ ಅಧೋಗತಿಗೆ ಕಾರಣರಾಗಿದ್ದಾರೆಂದು ಧೈರ್ಯವಾಗಿ ಹೇಳಬಹುದು. ಒಂದು ಸಮಯ ನನ್ನ ಮುದ್ದು ತೀಕ್ಷ್ಣವಾಗಿದ್ದೆಂದು ಟೀಕಿಸಲ್ಪಟ್ಟರೂ ನಾಟಕಕರ್ತರಿಗೆ ನಾಟಿ ಪರೆ ಟೀಕೆಗಳನ್ನು ಸಂತೋಷದಿಂದ ಸ್ವಾಗತಿಸುವೆನು. ಎತ್ತಾದರೂ ಸಮಾಜದ ಹಿತವಾದರೆ ನನ್ನ ಸೇವೆಯು ದೇವರಿಗೆ ಸಲ್ಲಿತೆಂದು ಭಾವಿಸುವೆನು. ಕರ್ನಾ ಟಕದಲ್ಲಿನ ವಿಧಾನಗಳು ಸತ್ವದ ಒರೆಗೆ ಹತ್ತದಿದ್ದರೆ ಬಿಟ್ಟುಕೊಡಿರಿ. ಹತ್ತಿದರೆ ಮಾತ್ರ ಪ್ರಚಾರ ಮಾಡುವದರಲ್ಲಿಯೇ ನಿಮ್ಮ ಘನತೆ ಮತ್ತು ಸತ್ಯಪ್ರಿಯತೆ.

ಕೊನೆಯದಾಗಿ ನನ್ನ ವಿನಂತಿಯನ್ನು ಮನ್ನಿಸಿ ಹೊತ್ತಿಗೆ ಛಾಯಾಚಿತ್ರ ವನ್ನು ತೆಗೆದುಕೊಟ್ಟ **ಶ್ರೀ ಕೌಲಗಿ** ಫೋಟೋಗ್ರಾಫರ್ ಹುಬ್ಬಳ್ಳಿ ಹಾಗೂ ಪ್ರೂಫ ತಪ್ಪು ವಿಶೇಷ ಉಳಿದಿದ್ದರೂ ಒಳ್ಳೇ ಅವಸರದಿಂದ ಮುದ್ರಿಸಿ ಕೊಟ್ಟ ಧಾರವಾಡದ **ವಸಂತ ಪ್ರೆಸ್ಸಿನವರಿಗೂ** ನನ್ನ ಅನನ್ಯವಂದನೆಗಳು. ಅಲ್ಲದೆ ಹೊತ್ತಿಗೆ ಸರಿಯಾಗಿ ಬ್ಲಾಕು ಮಾಡಿಕೊಟ್ಟು ನೆರವಾದ ಧಾರವಾಡದ ಶ್ರೀನಿವಾಸ ಮತ್ತು ಕಂಪನಿಯ **ಶ್ರೀ ಪೋತ್ದಾರ ಶ್ರೀನಿವಾಸರಾಯರಿಗೂ** ನಾನು ಋಣಿಯಾಗಿದ್ದೇನೆ.

ಹುಬ್ಬಳ್ಳಿ
ತಾ. ೧೫–೩–೧೯೪೭

ಗರುಡ ಸದಾಶಿವರಾವ

॥ ಶ್ರೀ ದತ್ತರಾಜ ಸಮರ್ಥ ॥

ಕ್ರಾಂತಿ

೧ ನೇ ಅಂಕ

೧ ನೇ ಪ್ರವೇಶ

(ಕನಕರಾಯ ಬ್ಯಾಂಕರ ಮನೆ-ಬ್ಯಾಂಕರ ಅವರ ಕುಟುಂಬ ಕಮಲಮ್ಮ ಮತ್ತು ಅವರ ಪುರೋಹಿತ ಸುಬ್ಬಾಜೋಯ್ಸರು ಮಾತಾಡುವಂತೆ)

ಕನಕರಾಯ — ಅಲ್ ಸುಬ್ಬಾ ಜೋಯ್ಸರೇ ತಕ್ಕ ವರದಕ್ಷಿಣೆಯನ್ನು ಕೊಳ್ಳದೇ ನಮ್ಮಂಥವರು ಮಗನ ಲಗ್ನ ಮಾಡಬಹುದೇ ? ಇನ್ನು B. A. ಪಾಸಾದಾಗ್ಗೆ ನಾಲ್ಕು ಸಾವಿರ ರೂಪಾಯಿಗಳನ್ನು ಕೇಳಿದ್ದೆವು. ಈಗ್ಗೆ M. A. ಪಾಸಾಗಿದ್ದಾನೆ. M. A. ಕ್ಕನಷ್ಟು ಐದು ಸಾವಿರ ಹೆಚ್ಚೇ ?

ಸುಬ್ಬಾ ಜೋಯ್ಸ — (ಇವನ ಮಾತಿನಲ್ಲಿ "ಏನಂತ್ರಂದರೆ" ಅಥವಾ "ಏನೆಂತೆಂದರೆ" ಸಮಯಾನುಸಾರ ಬರತಕ್ಕದ್ದು.) ಅಯ್ಯೋ ಉಂಟೇ ಇದೋ ಶೂಲಪಾಣಿ ಈ ನಮ್ಮ ಪ್ರಾಂತದಲ್ಲಿ ಕನಕರಾಯರಿಗಿಂತಲೂ ದೊಡ್ಡವರಾರು ? ಅವರು ಮಾಡುವದೆಲ್ಲ ಏಕ ಮಾತ್ರ ಮಗನಾದ ನಿನ್ನ ಹಿತಕ್ಕಾಗಿಯಲ್ಲವೇ ? ಮತ್ತೇನಂದ್ರೆ, ಅದೇನೋ ಒಂದು ದೊಡ್ಡ ಪರೀಕ್ಷೆ ಬೇರೇ ಪ್ಯಾಸ್ ಮಾಡಿರುವಿಯಂತೆ !

ಶೂಲಪಾಣಿ — ನಾನು M. A. ಪಾಸು ಮಾಡಿದ್ದು ವಧುಗಳ ಮಾತಾಪಿತೃಗಳ ಮನೆಗೆ ಡಾಕೆ ಹೊಡೆಯುವದಕ್ಕಲ್ಲಾ.

ಕನಕ — (ದರ್ಪದಿಂದ) ಸುಮ್ಮನಿರಬೇಕೂ. ಈ ವಿಚಾರದಲ್ಲಿ ನೀನು ತಲೆ ಹಾಕಲಾಗದು. ೫ ಸಾವಿರವೇಕೆ ೧೦ ಸಾವಿರ ವರದಕ್ಷಿಣೆ ಕೊಟ್ಟು, ಮಗಳನ್ನು ಕೊಡತಕ್ಕವರು ಅನೇಕ ಜನಗಳು ಬಿದ್ದಿದ್ದಾರೆ. ಏಕೆ ಸುಬ್ಬಾ ಜೋಯ್ಸರೆ ?

ಸುಬ್ಬಾ — ಅಂದರೆ ! ಆ ನಮ್ಮ ಪೆನ್ಸನ್‌ದಾರ ಪೋಲೀಸ ಸಬ್ ಇನಸ್ಪೆಕ್ಟರ್ ಹೇಮಣ್ಣನವರು ಇಂದೇ ಮತ್ತೆ ನಾಳೆ ಸಹ ಅಲ್ಲ ಇಂದೇ ೫ ಸಾವಿರವೇಕೆ ? ೬ ಸಾವಿರ ರೂಪಾಯಿಗಳ ವರದಕ್ಷಿಣೆ ಕೊಡುವದಲ್ಲದೇ, ಮೇಲೆ ಅಳಿಯನಿಗೆ ಸಂತೋಷವಾಗುವಂತೆ ವರೋಪಚಾರಗಳನ್ನು ಕೊಡಲು ಸಹ ಸಿದ್ಧರಾಗಿದ್ದಾರೆ. ಮತ್ತೇನು ಬೇಕೂ ಅಂದೆ

ಶೂಲ — ಇರಬಹುದು ಬಿಡಿ. ಚೌಡೇಶ್ವರಿಯಂಥ ತಮ್ಮ ಮಗಳ ಸಲುವಾಗಿ ಇನ್ನೂ ೧ ಸಾವಿರ ಹೆಚ್ಚು ಸಹಾ ಕೊಡಬಹುದು ಹೇಮಣ್ಣನವರು.

ಕಮಲಮ್ಮ — (ಸ್ವಲ್ಪ ಮೂಗಿನ ದನಿಯಲ್ಲಿ) ಅಲ್ಲಾ, ಶೂಲಪಾಣಿಯ ವಿಚಾರ.

ಕನಕ — ಗೊತ್ತಿದೆ ಅವನ ವಿಚಾರ ಆ ಮೂರು ಕಾಸಿನ ಧರ್ಮ ಪಾಲಯ್ಯನ ಮಗಳಾದ ಗೌರಿಯ ಮೇಲೆ ಲುಬ್ಧನಾಗಿದ್ದಾನೆ. ಶುಂಠ ಹಳೇ ಶುಂಠ

ಶೂಲ — (ಮುನಿಸಿನಿಂದ) ನಾನಿಲ್ಲಿ ನಿಲ್ಲುವದೇ ಇಲ್ಲ. ಸರ್ರನೆ ಹೋಗುವ).

ಕಮಲಮ್ಮ — ಸುಬ್ಬಾ ಜೋಯ್ಸರೇ ಧರ್ಮಪಾಲಯ್ಯನ ಗೌರಿಯು ವಿನಃ ತಾನು ಮತ್ತಾಗನ್ನೂ ಲಗ್ನ ವಾಗುವದಿಲ್ಲವೆಂದು ಇವನು ಖಂಡಿತವಾಗಿ ಹೇಳುವನು. ಅದಕ್ಕೆ (ದೈನ್ಯದಿಂದ) ಹೇಗಾದರೂ ಮಾಡಿ ೫ ಸಾವಿರ ರೂಪಾಯಿಗಳ ವರದಕ್ಷಿಣೆಯನ್ನು ಕೊಡುವಂತೆ ಆ ಧರ್ಮಪಾಲಯ ನನ್ನು ಹುರಿದುಂಬಿಸಿ ಸ್ವಾಮಿ; ನಿಮ್ಮ ಶ್ರಮವೇನು ವ್ಯರ್ಥವಾಗಲಾರದು.

ಸುಬ್ಬಾ — ೫ ಸಾವಿರಕ್ಕೆ ಹೋಗುವಿರಿ; ೫ ನೂರು ರೂಪಾಯಿಗಳನ್ನು ಕೊಡುವಷ್ಟಾದರೂ ಅವನಲ್ಲಿ ಚೈತನ್ಯ ಉಂಟೇ ?

ಕನಕ — ರೋಖ ಹಣವಿಲ್ಲದಿದ್ದರೆ ಭೂಮಿ ಶೀಮೆಗಳಿಲ್ಲವೇ ?

ಕಮಲಮ್ಮ — ಹಂ. ನಾನೂ ಅದೇ ಹೇಳತಕ್ಕವಳಿದ್ದೆ. ೫ ಸಾವಿರ ಬೆಲೆ ಬಾಳುವ ಭೂಮಿ ಶೀಮೆಗಳನ್ನು ನಮ್ಮ ಹೆಸರಿನಲ್ಲಿ ಬೇಡಾ, ತನ್ನ ಅಳಿಯನಾಗತಕ್ಕವನ ಹೆಸರಿನಲ್ಲಿ ಖರೀದಿ ನೊಂದಣಿ ಮಾಡಿಸಲಿ.

ಕನಕ — (ಮೋಹದಿಂದ) ಅಂದೇನು ನಿನಗೆ ನನ್ನ ಅರ್ಧಾಂಗಿಯೆಂದು; ನೋಡಿ ಸುಬ್ಬಾ ಜೋಯ್ಸರೇ ನಮ್ಮ ಇವಳ ವಿಚಾರಗಳಲ್ಲಿ ಒಂದು ಗುಂಜಿ– ಒಂದು ಗುಂಜಿ ತೂಕ ಸಹಾ ಹೆಚ್ಚು ಕಡಿಮೆಯಾಗುವದಿಲ್ಲ. ಅಹುದೇ ನನ್ನ ಧಾರ್ಂಗಿ ಅಹುದೇ.

ಸುಬ್ಬಾ — ನಿಜವಾಗಿ ! ಅಪ್ಪಿಗೆ ಹಚ್ಚಿದ ಅರ್ಧ ಅಂಗಿಯಂತೆ ಇಲ್ಲವೇ ಇಲ್ಲ ರಾಯರೇ ತಮ್ಮ ಪ್ರಪಂಚ ! ಆಗಲಿ ಧರ್ಮಪಾಲಯ್ಯನನ್ನು ಕಂಡು ಬರುವೆನು. (ಹೋಗಲುಪಕ್ರಮ)

ಕಮಲಮ್ಮ — ಇದೋ ಅಷ್ಟಕ್ಕೆ ಒಪ್ಪಿದರೆ ಮಿಕ್ಕ ಬಾಬುಗಳನ್ನು ಮರೆಯ ಕೂಡದೂಂದೆ.

ಕನಕ — ಹಂ ಮತ್ತೆ. ವರದಕ್ಷಿಣೆಯಾದರೇ ವರೋಪಚಾರವಿಲ್ಲವೇ ! ಹಾದೀ ವೆಚ್ಚ, ಬೀದಿ ವೆಚ್ಚ.

ಕಮಲಮ್ಮ — ಬೀಗಿತ್ತೀ ಕಳಸಗಿತ್ತೀ ಇವೆಲ್ಲ ಬಾಬೂ ! ಮರೆತು ಬಿಡುವಿರೇನು ?

ಕನಕ — ನೋಡಿ ನೋಡಿ ಹೇಗಿದೆ ! ನಮಗಿಂತಲೂ ನಾಲ್ಕು ಹೆಜ್ಜೆ ಮುಂದೇಂದ್ರೆ !

ಸುಬ್ಬಾ — ಅದಕ್ಕೂ ಪುಣ್ಯ ಬೇಕು ರಾಯರೇ ಪುಣ್ಯ (ಹೋಗುತ್ತ) ಆಗಲಿ ಧರ್ಮಪಾಲಯ್ಯನನ್ನು ಕಂಡು ಬರಲೋ ?

ಕಮಲಮ್ಮ — ಮೊದಲೇ ಎಲ್ಲ ಮಾತುಗಳ ಪರಿಷ್ಕಾರವಾಗಬೇಕೂ. ಆ ಮೇಲೆ ರಸಕಸಿ ತರವಲ್ಲ ! (ಜೋಯ್ಸರು ಹೋಗುವರು.)

ಕನಕ — (ಮೋಹದಿಂದ ಅವಳ ಹೆಗಲ ಮೇಲೆ ಕೈಯಿಕ್ಕಿ ಮತ್ತೊಂದು ಕೈಯಿಂದ ಅವಳ ಕೈ ಹಿಡಿದು) ಅಹುದು ಬಿಡೇ ಅಂದೇನು ನಿನಗೆ ನನ್ನಾಂಧಾರ್ಂಗಿಯಂದೂ.

ಕಮಲ — (ಶೃಂಗಾರ ವೈಯ್ಯಾರ) ಮತ್ತೆ ತಾವೂ ?

॥ ಪದ್ಯ ॥

ಕನಕ — ನಾಗ ಮುರುಗೆಯ ತಳಕು । ನಮ್ಮಗಳ ಸಂಸಾರ ॥
ಹೇಗೆ ಉಭಯರ ಮತಗಳೊಮ್ಮತಗಳು ॥
ಆಗುವವು ಅನವರತ । ಸೋಜಿಗವಿದಿರಬಹುದು ॥
ಯೋಗ ಪೂರ್ವದ ಹಲವು । ವರಜನ್ಮಗಳಲಿ ॥
ಆಗಿರಲುಬಹುದು ಸತಿಪತಿಯರಾಗಿ ॥
ಈಗಿನಂದದಲಿ ಸಿದ್ಧಾಂತವಾಗಿ ॥

(ಅವಳನ್ನು ಅಲಿಂಗಿಸಿರುವಷ್ಟರಲ್ಲಿ ಪೋಸ್ಟಮನ್ ಪತ್ರಕೊಟ್ಟು)

ಪೋಸ್ಟಮನ್ — (ಬೆಪ್ಪಾಗಿ) ಎಕ್ಸಕ್ಯೂಜ ಸರ್ (ನಮಿಸಿ ಹೋಗುವ.)

ಕನಕ — (ತಮ್ಮ ವಿನೋದದಲ್ಲಿ ವ್ಯತ್ಯಯ ಬಂತೆಂಬ ಸಿಟ್ಟಿನಿಂದ) ಈ ಪೋಸ್ಟ ಪ್ಯಾದೆಗಳು ಸಿಕ್ಕ ಸಿಕ್ಕಲ್ಲಿ ನುಗ್ಗಿ ಬರುವದಕ್ಕೆ ಲಾಯಸನ್ಸೇ ಪಡೆದುಕೊಂಡಿರುತ್ತಾರೆ. (ಪಟಗುಟ್ಟುವನು)

ಕಮಲಮ್ಮ — ತಾವು ಕೃಷ್ಣ ಲೀಲೆಯುಲ್ಲಿರುವದು ಅವನಿಗೇನು ಗೊತ್ತು ಪಾಪ, ಉಂ. ಹೋಗಲಿ ಬಿಡಿ ಪತ್ರವೇನು ?

ಕನಕ — (ಪೋಸ್ಟಮನ್ ಹೋದತ್ತ ಸಿಟ್ಟಿನಿಂದ ನೋಡುತ್ತಲೇ) ಅಲ್ಲಾ ಎಲ್ಲಿ ಬರಬೇಕೂ ಎಲ್ಲಿ ಬರಬಾರದೂ ವಿಚಾರವಿಲ್ಲವೇನು ? ಹಾಗೇ ಸಿಕ್ಕ ಸಿಕ್ಕಲ್ಲಿ ನುಗ್ಗುವದೇ ?

ಕಮಲಮ್ಮ — ಹೋಗಲಿ ಬಿಡಿಯಂದ್ರೆ ಉಂ. ಪತ್ರವೇನು ?

ಕನಕ — (ಪತ್ರ ನೋಡಿ ಒಡೆಯುತ್ತ) ಇದು ರಜಿಸ್ಟರ್ಡ ಪೋಲೀಸ ಸಬ್ ಇನಸ್ಪೆಕ್ಟರ ಹೇಮಣ್ಣನವರ ಪತ್ರ.

ಕಮಲಮ್ಮ — ರಜಿಸ್ಟರ್ಡ ಅಲ್ಲಾ. ರಿಟಾಯರ್ಡ ಪೋಲಿಸ ಸಬ್ ಇನ್ಸ್ಪೆಕ್ಟರ.

ಕನಕ — ಹಂ. ಹಂ. ರಿಟಾಯರ್ಡ ಪೋಲಿಸ ಸಬ್ ಇನಸ್ಪೆಕ್ಟರ.

ಕಮಲಮ್ಮ — ಸರಿ. ಏನು ಬರೆಯುವರು.

ಕನಕ — ಶ್ರೀ ಗುಡ್ಡದ ಎಲ್ಲಮ್ಮ ದೇವೀ ಪ್ರಸನ್ನ. ಮುಕ್ಕಾಂ ಜಡ್ರಾಮ ಕುಂಟೀ.

ಕಮಲಮ್ಮ — (ಬೇಜಾರ ದನಿಯಿಂದ) ಅಯ್ಯೋ ಅವೆಲ್ಲವೇತಕ್ಕೆ ಬೇಕು. ಮುಖ್ಯಾಂಶವೇನು ಅಷ್ಟು ಓದಿ ಬಿಟ್ಟರಾಯಿತು.

ಕನಕ — (ಗುಣು ಗುಣು ಶಬ್ದದಲ್ಲಿ ಪತ್ರ ಓದುವ ನಟನೆ ಮಾಡಿ) ತಮ್ಮ ಚಿರಂಜೀವ ಶೂಲಪಾಣಿಯ ಸಲುವಾಗಿ ನನ್ನ ಮಗಳಾದ ಗುಂಡಮ್ಮನನ್ನು ತಕ್ಕೊಳ್ಳಬೇಕು. ತಾವು ಹೇಳುವ ೫ ಸಾವಿರ ವರದಕ್ಷಿಣೆ ಮತ್ತು ವರೋಪಚಾರಗಳನ್ನು ಕೊಡಲು ನಾನು ಶಿದ್ಧಸಿದ್ಧೇನೆ. ಇತಿ ವಿಜ್ಞಾಪನೆಗಳು ತಮ್ಮ ಬಾಲಮಿತ್ರ ಹೇಮಣ್ಣ ರಜಿಸ್ಟರ್ಡ ಅಲ್ಲಲ್ಲ. ರಿ|| ಪೋ|| ಸ|| ಇ. ಹೇಮಣ್ಣ.

ಕಮಲಮ್ಮ — (ಗೋಣುಹಾಕಿ) ಸೈ. ಇಂಥವರಿಗೆ ಎಂತಹ ವರ ಮನೆತನಗಳಾದರೂ ಶಿಕ್ಕಾವು.

ಕನಕ — (ಕಮಲಮ್ಮನ ಕೈಗೆ ಪತ್ರಕೊಟ್ಟು) ತೋರಿಸು ನಿನ್ನ ಮಗನಿಗೆ ಈ ಪತ್ರ. ಎಷ್ಟು ಓದಿಕೊಂಡರೂ ಇನ್ನೂ ಅವನಿಗೆ ತನ್ನ ಸೋಶಲ್ ರ್ಯಾಂಕೇ ಗೊತ್ತಾಗಿಲ್ಲ. ಓದಿ ಮರುಳಾದಿಯೋ ಕೂರ್ಚಭಟ್ಟ ಎಂದಹಾಗೆ. ವಯ್ದು ತೋರಿಸು. ನಾನು ಕ್ಲಬ್ಬಿಗೆ ಹೋಗಿಬರುವೆ.

ಪ್ರವೇಶ

ಸುಬ್ಬಾ — (ಸುಬ್ಬಾಭಟ್ಟರು ಬಾಕಿಲವಿಕ್ಕಿದ ತಮ್ಮ ಮನೆಯ ಮುಂದೆ ನಿಂತು) ಏನೇ ಏ ಏನೇ (ಬಾಕಿಲ ತಟ್ಟಿ) ಲೇ ಏ ನಮ್ಮ ವಳೀ ತೆರೆ ಬಾಕಿಲ, ಏಕೆ ತೆರೆಯುವದಿಲ್ಲವೇ? ಎಲೇ ತೆರೆ ಬಾಕಿಲ ? ಆಂ ! ಇಷ್ಟು ಕೂಗಿಕೊಂಡರೂ ಇನ್ನೂ ಉತ್ತರವಿಲ್ಲ. ಸೊಕ್ಕು ಹೆಚ್ಚಾಗಿದೆ. ಮೈಯಲ್ಲಿನ ಸೊಕ್ಕು.

ಸರೋಜಾ ಸುಬ್ಬಾಭಟ್ಟನ ಹೆಂಡತಿ } — (ಹಿಂದೆ ನಿಂತು ಇವರ ಅಭಾರ್ಟವನ್ನು ಕೇಳಿ ಬೆನ್ನು ತಟ್ಟಿ) ಏನ್ರಿ ಏನದು ? ಯಾರನ್ನು ಕರೆದದ್ದು ? ಏನೆ ಎಲೆ ತಲೆ ಎಂದು ಯಾರ ಸಲುವಾಗಿ ಹೇಳಿದ್ದು ? ಯಾರ ಮೈಯಲ್ಲಿನ ಸೊಕ್ಕು ಹೆಚ್ಚಾಗಿದೆ ?

ಸುಬ್ಬಾ — (ಬೆಪ್ಪಾಗಿ ಬಾಯಿ ತೆರೆದುಕೊಂಡು) ಅಲ್ಲ ಮತ್ತೇ ನೀನಂದ್ರೇ ಮನೆ ಹಿತ್ತಲದಲ್ಲಿರಬಹುದೇನೋಂತ ಅಂದ್ಕೊಂಡಿದ್ದೆ.

ಸರೋಜಾ — ಬಾಕಿಲಕ್ಕೆ ಬೀಗವಿದ್ದದ್ದು ಕಾಣಲಿಲ್ಲವೇ ?

ಸುಬ್ಬಾ — (ಮೇಲೆ ನೋಡಿ) ಓಹೋ ನೋಡಲಿಲ್ಲ.

ಸರೋಜಾ — ಇದೋ ನಾನು ನಿಮಗೆ ಎಷ್ಟು ಸಾರೆ ಹೇಳಿದ್ದು ? ನಮ್ಮ ಸಲುವಾಗಿ ಹಾಗೆ ಮಾನಗೆಟ್ಟ ಮಾತುಗಳನ್ನು ಬಳಿಸಲಾಗದೆಂದು ? ನಾವು ನಿಮಗೆ ಮರ್ಯಾದೆಯನ್ನು ಕೊಡಬೇಕು ! ನೀವು ಮಾತ್ರ ನಮಗೆ ಏನೇ ಎಲೇ ತಲೇ ಎಂದು ಬಲ್ಲ ಹಾಗೆ ಹೇಳಬೇಕೇನು ?

ಸುಬ್ಬಾ — ಅಲ್ಲೇ ಮತ್ತೇನಂತಂದ್ರೆ ಅಂತರಂಗದಲ್ಲಿಯಂತೂ ಇಲ್ಲವೇ ಇಲ್ಲ, ಬಹಿರಂಗದಲ್ಲಿಯಾದರೂ ನಿನ್ನಂಥವಳ ಪತಿಯೆಂದೆನಿಸಿಕೊಳ್ಳುವದಕ್ಕೆ ಸಹಾ ನೀನು ನನಗೆ ಅವಕಾಶವನ್ನು ಕೊಡಬಾರದೇನು ?

ಸರೋಜಾ — ನೀವು ನನ್ನ ಪತಿಯಲ್ಲವೆಂದು ಹೇಳುವವರಾರು ? ಚನ್ನಾಗಿ ೪ ಸಾವಿರ ರೂಪಾಯಿಗಳನ್ನು ನನ್ನ ತಂದೆ ತಾಯಿಗಳ ಉಡಿಯಲ್ಲಿ ಹಾಕಿ ನನ್ನನ್ನು ಮಾರಲಿಕ್ಕೆ ತಕ್ಕೊಂಡಿರುವಾಗ್ಗೆ.

ಸುಬ್ಬಾ — ನೋಡು ನೋಡೂ ! ಅಷ್ಟು ರೂಪಾಯಿಗಳನ್ನು ಕೊಟ್ಟುಕೊಂಡಿರುವಾಗ್ಗೆ ನಿನ್ನೊಡನೆ ಗಂಡನಂತೆ ಸಹ ವರ್ತಿಸಬಾರದೆಂದರೆ ಅನ್ಯಾಯವಲ್ಲವೇ ?

ಸರೋಜಾ — ಗಂಡಂದಿರಾದ ಮಾತ್ರಕ್ಕೆ ಹೆಂಡಂದಿರನ್ನು ಬೋನಗಿತ್ತಿಯರಿಗಿಂತಲೂ ಕೀಳಾಗಿ ಕರಿಯಬೇಕೇನು ?

ಸುಬ್ಬಾ — ನಾನೊಬ್ಬನೇ ಹಾಗೆ ಕರೆಯುವೆನೇ ? ಏ ಸರೋಜಾ ನಾನೊಬ್ಬನೇ ಹಾಗೆ ಕರೆಯುವೆನೇ ? ಈ ಪದ್ಧತಿಯು ಅನಾದಿ ಕಾಲದಿಂದಲೂ ನಡೆದು ಬಂದಿದೆ. ಓದಿಲ್ಲವೇನೇ ರಾಮಾಯಣ ಭಾರತ ಭಾಗವತಾದಿಗಳಲ್ಲೀ ? ರಾಮನು ಸೀತೆಯನ್ನು ಹೇಗೆ ಕರೆದಿದ್ದಾನೇ? ಹರಿಶ್ಚಂದ್ರನು ತಾರಾಮತಿಯನ್ನು ಹೇಗೆ ಕರೆದಿದ್ದಾನೇ ? ಅಲ್ಲಾ ಮತ್ತೇನಂತಂದ್ರೇ ಸಾಕ್ಷಾಂತ್ ಆದಿನಾರಾಯಣನು ಲಕ್ಷ್ಮೀದೇವಿಯನ್ನು ಹೇಗೆ ಕರೆದಿದ್ದಾನೆ ?

ಸರೋಜಾ — ಆ ಪುರಾಣ ಕಾಲದ ನಡೆನುಡಿಗಳನ್ನಾದರೂ ಪ್ರಾಮಾಣಿಕವಾಗಿ ಅನುಸರಿಸುವಿರಾ ?

ಸುಬ್ಬಾ — ಓಹೋ ನಿಃಸಂದೇಹಾ. ಮತ್ತೆ ನೋಡ ಸರೋಜಾ, ಮತ್ತೇ ನಂತಂದ್ರೇ ನೀನಾದರೂ ಹಾಗೆಯೇ ಇದ್ದುದಾದರೆ ನೋಡ ಸರೋಜಾ ಬಂಗಾರಕ್ಕೆ ಕುಂದಣವಿಟ್ಟಂತಾದೀತು ?

ಸರೋ — ಸಂತೋಷದಿಂದ ಪುರಾಣ ಕಾಲಿನ ಆದರ್ಶ ನಾರಿಯರಂತೆ ವರ್ತಿಸುವೆನು ನಿಮಗೆ ಒಪ್ಪಿಗೆಯೋ ?

ಸುಬ್ಬಾ — ಅಯ್ಯೋ, ವಪ್ಪಿಗೆಯುಂದರೇನು ಸರೋಜಾ! ನೀನು ಹಾಗೆ ವರ್ತಿಸುವ ನಿರ್ಧಾರ ಮಾಡುವಿಯಾದರೆ ನೋಡ ಸರೋಜಾ ಅಹಲ್ಯಾ ದ್ರೌಪತೀ ಸೀತಾ ತಾರಾ ಮಂಡೋದರಿ ತಥಾ || ಎಂದು ಹೇಳುವದನ್ನು ಬಿಟ್ಟು || ಸರೋಜಾ ದ್ರೌಪತಿ || ಶೀತಾ ತಾರಾ ಮಂಡೋದರಿ ತಥಾ ಯುಂದು ಆಧುನಿಕ ಕವಿಗಳು ಬದಲಾವಣೆ ಮಾಡಿ ನಿಃಸಂಕೋಚವಾಗಿ ಹೇಳುವರು.

ಸರೋ — ಆಗಲಿ ಇನ್ನು ಮೇಲೆ ಹಾಗೆ ವರ್ತಿಸುವೆ.

ಸುಬ್ಬಾ — ಪ್ರತಿಜ್ಞಾಪೂರ್ವಕವಾಗಿ ವರ್ತಿಸುವಿಯಾ ?

ಸರೋ — ಪ್ರತಿಜ್ಞಾಪೂರ್ವಕವಾಗಿ ವರ್ತಿಸುವೆ.

ಸುಬ್ಬಾ — ತಪ್ಪಲಿಕ್ಕಿಲ್ಲವೇ ?

ಸರೋ — ಉಂಟೇ !

ಸುಬ್ಬಾ — (ಕೈಚಾಚಿ) ವಚನವನ್ನು ಕೊಡು.

ಸರೋ — ಇದೋ ಇನ್ನು ಮುಂದೆ ತಮ್ಮ ಹೇಳಿಕೆಯಂತೆ ಪುರಾಣ ಕಾಲದ ಹೆಣ್ಣು ಮಕ್ಕಳಂತೆ ವರ್ತಿಸುವೆನು. (ವಚನ ಕೊಡುವಳು)

ಸುಬ್ಬಾ — ಆದಾಯಿತು. ನೀನೆತ್ತ ಹೋಗಿದ್ದೇ ?

ಸರೋ — ಹೋಗಿದ್ದೆ ಹೆಣ್ಣು ಮಕ್ಕಳ ಸಭೆಗೆ, ಘಟಸ್ಫೋಟ ಬಿಲ್ ಕೌನ್ಸಿಲಿನಲ್ಲಿ ಬಂದಿದೆಯಷ್ಟೇ ? ಅದು ಪಾಸಾಗಬೇಕೆಂದು ನಮ್ಮ ಗ್ರಾಮದ

ಮಹಿಲಾ ಸಮಾಜದಿಂದ ಅಭಿಪ್ರಾಯ ಪಾಸು ಮಾಡಿಸಿ ಕಳುಹಿಸುವದಕ್ಕೆ ಹೋಗಿದ್ದೆ.

ಸುಬ್ಬಾ — ಅಂದರೇ ! ಘಟಸ್ಫೋಟ ಪದ್ಧತಿಗೆ ಬ್ರಾಹ್ಮಣತಿಯಾದ ನೀನೂ ಒಪ್ಪುವೆಯಾ ?

ಸರೋ — ಏಕೆ ಒಪ್ಪಬಾರದೋ ? ಏ ಸುಬ್ಬಾ ಏಕೆ ಒಪ್ಪಬಾರದೋ ?

ಸುಬ್ಬಾ — (ಕಕ್ಕವಿಕ್ಕಿಯಾಗಿ ಕಣ್ಣರಳಿಸಿ) ಯಲ! ಯಲ! ಯೇನು ಯೇನಿದು ಹಾಗೆ ಪಕ್ಕನೆ ಸುಬ್ಬಾ ಸುಬ್ಬಾ ಎಂದು ಹೇಳಿದರೇ ? !

ಸರೋ — ಸುಬ್ರಮ್ಹಣ್ಯಾ ! ಅದು ಪುರಾಣ ಕಾಲದ ಪದ್ಧತಿಯಲ್ಲವೇನೋ ? ಯಾವ ಪುರಾಣದಲ್ಲಿ ಪತಿಪತ್ನಿಯರು ಪರಸ್ಪರರಲ್ಲಿ ಬಹು ವಚನ ಬಳಿಸಿದ್ದಾರೆ ಹೇಳು ನೋಡುವಾ ?

ಸುಬ್ಬಾ — ಯೇನೇ ! ಯೇ ಯೇನೇ ! ಆ ಪೌರಾಣಿಕ ಸ್ತ್ರೀಯರಂತೆ ಹಿಂದೆ ಮುಂದೆ ಏನಾದರೂ ವಿಶೇಷಣಗಳನ್ನಾದರೂ ಹಚ್ಚಿ ಹೇಳೇ.

ಸರೋ — ಸಂತೋಷಾ. ಪ್ರಾಣಕಾಂತಾ ಸುಬ್ಬಾ ?

ಸುಬ್ಬಾ — (ಹೇಶಿಕೊಂಡು) ಅಯ್ಯಯ್ಯೋ ಮತ್ತೂ ಹೇಶಿಕೆ, ಏ ಸರೋಜಾ ದಯಮಾಡಿ ಮೊದಲಿನಂತೆ ಕರೆಯೇ !

ಸರೋ — ಮಮಚಿತ್ತಚಕೋರ ಚಂದ್ರಾ ಸುಬ್ಬಾ !

ಸುಬ್ಬಾ — ಸುಮ್ಮನಿರೇ ಜನಗಳು ಬಂದರೂ !

ಸರೋ — ಬಂದರೇನಾಯಿತು ಪ್ರಾಣಕಾಂತಾ ? ನಮಗೇನು ಭಯಾ ? ವಿಪ್ರ ಕುಲತಿಲಕಾ ಸುಬ್ಬಾ ! ವರ ಕನ್ಯಾ ಕ್ರಯ ವಿಕ್ರಯದಲ್ಲಿನ ದಲ್ಲಾಳಿಯಾದ ಸುಬ್ಬಾ ! ನನ್ನ ಸೌಭಾಗ್ಯ ಮಾತ್ರದಾ ಧಾರನಾದ ಸುಬ್ಬಾ !

ಸುಬ್ಬಾ — ಏ ಸರೋಜಾ ನನಗೆ ಕೈಜೋಡಿಸುವೆನೇ, ದಯಮಾಡಿ ಮೊದಲಿನಂತೆ ಕರೆಯೇ?

ಸರೋ — ಪತ್ನಿಗೆ ಪತಿಯು ಕೈಜೋಡಿಸಬಹುದೇನೋ ?

ಗಂಗಾ ಮತ್ತು ಕೆಲ ಹುಡುಗಿಯರು — (ಇವರು ಗೌರೀಮಂಡಲ ಸೆಕ್ರೆಟರಿ) ಇದೇನು ಸರೋಜಮ್ಮಾ? ಸುಬ್ಬಾಭಟ್ಟರಿಗೆ ಸುಬ್ಬಾ, ಸುಬ್ರಮ್ಹಣ್ಯಾ ಎಂದು ಕರೆಯುತ್ತಿರುವಿರೀ ?

ಸರೋ — ಸಹೋದರಿಯರೇ ! ಇದು ನಮ್ಮ ಪೂರ್ವದ ಪುರಾಣ ಕಾಲದ ಪದ್ಧತಿ. ಈ ನನ್ನ ಉಪಜೀವನಾಧಾರನಾದ ಸುಬ್ರಮ್ಹಣ್ಯನು ನನ್ನಿಂದ ಪುರಾಣ ಕಾಲದ ಹೆಂಗಳರಂತೆ ವರ್ತಿಸುವ ಪ್ರತಿಜ್ಞೆಯನ್ನು ಮಾಡಿಸಿದ್ದಾನೆ. ನೀವಾದರೂ ಲಗ್ನ ಮಾಡಿಕೊಂಡಮೇಲೆ ಹೀಗೆಯೇ ಮಾಡತಕ್ಕದ್ದೂ! (ಸುಬ್ಬಾ ಭಟ್ಟರ ಹೆಗಲಿಗೆ ಅಪ್ಪುಗ್ಯ ಇಕ್ಕಿ ಅಚ್ಛೆಯಿಂದ) ಪ್ರಿಯಕರಾ! ಸುಬ್ರಮ್ಹಣ್ಯಾ !!

ಸುಬ್ಬಾ — (ಬೆಚ್ಚಿ ಬಿದ್ದು ಹಣೆಬಡಿದುಕೊಂಡು) ಅಯ್ಯೋ ಅವಸ್ಥೇ ! (ಓಡುವನು)

ಹುಡಿಗೆಯರು — (ಚಪ್ಪಳೆಯಿಕ್ಕಿ ನಗುವಾಗ್ಗ)

ಗಂಗಾ — ಭಲಾ ! ಭಲಾ ಸರೋಜಮ್ಮಾ ಸುಬ್ಬಾಭಟ್ಟನಿಗೆ ಸರಿಯಾದ ಪ್ರಾಯಶ್ಚಿತ್ತವನ್ನು ಕೊಡುತ್ತಿರುವಿ ! ನಾಚಿಕೆಯಿಲ್ಲದವನು! ತಾನು ಅಶಿಕ್ಷಿತ ಮುದುವನಾಗಿ ನಿನ್ನಂಥ ವಿದುಷಿಯನ್ನು ಹಣದ ಬಲದಿಂದ ಮದುವೆಯಾದನಲ್ಲವೇ ! ಹಣವಂತರೆಲ್ಲರೂ ಹೀಗೆಯೇ ಬಾಲೆಯರ ಬಾಳನ್ನು ಹಾಳು ಮಾಡಬೇಕೇನು? ಮುಪ್ಪಿನ ಕಾಲದಲ್ಲಿ ಹೀಗೆ ಅನ್ಯಾಯವಾಗಿ ತರುಣಿಯರನ್ನು ಮದುವೆಯಾಗುವ ಮುದುಕರನ್ನು ತರುಣಿಯರು ಹೀಗೆಯೇ ಶನೇಶ್ವರನಂತೆ ಕಾಡಿ, ಅವರು ತಾವಾಗಿಯೇ ಉರುಲು ಹಾಕಿಕೊಂಡು ಸಾಯುವಂತೆ ಮಾಡಬೇಕು ಊರೂರಿಗೆ ಹಾಗೆ ಉರಲುಹಾಕಿಕೊಂಡು ಸತ್ತ ಮುದಿ ಪತಿಗಳ ಒಂದೆರಡು ಉದಾಹರಣೆಗಳುಂಟಾದರೇ ! ಕಾಯಿದೇ ಬೇಡಾ-ಕಾನೂನು ಬೇಡಾ-ತನ್ನಷ್ಟಕ್ಕೆ ತಾನೆ ಈ ಮುದುವ ತರುಣಿಯರ ವಿವಾಹಗಳು ನಿಂತೇ ಹೋಗುವವು. (ನಿಷ್ಕ್ರಾಂತ)

(ಪ್ರವೇಶ)

ಗೌರಿ ಮಂಡಲ ಆಫೀಸ

(ತರುಣಿಯರನೇಕರು ಕುಳಿತಿರುವರು. ಅಧ್ಯಕ್ಷ ಪೀಠದಲ್ಲಿ ಗೌರಿ ಇರುವಳು. ಸೆಕ್ರೆಟರಿ ಗಂಗಮ್ಮನು ತಕ್ಕಸ್ಥಳದಲ್ಲಿ ಕುಳಿತಿರುವಳು.)

ಗೌರಿ — (ಸಭೆಯ ಪದ್ಧತಿಯಂತೆ) ಸಹೋದರಿಯರೇ ಲಗ್ನವಾಗದ ಹೆಣ್ಣು

ಮಕ್ಕಳಿಗೆಲ್ಲಾ ಗೌರಿಯನ್ನುವ ಪರಿಪಾಠವಿದೆ. ಅಂತೇ ನಾವು ನಮ್ಮ ಸಂಘಕ್ಕೆ ಗೌರಿಮಂಡಲವೆನ್ನುವ ಸರ್ವ ಸಮ್ಮತವಾದ ಹೆಸರಿಟ್ಟಿದ್ದೇವೆ ಇದರ ಸದಸ್ಯರಾಗತಕ್ಕವರು ಪಾಲಿಸುವ ನಿಯಮಗಳ ವಿಚಾರವಾಗಿ ನಮ್ಮ ಸೆಕ್ರೆಟರಿ ಗಂಗಮ್ಮನವರು ಓದಿ ಹೇಳುವರು. ಒಪ್ಪಿಗೆ ಯಿದ್ದ ವರು ಹಾಗೆ ಷರಾ ಬರೆದು ರುಜು ಹಾಕತಕ್ಕದ್ದು. ಗಂಗಮ್ಮಾ, ಓದಿ ಮಂಡಳದ ನಿಯಮಗಳನ್ನು.

ಗಂಗಮ್ಮ — (ನಿಯಮಗಳನ್ನು ಓದುವಳು)

೧. ಸಹೋದರಿಯರೇ ವರದಕ್ಷಿಣೆಯನ್ನು ಕೊಡಿಸಿ ತವರು ಮನೆಗೆ ಬಡತನ ತರಿಸಿ, ಅಥವಾ ಕನ್ಯಾ ಶುಲ್ಕದಿಂದ ಮಾರಿಗೀ ಹೆಣ್ಣಾಗಿ ನಾವು ಲಗ್ನವನ್ನೆ ಮಾಡಿಕೊಳ್ಳತಕ್ಕದಲ್ಲವೆಂಬ ಮೊದಲಿನ ಪ್ರತಿಜ್ಞೆ.

೨. ಅನುರೂಪವರರನು ತಾನಾಗಿಯೇ ನಮ್ಮ ಮನವಲಿಸಿ ಧರ್ಮ ದಿಂದ ಮದುವೆಯಾಗುವತನಕ ನಾವು ಪರಿಶುದ್ಧವಾದ ಬ್ರಹ್ಮಚರ್ಯ ವ್ರತದಲ್ಲಿದ್ದು ರಾಷ್ಟ್ರಸೇವೆ ಮಾಡತಕ್ಕದ್ದು.

೩. ಬ್ರಹ್ಮಚರ್ಯ ವ್ರತವನ್ನು ಮನಃಪೂರ್ವಕ ಪಾಲಿಸಲು ಯಾರು ಅಸಮರ್ಥರೋ ಅಂಥವರು ನೀತಿಬಾಹಿರವಾದ ವ್ಯಭಿಚಾರಕ್ಕೆ ಅವ ಕಾಶಕೊಡದೆ, ಸ್ವಜಾತಿಯ ಒಬ್ಬ ಬಡವನನ್ನಾದರೂ ವರಿಸಿ ಕೂಲಿ ಕುಂಬಳಿಯಿಂದ ಹೊಟ್ಟೆ ತುಂಬಿಕೊಂಡು ನಮ್ಮ ಸಂಘದಿಂದ ಬೇರೆ ಯಾಗಿದ್ದು ಕೈಲಾದಮಟ್ಟಿಗೆ ದೇಶಸೇವೆ ಮಾಡತಕ್ಕದ್ದು.

ಮುಖ್ಯ ವಿಚಾರಗಳನ್ನಂತೂ ಓದಿ ಹೇಳಿದೆವು ಇಷ್ಟ ಇದ್ದವರು ವಪ್ಪಿಗೆಯ ಷರಾ ಬರೆದು ಪ್ರತಿಜ್ಞಾ ಪತ್ರದಲ್ಲಿ ರುಜು ಮಾಡತಕ್ಕದ್ದು. (ಹುಡಿಗೆಯರು ಒಬ್ಬೊಬ್ಬರಂತೆ ಷರಾ ಬರೆದು ರುಜು ಮಾಡುತ್ತಿರುವಾಗ್ಗ-ಗೌರಮ್ಮನ ತಾಯಿ ವಸುಂಧರಾದೇವಿ ಬಾಕಿಲಲ್ಲಿ ಬಂದು ನಿಂತು ನೋಡಿ ಆಶ್ಚರ್ಯ ಪಡುತ್ತಿರು ವಳು.)

ಗಂಗಾ — ಗೌರಮ್ಮಾ! ನಿನ್ನ ತಾಯಿ ವಸುಂಧರಾ ದೇವಿ ಏತಕ್ಕೊ ಬಂದಿ ದ್ದಾಳೆ ನೋಡು.

ಗೌರಿ — ಏನಮ್ಮಾ ಬಂದೆ ?

ವಸುಂಧರಾ — (ಗೌರಿಯು ಕರೆಯುವ ಕಿವಿಗೆ ಬೀಳದಂತೆ ನಟಿಸಿ) ಎಲ್ಲ ಹುಡುಗೆಯರೂ ಲಗ್ನವಾಗದವರೇ ! (ಆಶ್ಚರ್ಯದಿಂದ ಕೈತಿರುಹುವಳು.)

ಗೌರಿ — ಓ ಅವ್ವಾ ! ಬಂದುದೇಕೆಇಂತಾ ?

ವಸುಂಧರಾ — (ಮಗಳ ಕಡೆಗೆ ಹೋಗುವಾಗ್ಗೆ) ಯೇನು ಚಳವಳಿಯೋ ಯೇನೊ! (ಗೌರಿಗೆ) ಇದೋ ಬ್ಯಾಂಕರ ಕನಕರಾಯರ ಮನೆಯಲ್ಲಿ, ನಿನ್ನ ಲಗ್ನ ನಿಶ್ಚಯ ಹಾಕತಕ್ಕವರಿದ್ದಾರೆ; ಬೇಗ ನಡೆ ಮಗೂ ಜನಕಾಯ್ದಿದೇ !

ಎಲ್ಲರೂ — ಏನು ? ಗೌರಮ್ಮನ ಲಗ್ನ ನಿಶ್ಚಯವೇ ?

ವಸುಂಧರಾ — ಅಹುದಹುದು ಯಲ್ಲರೂ ಬನ್ನಿ. ಹೂಂ ನಡೆ ಮಗು ಬೇಗಾ.

ಗೌರಿ — ಸಹೋದರಿಯರೇ ! ಬನ್ನಿ ಬನ್ನಿ ಹೋಗುವಾ.

|| ಪದ || ರೂಪತಾಳ ||

ಎಲ್ಲರೂ ನೋಡೂವ ಬನ್ನಿರೆ ಅಕ್ಕನ ಸೋಗು
ಅಂಗಳದೇ ಅಂಗನೆಯರೇ ||

ಗೌರಿ— (ಚಲತಿ ತ್ರಿವಟ) ಭರದಿ ಬನ್ನಿರೆ ಯನ್ನ ಪರಿಕ್ಷೆಯ ಕಾಲವು
ಬಂದಿಹುದೇ |
ತೀರ್ಗಡೆಯೂಗದೆ ಬಿಡುವೆನೆ ಈ ದಿನ | ನಿರ್ಧರ ಮನದಿಂದೆ ||

ಎಲ್ಲರೂ — ನೋಡುವ ಬನ್ನೀರೆ ||

ಗೌರಿ — ಮಾತಿನಂತೆ ಕೃತಿಯಾಗದ ಮನುಜರು ಏತಕೆ ಬಾಳುವದೇ |
ಕೃತಿಚೇತನವಿಲ್ಲದವರು ಯೇತಕೆ ಮಾತನು ಬಳಿಸುವದೇ ||

ಎಲ್ಲರೂ — ನೋಡುವ ಬನ್ನಿರೆ ||

ಗೌರಿ — ಗೌರಿ ಮಂಡಲಾಧ್ಯಕ್ಷ ಪದದ ಹೊಣೆಗಾರಿಕೆಯರುವಿಹುದೆ |
ಸಾರಿ ಪೇಳ್ವಿನದರವಮಾನವು ತಾನಾಗದು ಯನ್ನಿಂದೇ ||

ಎಲ್ಲರೂ — ನೋಡೂವ ಬನ್ನಿರೆ ಅಕ್ಕನ ಸೋಗು || (ಹೋಗುವರು.)

ಪ್ರವೇಶ–ಬೀದಿ

(ಸರೋಜಮ್ಮ ಮೊಣಕಾಲಮಟ್ಟಕ್ಕೆ ವಲ್ಕಲವನುಟ್ಟು, ಕುಪ್ಪಸಕ್ಕೆ ಬದಲು ಒಂದು ಗೇಣು ಬಟ್ಟೆ ಬಿಗಿದುಕೊಂಡು ಪುರಾಣ ಕಾಲದ ವೈದಿಕ ಮುತ್ತೈದೆಯ ವೇಷದಲ್ಲಿ ಗೌರಿಯ ನಿಶ್ಚಯ ಸಮಾರಂಭಕ್ಕೆ ಹೊಂಡುತ್ತಾಳೆ. ಸುಬ್ಬಾ ಜೋಯಿಸನು ಅವಳಿಗೆ ಅಡ್ಡಿ ಮಾಡುವಂತೆ.)

ಸುಬ್ಬಾ — ಬರಲಾಗದು ಸರೋಜಾ ನೀನೀ ವೇಷದಲ್ಲಿ, ನಾಲ್ಕು ಜನ ಮಧ್ಯೆ ಬರಲಾಗದೊಂದ್ರೆ !

ಸರೋ — ಸುಬ್ರಮ್ಹಣ್ಯಾ! ಇದು ರಾಮಾಯಣ ಕಾಲದ ವೈದಿಕ ಬ್ರಾಹ್ಮಣತಿಯರ ಉಡುಪು. ನಾನು ಯಾವಾಗಲೂ ಇದೇ ಉಡುಪಿನಲ್ಲಿರುವ ನಿರ್ಧಾರ ಮಾಡಿರುವೆ.

ಸುಬ್ಬಾ — ಸರೋಜಾ, ಇದೋ ನಿನಗೆ ಕೈಜೋಡಿಸುವೆನೇ. ದಯಮಾಡಿ ನಾಲ್ಕು ಜನಗಳಲ್ಲಿ ನನ್ನ ಮರ್ಯಾದೆಯನ್ನು ಕಳೆಯಬೇಡವೇ ! ಅಲ್ಲದೇ ಸುಬ್ಬಾ-ಸುಬ್ರಮ್ಹಣ್ಯಾ-ಎಂದು ಎಳೇ ಮಕ್ಕಳನ್ನು ಕರೆಯುವಂತೆ ನನ್ನಂಥ ಹಣ್ಣು ಮುದುಕನನ್ನು ಕರೆಯುವದೆಂದರೇನು ?

ಸರೋ — ಏನು ನಲ್ಲಾ ಹಾಗೆ ಹೇಳಿದರೇ ! ಈಗ್ಗೆ ತಾನೆ ಪ್ರಾಯದಲ್ಲಿ ಕಾಲಿಟ್ಟ ನನ್ನ ಪತಿಯಾದ ನೀನು ಹಣ್ಣು ಮುದುಕನೇ ?

ಸುಬ್ಬಾ — ಮಾಡುವದೇನು ಸರೋಜಾ ಮಾತು ಮಿಂಚಿದೆ. ನಿನ್ನನ್ನು ಮದುವೆಯಾದಾಗಲೇ ನನ್ನ ಬುದ್ಧಿ ಹೋಯಿತು.

ಸರೋ — ಹಾಗಂದರೇನು ಪ್ರಿಯಾ, ನನ್ನನ್ನು ಮದುವೆಯಾದ ನಿನಗೆ ಚನ್ನಾಗಿ ಬುದ್ಧಿ ಬಂತೆಂದು ಹೇಳಬಾರದೇ ? ನಿನ್ನಂಥ ಪುರಾಣ ಪ್ರಿಯ ಪುರಾತನ ಪುರಾಣಪುರುಷನ ಸದ್ಬೋಧದಿಂದ. ಸತ್ಸಮಾಗಮದಿಂದ ದಿನಕ್ಕೊಂದು ಚಂದ ಅಂತರ್ಬಾಹ್ಯ ನಾನು ಸಹ ಪುರಾಣ ಕಾಲದಾದರ್ಶನಾರಿಯಾಗುವದಲ್ಲದೇ ನಿನ್ನನುಗ್ರಹವಿದ್ದರೆ ಎಲ್ಲ ಆಧುನಿಕ ನಾರೀ ವರ್ಗವನ್ನು ನನ್ನಂತೆಯೇ ಮಾಡುವೆನು.ಪ್ರಿಯಾ ಸುಬ್ರಮ್ಹಣ್ಯಾ ನನಗೆ ಮತ್ತೊಂದಾಲೋಚನೆ ಹೊಳೆದಿದೆ, ಹೇಳಲೋ ?

ಸುಬ್ಬಾ — (ಬೇಜಾರ ಸ್ವರ) ಅದೇನು ಮತ್ತೇ ?



ಹೂಂ! ತೆಗೆದೊಗೆ !....ವಸ್ತ್ರ............ತೆಗೆದುಕೋ ಈ ಕೌಪೀನ ! (ಪುಟ ೧೩)

ಸರೋ! — ನಾವು ಪುರಾಣಕ್ಕಿಂತಲೂ ನಾಲ್ಕು ಮಾರು ಹಿಂದಕ್ಕೆ ಸರಿದು ವೇದ ಕಾಲದ ಆಚಾರ ವಿಚಾರಗಳನ್ನು ಪ್ರಚಾರದಲ್ಲಿ ತರುವದು ಮತ್ತೂ ಶ್ರೇಯಸ್ಕರವಾಗಲಿಕ್ಕಿಲ್ಲವೇ ?

ಸುಬ್ಬಾ — ಅದು ಹೇಗೆ ?

ಸರೋ — ವೇದಕಾಲದಲ್ಲಿ ಹೆಣ್ಣು ಮಕ್ಕಳು ಕುಪ್ಪಸಗಳನ್ನೇ ತೊಟ್ಟು ಕೊಳ್ಳುತ್ತಿರಲಿಲ್ಲ. ಸೊಂಟಕ್ಕೆ ಬರೇ ಒಂದು ನಾಲ್ಕು ಮೊಳದ ಬಟ್ಟೆಯ ತುಂಡನ್ನು ಮಾತ್ರ ಸುತ್ತಿಕೊಳ್ಳುತ್ತಿದ್ದರು. ಮತ್ತೆ ಪುರುಷರು ಅರಣ್ಯ ವಾಸಿಗಳಾಗಿ ಮುಖ ಮತ್ತೂ ತಲೆಗಳ ಮೇಲೆ ಗಡ್ಡಮೀಸೆ ಜಡೆಗಳ ಅರಣ್ಯವನ್ನು ಬೆಳಿಸಿ, ಗೆಡ್ಡೆ ಗೆಣಸು ಮಾಂಸ ಮತ್ಸ್ಯಾಹಾರ ಮಾಡುತ್ತ ಮರ್ಯಾದೆ ಮುಚ್ಚಿಕೊಳ್ಳುವ ಮಟ್ಟಿಗೆ ಒಂದು ಲಂಗೋಟಿ ಯನ್ನು ಮಾತ್ರ ಧರಿಸುತ್ತಿದ್ದರು. ನಾವು ಸಹ ಇನ್ನು ಮೇಲೆ ಹಾಗೆಯೇ ಇರುವ ನಿರ್ಧಾರ ಮಾಡಿ ಮತ್ತೂ ಪೂಜ್ಯರೆಂದೆನಿಸಿ ಕೊಳ್ಳುವಾ

ಸುಬ್ಬಾ - ಅಂತೂ ಇಂತೂ ನನ್ನನ್ನು ಊರಲ್ಲಿ ಇಲ್ಲಗೊಡಬಾರದೆಂಬ ನಿನ್ನ ಸಂಕಲ್ಪವೆಂದು ಕಾಣುತ್ತೆ.

ಸರೋ — ಅದೇ ಸತ್ಯ ಸಂಕಲ್ಪವು; ಅರಣ್ಯವೇ ವೈದಿಕರಾದ ನಮ್ಮಗಳ ಸನಾತನ ವಸತಿ. ಅದಕ್ಕಾಗಿ ಉಭಯರೂ ನಖಶಿಖಾಂತ ವೈದಿಕರಾಗುವಾ. ಹೂಂ! ತೆಗೆದೊಗೆ! ಮೈಮೇಲಿನ ಈ ಆಧುನಿಕ ವಸ್ತ್ರಪ್ರಾವರ್ಣಗಳನ್ನು ಮತ್ತೂ ತೆಗೆದುಕೋ ಈ ಕೌಪಿನ. (ಲಂಗೋಟಿ ಕೊಡುವಾಗ್ಗೆ ಉಟ್ಟ ಧೋತರ ಜಗ್ಗುವಳು.)

ಸುಬ್ಬಾ — ಬೇಡಾ ಮುಪ್ಪಿನ ಕಾಲದಲ್ಲಿ ನನ್ನ ಮರ್ಯಾದೆ ಕಳೆಯಬೇಡ ಸರೋಜಾ !

ಸರೋ — ಅಯ್ಯೋ ನಿನಗೆ ಮುಪ್ಪು! ಋಷಿ ಸಂತಾನನಾದ ನಿನಗೆ ಮುಪ್ಪು!! ಎಲ್ಲಿಯಾದರೂ ಉಂಟೇ ? ಸದಾ ಹರೆಯದವರಾಗಿರುವದಕ್ಕೆ ನಿಮಗೆ ಕಾಯಕಲ್ಪ ಸಾಧನವಿದೆ. ಚ್ಯವನಪ್ರಾಶ್ಯ ಲೇಹವಿದೆ. ಆ ಚ್ಯವನ ಪ್ರಾಶ್ಯ ಲೇಹವಂತೂ ನಿನ್ನ ಚಿರಪರಿಚಿತವಾದ ವಸ್ತು.

ಸುಬ್ಬಾ — ಏನಾದರೂ ಅಂದುಕೊ. ಸದ್ಯಕ್ಕೆ ನೀನು ಮನೆಯೊಳಗೆ ನಡೆ ಬೀದಿಯಲ್ಲಿ ಬೇಡಾಂದ್ರೆ ?

ಸರೋಜ — ಹಾಗಂದರೇನು ಪ್ರಿಯಾ? ವಶಿಷ್ಠನ ಜೊತೆಯಲ್ಲಿ ಯಾವಾಗಲೂ ಅರುಂಧತಿ ಯಿರುವಂತೆ ನಿನ್ನ ಹತ್ತರ ನಾನಾದರೂ ಇರುವ ನಿರ್ಧಾರ ಮಾಡಿದ್ದೇನೆ. ಇದೋ, ಬ್ಯಾಂಕರ ಕನಕರಾಯರ ಮಗ ಶೂಲಪಾಣಿಯು ಸಲುವಾಗಿ, ಧರ್ಮರಾಯರ ಮಗಳಾದ ಗೌರಿಯ ನಿಶ್ಚಯ ಹಾಕಿಸುವ ಶುಭಕಾರ್ಯಕ್ಕಾಗಿ ಹೊರಟ ನಿನ್ನ ಜತೆಯಲ್ಲಿ ನಾನಿರಬಾರದಂದ ರೇನು ?

ಸುಬ್ಬಾ — ಇರಬಹುದು! ಆದರೇ ಈ ಮಾನಗೆಟ್ಟ ವೇಷದಲ್ಲಿ ಬೇಡಾsಂತ.

ಸರೋಜ — ಇದು ಬೇಡವಾದರೇ, ಆ ಮೂರು ಬಣ್ಣದ ಉಡುಪನ್ನುಡಲೊ?

ಸುಬ್ಬಾ — ಏನು! ಗಾಂಧೀ ಶೀರೆಯನ್ನೇ ?

ಸರೋಜ — ಅಹುದು.

ಸುಬ್ಬಾ — ಊಂ ಆಗಲಿ, ಮಾತ್ರ ಹೊಲೆಗೇರಿಯನ್ನು ಸೇರಬೇಡಾ.

ಸರೋಜ — ಅನೆಂತಾಗುವದು. ನುಡಿಯಂತೆ ನಡೆ, ವೇಷದಂತೆ ಭಾಷೆ ಇರಲೇ ಬೇಕಲ್ಲವೇ ! ಪ್ರಿಯಾ ಸುಬ್ಬಾ, ನಾವೀರ್ವರೂ ಪುನಃ ವೈದಿಕ ಯುಗ ವನ್ನು ಸ್ಥಾಪಿಸುವದಕ್ಕಾಗಿ ಹಗಲಿರುಳೂ ದುಡಿಯುವದು ಲೇಸಲ್ಲವೇ ? ಹೂಂ ಹೇಳು ಬೇಗ, ಗಾಂಧೀಯುಗವೋ ಯೇನು ವೈದಿಕ ಯುಗವೋ ? ಯಾವದನ್ನಾರಂಭಿಸಬೇಕು ?

ರಾಮಜಿ — (ಬ್ಯಾಂಕರರ ಶಿಪಾಯಿ) ಜ್ಯೋತಿಸ್ಯರೇ, ಬೇಗ ಬನ್ನಿಯಪ್ಪಾ ದಣೀ ಶಿಟ್ಟಾಗುತಾರೇ.

ಸುಬ್ಬಾ — ಬಂದೆ ನಡೆ.

ರಾಮಜಿ — ಅಯ್ಯೋ ಇದೇನು ಸರ್ಜನ್ನೋರು ಅರಬೆತ್ಲೇ ?

|| ಪದ ||

ಜರಹಳು ಜಪುನ ಚಲ ಬಾಯೀಗ || ಎಂಬೋ ಮಟ್ಟು ||

ಸರೋಜ — ಉಡುಪಿದೂ ವೈದಿಕರ ಮನ್ನಣೆಯಾ | ಪಡೆದಿಹೆ ಉಡಲು || ಕೇಳನುಮತಿಯಾ || ಪಲ್ಲ ||

ರಾಮಜಿ — ಹೀಗುಡೋದಕ್ಕೆ ಜ್ಯೋಸರೇ ಹೇಳಾರ್ರೀ ?

ಸರೋಜ — (ಮೇಲಿನ ಮಟ್ಟಿನ ನುಡಿ) — ವೈದಿಕಪೆಣ್ಮಕ್ಕಳು ಉಡ ಬಾರದು ಮೊಣಕಾಲ್ಕೆಳಗೆ || ಸೋದರನೇ ಸೀರೆಯನು ಕುಪ್ಪಸವಿಲ್ಲ ವರ್ಗಳಿಗೆ ||

ರಾಮಜಿ — ಯೇನ್ಮಪ್ಪಾ ತೊಟ್ಕೊಳ್‌ಬಾರದ್ರೀ ?

ಸರೋಜ — ಹೂಂ ! ಹೂ !!

ರಾಮಜಿ — ವಡ್ರಂತೆ ಹಾಗೇ ಇರಬೇಕ್ರೆ ?

ಸರೋಜ — ಅಹುದು (ರಾಮಜಿ ಹಣೆಬಡಿದು ಕೊಳ್ಳುವನು.) ಮುಂದೆ ಕೇಳು ಕರೆವರೋ | ಕರೆವರೊ ಏಕವಚನದಿ ಪತಿಯಾ ||

ಸುಬ್ಬಾ — ರಾಮುಜೀ ! ಇವಳಿಗೆ ಈಚೀಚೆಗೆ ಬುದ್ಧಿಭ್ರಂಶವಾಗುತ್ತದೆ.

ಸರೋಜ — ಹಾಗಂದರೇನು ಪ್ರಾಣಕಾಂತಾ ಸುಬ್ಬಾ.

ರಾಮಜಿ — ಅಯ್ಯಯ್ಯೋ ! ಜ್ಯೋಸರಿಗೆ ವಂಟ್ಬಿಸರು ! ಅದು ಮಾಡಿ ಕೊಂಡ್ಹೋನ್ರಿ !!

ಸುಬ್ಬಾ — ನಾನು ಹೇಳಿದೆನಲ್ಲವೇ ಬುದ್ಧಿಭ್ರಂಶವಾಗಿದೆಯೆಂದು ಹೂಂ, ನಡೆ.

ರಾಮಜಿ — ಅಯ್ಯೋ ಹೆಂತಾ ಹೆಣ್ಮಗಳ ತಲೆಕೆಟ್ಬಿಬಟ್ತಿಲ್ಲಾ !

ಸರೋಜ — (ನಕ್ಕು) ಅಯ್ಯಾ ನನ್ನ ತಲೆ ಕೆಟ್ಟಿಲ್ಲಾ. ಹೂಂ. ನಡೆ ಯಜ ಮಾನರ ಮನೆಗೆ ಹೋಗುವಾ.

ಸುಬ್ಬಾ — ನೀನು ಬೇಡವೇ ಮನೆಯಲ್ಲಿರು.

ಸರೋ — ಇದೇನು ಸುಬ್ರಮ್ಹಣ್ಯಾ ? ಮಂಗಲ ಕಾರ್ಯಕ್ಕಾಗಿ ಹೊರಟ ನಿನ್ನ ಜೊತೆಯಲ್ಲಿ ನಾನು ಬೇಡವೇ ? ಅದೆಂತಾಗುವದು ವಶಿಷ್ಠ ನಿದ್ದಲ್ಲಿ ಅರುಂಧತೀ.

ಸುಬ್ಬಾ — ಸರ್ವಥಾ ಬೇಡಾಯೆಂದ್ರೆ.

ಸರೋ — ಅದಾಗದು ನಾನೂ ಬರತಕ್ಕವಳೇ.

ರಾಮುಜಿ — ಅಯ್ಯೋ ಗಾಂಧೀ ಜನ್ರಂತೆ ಸತ್ಯಾಗ್ರಹ ನಡಿಸಿ ಬಿಟ್ರಲ್ಲ !

ಸರೋ — ಸತ್ಯಗ್ರಹವನ್ನು ಪಾಲಿಸಬೇಕಾದರೇ ಆಗ್ರಹವು ಬೇಕೇಬೇಕು ರಾಮುಜೀ.

ರಾಮುಜಿ — ಬರ್ಲಿ ಬಿಡಿ ಜ್ಯೋಯ್ಸರೇ.

ಸರೋ — ಹೂಂ. ನಡೆ ರಾಮುಜೀ ನಾನು ಮುಂದಾಗುವೆನು.

ಸುಬ್ಬಾ — (ಹಣೆ ತಟ್ಟಿಕೊಂಡು) ಅವಸ್ಥೇ, ಅವಸ್ಥೇ, (ನಿಷ್ಕ್ರಾಂತ)

—: ಬ್ಯಾಂಕರನ ಮನೆ :—

ಬ್ಯಾಂಕರ — (ಯದ್ವಾ ತದ್ವಾ ಬರುವ ಸರೋಜಮ್ಮನನ್ನು ನೋಡಿ) ಏನು ಸರೋಜಮ್ಮನವರೇ ವಿದ್ಯಾವತಿಯುರಾದ! ನೀವು, ಹೀಗೆ ಬಹಿರಂಗವಾಗಿ ನಾಚಿಗೆ ಬಿಟ್ಟು ನಡಿಯಬಾರದು.

ಸರೋ — ಗುಟ್ಟಿನಲ್ಲಿ ನಡೆಯಬಹುದೇನು ? ಬ್ಯಾಂಕರರೇ ? ಈಗ ನನ್ನ ಜೀವನೇಶ ಸುಬ್ರಮ್ಹಣ್ಯನು ಸನಾತನ ಋಷಿಸಂತಾನದಂತೆ ವರ್ತಿಸುವದಕ್ಕಾಗಿ ನನ್ನಿಂದ ಪ್ರತಿಜ್ಞೆಯನ್ನು ಮಾಡಿಸಿದ್ದಾನೆ. ನನ್ನೀ ವೇಷವು ಪುರಾಣ ಕಾಲದ ಆದರ್ಶ ನಾರಿಯುರದು. ಸಹೋದರಿಯರೇ ಋಷಿಸಂತಾನರಾದ ನೀವೆಲ್ಲರೂ ಇನ್ನು ಮೇಲೆ ನನ್ನಂತೆ ಉಡುಪು ಮಾಡತಕ್ಕದ್ದು ಬಲ್ಲಿರೋ ?

ಧರ್ಮರಾಯು — ವಿದುಷಿಯುರಾದವರಿಗೆ ಹೆಚ್ಚಾಗಿ ಯೇನು ಹೇಳುವದು.

ಬ್ಯಾಂಕರ — ಹೂಂ. ಪುರೋಹಿತರೇ ! ನಿಶ್ಚಯದ ಕಾರ್ಯಕ್ರಮಗಳು ಜರುಗಲಿ.

ಸುಬ್ಬಾ — ವಧು ಪಕ್ಷೀಯರಾದ ಧರ್ಮರಾಯುರಲ್ಲಿಯೂ.

ಸರೋಜ — ಹಂ. ನಿಲ್ಲಿಸಿ, ವೈದಿಕ ವಿಚಾರಗಳನ್ನು ಕನ್ನಡ ಮಾತಿನಲ್ಲಿ ಹೇಳಬಾರದು. ದೇವಭಾಷೆಯಾದ ಸಂಸ್ಕೃತದಲ್ಲಿ ಹೇಳಿ.

ಧರ್ಮ — ಇರ್ಲಿ ಬಿಡಿ ಸರೋಜಮ್ಮನವರೇ?

ಸರೋಜ — ಹಾಗಂದರೇನು ಧರ್ಮಣ್ಣನವರೇ–ವಕ್ರತುಂಡ ಮಹಾ ‖ ಕಾಯ ಸೂರ್ಯಕೋಟಿ ಸಮಪ್ರಭ‖ ಎಂದು ಹೇಳದೇ ‖ ಸೊಟ್ಟ ‖ ಮೋರೆ

ದೊಡ್ಡ ಹೊಟ್ಟೆ ಕೋಟಿ ಸೂರ್ಯನ ಬೆಳಕಿನ। ಕಡಬು ತಿನ್ನುವ ಗಣಪಯ್ಯಾ ಎಡರು ಬರದಂತೆ ನೋಡಿಕೋ ॥ ಎಂದು ಅಮಂಗಲ ಕನ್ನಡ ಮಾತಿನಲ್ಲಿ ಹೇಳಿದರೇ ತಮ್ಮನ್ನು ಬೈಯುವರೆಂದು ದೇವರುಗಳು ಸಿಟ್ಟಾಗಲಿಕ್ಕಿಲ್ಲವೇ ?

ಕನಕ — (ಬೇಜಾರ ವ-ತ್ತು. ಸಿಟ್ಟು) ದಯವಿಟ್ಟು ಸುಮ್ಮನಿರಿಯಮ್ಮಾ ಹೂಂ. ಮುಂದರಿಸಿ.

ಸುಬ್ಬಾ — ಇದೋ ಸಮಸ್ತ ದೈವಾಚಾರದವರೂ ಕೇಳತಕ್ಕದ್ದು. ಜಮೀನ ದಾರರು ಮತ್ತು ಬ್ಯಾಂಕರರಾದ ಶ್ರೀಮಾನ ಕನಕರಾಯರು ತಮ್ಮ M A. ಪಾಸಾದ ಮಗ ಶೂಲಪಾಣಿಯು ಸಲುವಾಗಿ ಧರ್ಮರಾಯರ ಮಗಳಾದ ಗೌರಮ್ಮನನ್ನು ನಿಶ್ಚಯಿಸಿ ಲಗ್ನ ಮಾಡತಕ್ಕದ್ದು.

ಸರೋಜ — (ಬೆರಳು ಎಣಿಸಿ) ಒಂದೊ—

ಸುಬ್ಬಾ — ವರದಕ್ಷಿಣೆ ೫ ಸಾವಿರ ರೂಪಾಯಿ ರೋಖ. ಇಲ್ಲವೇ ಅಷ್ಟು ಬೆಲೆ ಬಾಳುವ ಭೂಮಿ ಸೀಮೆಗಳನ್ನು ಅಳಿಯನ ಹೆಸರಿನಲ್ಲಿ ಪಟ್ಟೆ ಮಾಡಿಸ ತಕ್ಕದ್ದು.

ಸರೋ — ಎರಡೋ—

ಸುಬ್ಬಾ — ಬೀಗಿತ್ತಿ, ಕಳಸಗಿತ್ತಿಯರ ಬಾಬಿಗಾಗಿ ೧ ಸಾವಿರ ರೂಪಾಯಿ ವೆಚ್ಚ ಮಾಡತಕ್ಕದ್ದು.

ಸರೋ — ಮೂರೋ—ಅಂತೂ ಗೌರಿಯು ಆರು ಸಾವಿರ ರೂಪಾಯಿ ಗಳನ್ನು ಕೊಟ್ಟು ಶೂಲಪಾಣಿಯನ್ನು ಕೊಂಡುಕೊಳ್ಳಬೇಕೆಂದಾ ಯಿತು.

ಸುಬ್ಬಾ — ಅಂದರೇ ವರನೆಂದರೇನು ಪಶುವೇ ?

ಸರೋಜ — ಪಶುವಾಗದಿದ್ದರೇ ಗುಲಾಮನಾಗಲಿ: ಅಂತೂ ಈ ಸುಧಾರಿಸಿದ ಇಪ್ಪತ್ತನೇ ಶತಮಾನದಲ್ಲಿ ಸಹಾ ಗುಲಾಮರ ವ್ಯಾಪಾರವು ಅವ್ಯಾ ಹತ ನಡೆಯುತ್ತಿರುವದೂ ಸೋಜಿಗವೇ.

ಸುಬ್ಬಾ — ಮಿಕ್ಕ ಪ್ರಸ್ತ ಪ್ರಯೋಜನಗಳನ್ನು ಯಾರದವರೆ ನೋಡಿ ಕೊಳ್ಳತಕ್ಕದ್ದು. ಇತಿ ನಿಶ್ಚಯ ಕಾರ್ಯೇ ಶುಭ ಸಂವತ್ಸರೇ, ಶುಭ ಮಾಸೇ.

ಪರೋ — (ಅದೇ ಸಂಕಲ್ಪದ ಸಮುಸ್ಯೆಯನ್ನು ಪೂರ್ಣ ಮಾಡುವ ಸೊಲ್ಲಿನಲ್ಲಿ || ಶುಭ ಪಕ್ಷೇ, ಶುಭವಾಸರೇ, ಶುಭಯೋಗೇ, ಶುಭ ಕರ್ಣೇ, ಯೇವಂ ಗುಣ ವಿಶೇಷಣ ವಿಶಿಷ್ಟಾಯಾಂ. || ಶುಭ ತಿಥೌ ವಧುವರ ಲೇವಾದೇವಿ ವ್ಯವಹಾರ ಪತ್ರೇ ವಧು ಪಿತೃನ್ ಸಹೀಂ ಕೃತ್ವಾ ತದ ನಂತರೇ ರಿಜಿಸ್ಟರಂ | ಕುರ್ಯಾತ್ ||

ಸುಬ್ಬಾ — (ಅವಳ ಮಾತಿನ ಕಡೆಗೆ ಲಕ್ಷ್ಯಗೊಡದೆ) ಬನ್ನಿ ಧರ್ಮಣ್ಣನವರೇ, ಹೀಗೆ ಪೂರ್ವಾಭಿಮುಖವಾಗಿ ಕುಳಿತುಕೊಳ್ಳಿ; ನಿಮ್ಮ ಕುಲಸ್ವಾಮಿಯನ್ನು ಧ್ಯಾನಿಸಿ, ಈ ಪತ್ರಿಕೆಗೆ ಸಹಿಯಿಕ್ಕಿ.

ಧರ್ಮಣ್ಣ — (ಪುರೋಹಿತನಸೂಚನೆಯಂತೆ ಕುಳಿತು ಸಹಿ ಮಾಡುವಷ್ಟರಲ್ಲಿ)

ಗೌರಿ — (ಧರ್ಮಣ್ಣನ ಕೈಯೊಳಗಿನ ಲೆಖ್ಖಣಿಕೆಯನ್ನು ಕಸಿದೊಗೆದು) ನಿಲ್ಲು ಅಪ್ಪಾ ನಿಲ್ಲು. ನಾನಾವ ಕಾಲಕ್ಕೂ ಸಹಿ ಮಾಡಗೊಡುವದಿಲ್ಲ. ನಿನ್ನ ಮನೆ ಹಾಳು ಮಾಡಿ, ನನ್ನ ಅಣ್ಣ ತಮ್ಮಂದಿರ ಮುಂಗೈಗೆ ಜೋಳಿಗೆ ತಂದು ಪ್ರೇಮಶೂನ್ಯ ಮಾರಿಗಿ ಕೋಣಗಳ ಜೊತೆಯಲ್ಲಿ ಮದುವೆಯಾಗಲು ನಾನಾವ ಕಾಲಕ್ಕೂ ಇಷ್ಟಪಡುವದಿಲ್ಲ.

ಸುಬ್ಬಾ — (ಅಣಕಿಸುವ ಭಾವ) ಮದುವೆಯಾಗದಿದ್ದರೇನು ಮಾಡುವಿ ?

ಗೌರಿ — (ನಿರ್ಧಾರ ಸ್ವರ) ಸಾಯುವತನಕ ಬ್ರಹ್ಮಚಾರಿಣಿಯಾಗಿದ್ದು ರಾಷ್ಟ್ರ ಸೇವೆಯನ್ನು ಮಾಡುವೆನು. ತನ್ನ ತವರುಮನೆಗೆ ಕಾಣಾ ಕಾಣಾ ದರೋಡೆ ಹೊಡೆಯುವ ಹೃದಯಶೂನ್ಯರ ಸೊಸೆಯಾಗಿ ಅಂತಹ ದರೋಡೆಗೆ ಸುಮ್ಮನಿದ್ದು ಸಮ್ಮತಿಯನ್ನು ಕೊಡುವ ಪ್ರೇಮಶೂನ್ಯ ತರುಣನ ಮಡದಿಯಾಗಿ ನೀರಸದಾಂಪತ್ಯ ಜೀವನದಿಂದ, ಜೀವಿಸಿ, ಹೇಡಿಸಂತಾನಗಳನ್ನು ಹೆಚ್ಚಿಸಿ, ಭಾರತಾಂಬೆಯರ ಅವಮಾನಮಾಡುವ ಕಾಲವು ಹಿಂದಾಯಿತು. ದೈವೀಗುಣದ ಪುರುಷನು ಬಡವನೇ ಇರಲಿ, ಅಥವಾ ಬಲ್ಲಿದನೇ ಇರಲಿ, ತಾನಾಗಿಯೇ ಬಂದು ನನ್ನ ಮನವೊಲಿಸಿ ಕೈಹಿಡಿಯುವತನಕ ನಾನು ಬ್ರಹ್ಮಚಾರಿಣಿಯಾಗಿರುವೆನು. ಇದೇ ನಿರ್ಧಾರ.

|| ಪದ ||

ಅಕ್ಕತಂಗಿಯರೇ ಯೋಚಿಸಿ ಮನದೆ ।
ತಕ್ಕದಾದಯನ್ನ ವಿಚಾರ ವಿದೇ ||
ವಧುವರರು ವ್ಯಾಪಾರದ ವಸ್ತುವೇನು ? ||
ಇಂಥ ದುಷ್ಟ ರೂಢಿಗಳಿಹವೆಂದೇ ।
ನಿಂತು ಪೋದುದೆಮ್ಮ ಪ್ರಗತಿಹಾದೆ । ಪ್ರತಿ
ಭಟಿಸದಿನ್ನು । ಗತಿಗಾಣೆವೆಂದೂ ||

(ಸರ್ರ್ರನೇ ಹೊರಟು ಹೋಗುವಳು. ಎಲ್ಲರೂ ಬೆಪ್ಪಾಗಿ ಒಬ್ಬರ ಮುಖ ಒಬ್ಬರು ನೋಡುತ್ತಿರುವಾಗ್ಗ.)

ಸರೋಜಾ — ಭಲಾ, ಭಲಾ ಇದೇ ಭಾರತಾಂಬೆಯ ದುಃಖದೂರಕ ಸಂತಾನ.

ಎಲ್ಲರೂ — (ಸರೋಜಮ್ಮನನ್ನು ಸಿಟ್ಟಿನಿಂದ ನೋಡುತ್ತಿರಲು)

ಶೂಲ — (ಬದಿಯ ಕೋಣೆಯೊಳಗಿಂದ ಬಂದು) ಪರವಿಲ್ಲಾ ಹೋಗಲಿಬಿಡಿ. ಅಪ್ಪಾ ನನ್ನ ಸಲುವಾಗಿ ನಿನಗೆ ೫ ಸಾವಿರ ರೂಪಾಯಿಗಳು ಬೇಕಲ್ಲವೇ ? ಧರ್ಮಪಾಲಯ್ಯನವರೇ, ಅಷ್ಟು ಹಣವನ್ನು ಹೇಗಾದರೂ ಮಾಡಿ ಕೊಟ್ಟು ನನ್ನನ್ನು ಕ್ರಯಿಸಿಬಿಡಿ.

ಬ್ಯಾಂಕರ —
ಕನಕ } (ಕಣ್ಣರಳಿಸಿ)ಅಂದರೇ ಕ್ರಯಕ್ಕೆ ಕೊಡಲು ನೀನೇನು ಪಶುವೇ?

ಶೂಲ — (ನಿರ್ಣಾಯಕಸ್ವರ) ಅಹುದಹುದು, ದ್ವಿಪಾದ ಪಶುವೆಂದು ಹೇಳಬಹುದು. ಪ್ರೇಮಕ್ಕೆ ಬೆಲೆ ಕೊಡದೇ ಕೇವಲ ವರದಕ್ಷಿಣೆಗಾಗಿ, ಸಿಕ್ಕವಳನ್ನು ಮದುವೆಯಾಗಿ, ನೀರಸದಾಂಪತ್ಯದಿಂದ ಜೀವಿಸುವವನು ಪಶುವಲ್ಲದೇ ಮತ್ತೇನು ?

ಸುಬ್ಬಾ — ಅಂದರೆ ವರದಕ್ಷಿಣೆಯನ್ನೇ ಕೊಳ್ಳಲಾಗದೆಂದು ಹೇಳುವಿರೋ ?

ಶೂಲ — (ಅವನ ಮೇಲೆ ಸಿಟ್ಟು ಕಾರುತ್ತ) ಸುಮ್ಮನಿರಿ. ಶ್ರೀಮಂತರನ್ನು ಈರ್ಷೆಗೆಳಿಸಿ ಆವರನ್ನು ಹೆಚ್ಚಾಗಿ ವರದಕ್ಷಿಣೆ ಸೆಳೆಯುವ ಹೃದಯಶೂನ್ಯರನ್ನಾಗಿ ಮಾಡುವ ದಲ್ಲಾಳಿಗಳೇ ಸುಮ್ಮನಿರಿ.

ಬ್ಯಾಂಕರ ಕನಕ — (ಒಳ್ಳೇ ಆವೇಶದಿಂದ) ಆಂ- ಏನಂದೇ ನಮ್ಮ ಹಿತಚಿಂತಕರಾದ ಸುಬ್ಬಾಜೋಯ್ಸರು ದಲ್ಲಾಳಿಗಳೇ ?

ಶೂಲ — (ನಿಶ್ಚಿತಸ್ವರ) ಅಹುದಹುದು ಈ ದಲ್ಲಾಳಿಗಳು ಶ್ರೀಮಂತರ ಹಿತ ಚಿಂತಕರಾದರೇ, ಬಡವರ ಮನೆಗೆ ಬೆಂಕಿಯಿಕ್ಕತಕ್ಕವರು.

ಸುಬ್ಬಾ — (ಢೋಂಗಿತನದಿಂದ ಎಲ್ಲ ಸಭಿಕರನ್ನು ತನ್ನ ಪಕ್ಷಕ್ಕೆಳೆದುಕೊಳ್ಳುವ ಸ್ವರದಲ್ಲಿ) ನೋಡಿಯಪ್ಪಾ ! ಸಮಸ್ತ ವೈವಾಹಾರದವರೂ ನೋಡಿಯಪ್ಪಾ ! ಈ ಇಂಗ್ರೇಜಿ ಕಲಿತ ಯುವಕನು ಹೇಗೆ ವೈದಿಕ ಬ್ರಾಹ್ಮಣರ ಅಪಮಾನ ಮಾಡುತ್ತಲಿದ್ದಾನೆ ?

ಶೂಲ — ಸುಟ್ಟಿತು ನಿಮ್ಮ ವೈದಿಕ ಬ್ರಾಹ್ಮಣತ್ವ ! ವರಕನ್ಯಾ ಕ್ರಯ ವಿಕ್ರಯ ದಂಥ ಸಮಾಜಘಾತುಕ ರೂಢಿಗಳನ್ನು ನಿರ್ಮೂಲಗೊಳಿಸದೇ ಪರ್ಯಾಯದಿಂದ ಅವುಗಳ ಬೆಳವಣಿಗೆಗೆ ಅವಕಾಶ ಮಾಡಿಕೊಡುವ ನಿಮ್ಮಂಥವರಲ್ಲಿ ಬ್ರಾಹ್ಮಣತ್ವವೇ ಇಲ್ಲದಿರುವಾಗ್ಗೆ ವೈದಿಕತ್ವವೆಲ್ಲಿಂದ ಬರಬೇಕು.

ಬ್ಯಾಂಕರ ಕನಕ — ಇದೋ ಶೂಲಸಾಣೆ ನಿನ್ನ ಆ ಗಾಂಧೀ ಟೊಪ್ಪಿಗೆಯ ಪಾಂಡಿತ್ಯವು ನಮಗೆ ಬೇಕಿಲ್ಲ. ತಕ್ಕ ವರದಕ್ಷಿಣೆಯನ್ನು ಕೊಳ್ಳದೇ ನಾವು ನಿನ್ನ ಲಗ್ನವನ್ನೇ ಮಾಡಲಿಕ್ಕಿಲ್ಲ. ಇದೇ ಪ್ರತಿಜ್ಞೆ.

ಶೂಲ — (ನಿರ್ಧಾರದಿಂದ) ವರದಕ್ಷಿಣೆಯ ಮೂಲಕವಾಗಿ, ಮಾರಿಗೆಯ ವರನಾಗಿ, ವಧುವಿನ ಗುಲಾಮನೆಂಬ ತಿಲಕವನ್ನಿಕ್ಕಿಕೊಂಡು ನಿರ್ಲಜ್ಜ ತನದಿಂದ ಎಂದೂ ಲಗ್ನ ಮಾಡಿಕೊಳ್ಳಲಿಕ್ಕಿಲ್ಲ. ಇದು ನನ್ನ ಭೀಷ್ಮ ಪ್ರತಿಜ್ಞೆ.

ಬ್ಯಾಂಕರ — (ಅತಿ ಸಿಟ್ಟಿನಿಂದ) ನಮ್ಮ ವಿಚಾರಕ್ಕೆ ಪ್ರತಿಯಾಡುವ ನಿನಗೆ ನಮ್ಮ ಮನೆಯಲ್ಲಿ ನಿಲ್ಲಲ್ಲು ಅವಕಾಶವಿಲ್ಲ.

ಶೂಲ — ಹಾಗಿದ್ದರೇ ಇದೋ ಹೊರಟೆ. (ಸೆಲ್ಯೂಟ ಕೊಟ್ಟು ಸರ್ರನೆ ಹೋಗು ವನು.)

ಎಲ್ಲರೂ — (ಮಿಕಿ ಮಿಕಿ ಒಬ್ಬರ ಮುಖವನ್ನೊಬ್ಬರು ನೋಡುತ್ತಿರುವಾಗ್ಗೆ.)

ಕಮಲಮ್ಮ — (ಗಾಬರಿಯಿಂದ ಮೂಗಿನ ದನಿ) ಅಲ್ಲಾ, ಇದೇನೊಂದೆ.

ಶರೋ — (ಕಮಲಮ್ಮನ ಸ್ವರದಲ್ಲಿಯೇ) ಇದು ಸಮಾಜದ ಭಾಗ್ಯೋದಯವೊಂದೆ.

ಬ್ಯಾಂಕರ — (ಅರಚಿ) ಶುದ್ಧ ಘಟಿಂಗತನವೊಂದೇ.

ಪ್ರವೇಶ-ಬೀದಿ

ಶರೋ —ಡಾಕ್ಟರ್! ಒಳಗೆ ಬರಬಹುದಿತ್ತಲ್ಲಾ. ಶೂಲಪಾಣಿಯ ಸಲುವಾಗಿ ಧರ್ಮಪಾಲಯ್ಯ, ಗೌರಿಯ ನಿಶ್ಚಯವನ್ನು ಮಾಡುವ ಸಮಾರಂಭವು ಒಳ್ಳೇ ಅಭೂತಪೂರ್ವವಾಗಿ ಜರುಗಿತು.

ಡಾಕ್ಟರ — ಹೇಗೋ ನಿಶ್ಚಯವಾಯಿತೇನು ?

ಶರೋ — ಎಲ್ಲಿಯದು? ವರದಕ್ಷಿಣಾ ರೂಪದಿಂದ ತವರುಮನೆಗೆ ಪರ್ಯಾಯದಿಂದ ಹಗಲು ಡಾಕೆ ಹೊಡೆಯುವವರ ಸೊಸೆಯಾಗಲಿಕ್ಕಿಲ್ಲವೆಂದು ಗೌರಿಯೂ ವರದಕ್ಷಿಣೆಯ ಹೆಸರಿನಲ್ಲಿ ಮಾರಿಗೆಯ ವರನಾಗಿ, ವಧುವಿನ ಗುಲಾಮನೆನಿಸಿಕೊಳ್ಳಲಿಕ್ಕಿಲ್ಲವೆಂದು ಶೂಲಪಾಣಿಯವರೂ ಪ್ರತಿಜ್ಞೆಯನ್ನು ಮಾಡಿದರು.

ಡಾಕ್ಟರ — ಭಲಾ! ಭಲಾ! ನಿಜವಾದ ಸುಶಿಕ್ಷಿತರೆಂದರೇ ಗೌರೀ ಶೂಲಪಾಣಿಯಂಥವರೇ! ಅದಾಯಿತು. ವರದಕ್ಷಿಣೆಯನ್ನು ಕೊಳ್ಳದೇ ಮಗನ ಲಗ್ನ ಮಾಡುವದಿಲ್ಲವೆನ್ನುವ ಆ ಬಿಂಕದ ಬ್ಯಾಂಕರ ಕನಕರಾಯನ ಗತಿ ಏನಾಯಿತು ?

ಶರೋ — ಆಗುವದೇನು! ತಂದೆ ಮಕ್ಕಳಲ್ಲಿ ಕೂಡಲೇ ನಾನ್ಕೋಆಪರೇಶನ್ ಉಂಟಾಗಿ, ಅದೇ ಕ್ಷಣವೇ ಶೂಲಪಾಣಿಯು ಮನೆಯನ್ನು ಬಿಟ್ಟು ಹೊರಡಬೇಕಾಯಿತು.

ಡಾಕ್ಟರ — ಅಬ್ಬಾ! ಒಳ್ಳೇ ಗಂಭೀರವಾದ ನೋಟ! ನಾನೂ ಆ ಸಮಯದಲ್ಲಿ ಇರಬೇಕಾಗಿತ್ತು. ಆದರೆ ಮಾಡಲೇನು.. ಚೈನಾ ಸಂಕಟಗ್ರಸ್ತರ ಸಹಾಯನಿಧಿಯನ್ನು ಶೇಖರಿಸಲು ಕಾಂಗ್ರೆಸ್ ವತಿಯಿಂದ ತಮ್ಮ ಅಧ್ಯಕ್ಷತೆಯಲ್ಲಿ ಈಗಲೇ ಸಭೆ ಕರೆಯಲಾಗಿದೆಯಷ್ಟೇ ? ಅದರ

ಪೂರ್ವ ಸಿದ್ಧತೆಯಲ್ಲಿ ತೊಡಗಿದ್ದೆ. ಬೇಗ ನಡೆಯಿರಿ. ತಾವು ನಿಶ್ಚಯ್ಯ ಸಮಾರಂಭದಲ್ಲಿರುವಿರೆಂದು ವಾಲಂಟೀಯರರ ಪರಿಮುಖದಿಂದ ತಿಳಿದ ಕೂಡಲೇ ತಮ್ಮನ್ನು ಕರೆದುಕೊಂಡು ಹೋಗಲು ನಾನೇ ಬಂದೆ. ನಡೆಯಿರಿ. ಜನಕಲೆತು ಬಿಟ್ಟಿದೆ.

ಸರೋ — ಡ್ರೆಸ್ಸ್ ಚೇಂಜ ಮಾಡಿ ಬರುವೆನು.

ಡಾಕ್ಟರ — ಈ ನಿಮ್ಮ ಪೌರಾಣಿಕ ಉಡುಪು ಚನ್ನಾಗಿದೆಯಲ್ಲಾ.

ಸರೋ — ಆದರೂ ಕಾಂಗ್ರೆಸ ವತಿಯಿಂದ ಕರೆದ ಸಭೆಗೆ ಇದ್ದು ತಕ್ಕದ್ದಲ್ಲ, ನೀವು ಹೋಗಿ ಹತ್ತೇ ಹತ್ತು ಮಿನಿಟುಗಳಲ್ಲಿ ಡ್ರೆಸ್ಸ್ ಚೇಂಜ ಮಾಡಿ ಕೊಂಡು ಬರುವೆ. (ಹೋಗುವರು.)

(ಮತ್ತೊಂದು ಬದಿಯಿಂದ ಗೌರಿ ಗಂಗಮ್ಮ ಮಾತಾಡುತ್ತ ಬರುವರು.)

ಗೌರಿ — ಭಲಾ ಗಂಗಮ್ಮಾ ! ನಮ್ಮ ಗೌರೀ ಸಮಾಜದ ಕಾರ್ಯದರ್ಶಿಪದಕ್ಕೆ ನೀನೇ ತಕ್ಕವಳು ಅಲ್ಲವೇ ? ನಮ್ಮ ಒಂದೇ ಒಂದು ಗ್ರಾಮದಿಂದ ಇಷ್ಟು ಜನ ಕುಮಾರ ಕುಮಾರಿಯರು ಚೈನಾ ಶುಶ್ರೂಷಾ ಪಥಕದ ಜೊತೆಗೆ ಹೊರಡಲು ಸಿದ್ಧರಾದರಲ್ಲವೇ ?

ಗಂಗಾ — ಸುಶಿಕ್ಷಿತ ಬಾಲಿಕೆಯರಲ್ಲಿನ ಕಾಂಗ್ರೆಸ ನಿಷ್ಠೆಯೇ ಹಾಗಿದೆ. ರಾಷ್ಟ್ರಪತಿಗಳ ಸಂದೇಶ ಪ್ರಸಾರ ಮಾಡುತ್ತಲೇ ಎರಡೇ ಎರಡು ದಿನ ಗಳಲ್ಲಿ ನೂರಾರು ಸಂಖ್ಯೆಯಿಂದ ಸ್ವಯಂಸೇವಿಕೆಯರು ಗೌರಿ ಸಂಘದ ವತಿಯಿಂದ ಚೈನಾ ರಣಕ್ಷೇತ್ರಕ್ಕೆ ಹೊರಡಲು ಸಿದ್ಧರಾಗಿ ತಮ್ಮ ತಮ್ಮ ಹೆಸರುಗಳನ್ನು ರಜಿಸ್ಟರ ಮಾಡಿಸಿದರು.

ಗೌರಿ — ಹೆಸರುಗಳನ್ನು ರಜಿಸ್ಟರ ಮಾಡಿಸಿದವರಲ್ಲಿ ವಿವಾಹಿತರಾರೂ ಇಲ್ಲವಷ್ಟೇ ?

ಗಂಗಾ — ವಿವಾಹಿತರಿಗೆ ನಮ್ಮ ಸಂಘದಲ್ಲಿ ಅವಕಾಶವೆಲ್ಲಿ ?

ಗೌರಿ — ನಮ್ಮ ಕಮಾಂಡರ ಡಾಕ್ಟರರು ನಾಳಿನ ಪ್ರೋಗ್ರಾಮ ಏನೇನು ಇಟ್ಟುಕೊಂಡಿದ್ದಾರೆ.

ಗಂಗಾ — ಚೈನಾ ರಣಕ್ಷೇತ್ರದಲ್ಲಿನ ಸಂಕಟಗ್ರಸ್ತರ ಸಲುವಾಗಿ ಬಟ್ಟೆ ಬರೆ, ಖಾದ್ಯ, ಪೇಯ, ಔಷಧೋಪಚಾರ ಸಾಮಗ್ರಿ, ಮತ್ತು ಹಣ ಇತ್ಯಾದಿ

ಗಳನ್ನು ಸಾಕಷ್ಟು ಸಂಗ್ರಹಿಸುವದು. ಅದಕ್ಕಾಗಿಯೇ ಕಾಂಗ್ರೆಸ ವತಿಯಿಂದ ಸಭೆ ಕರೆದಿದ್ದರು. ನಿನ್ನ ನಿಶ್ಚಯದ ಗಲಾಟಿ ತೀರಿದ ಕೂಡಲೆ ಸರೋಜಮ್ಮನವರು ಆ ಸಭೆಯ ನಿಯೋಜಿತ ಅಧ್ಯಕ್ಷರಿದ್ದ ಮೂಲಕ ನೇರವಾಗಿ ಅತ್ತವೇ ಹೋದರು.

ಗೌರಿ — ಅಹಹಾ ! ಸರೋಜಮ್ಮನವರದೆಂತಹ ರಾಷ್ಟ್ರ ಪ್ರೇಮವೇ! ಧನ್ಯರು ಅವರಿಗೆ ಜನ್ಮವಿತ್ತ ಮಾತಾಪಿತೃಗಳು ! ಧನ್ಯರು !

ಸ್ವಯಂಸೇವಕ— (ಗೌರಿಗೆ ನಮಿಸಿ, ಚೀಟಿಯನ್ನು ಕೊಟ್ಟು ಹೋಗುವನು.)

ಗೌರಿ — (ಓದಿ ನೋಡಿ ನಸುನಕ್ಕು) ಗಂಗಾ! ಚೈನಾ ನಿಧಿಯನ್ನು ಶೇಖರಿಸಲು ಊರಲ್ಲಿ ಸ್ವಯಂಸೇವಕ ಸೇನಕಿಯರ ಶಿಸ್ತಿನ ಪ್ರೊಸೆಷನ್ ಹೊರಡಿಸ ಬೇಕಾಗಿದೆಯಂತೆ. ಸಮಯಕ್ಕೆ ತಕ್ಕ ಪದವನ್ನು ಕಟ್ಟಿಕೊಡಬೇಕೆಂದು ಈ ದಿನ ಸಭಾಧ್ಯಕ್ಷೆಯರಾದ ಸರೋಜಮ್ಮನವರು ನನಗೆ ಅಪ್ಪಣೆ ಮಾಡುತ್ತಲಿದ್ದಾರೆ. ಅದನ್ನು ಪ್ರೊಸೆಷನ್ ಅಗ್ರಭಾಗದಲ್ಲಿದ್ದುಕೊಂಡು ತಾವೇ ಹೇಳತಕ್ಕವಂತೆ.

ಗಂಗಾ — ಹಾಗಿದ್ದರೇ ಬೇಗ ಒಂದು ಶಾಂತ ಪ್ರದೇಶದಲ್ಲಿ ಕುರಿತು ಪದ ಕಟ್ಟಿ ಅವರ ಅಪ್ಪಣೆಯನ್ನು ನೆರವೇರಿಸು.

ಗೌರಿ — ಅಹುದು ಈಗಲೇ ನಗರೋದ್ಯಾನದತ್ತ ಹೋಗುವೆ. (ಹೋಗುವರು)

ಪ್ರವೇಶ — ನಗರೋದ್ಯಾನದೊಂದು ಏಕಾಂತ ಪ್ರವೇಶ

ಗೌರಿ — (ವಿಚಾರ ಮಗ್ನಳಾಗಿ ಪದ ಕಟ್ಟುವಳು. ಅವಳ ಹಿಂಬದಿಯ ಹತ್ತರವೇ ಮರೆಯಲ್ಲಿ ಶೂಲಪಾಣಿ ನಿಂತಿರುವನು. ಕವನ ಮಾಡುವ ಭಾವ.)

|| ಪದ ||

ದೇವರಾಜ್ಞೆಯಂದರೇ । ದೇಶದಾಜ್ಞೆಯಲ್ಲವೇ ? ।
ಸಾವಕಾಶ ಮಾಡದೇ । ಈ ಸುಯೋಗ ಸಾಧಿಸೀ ||
ಹೇಡಿ ಭಟರು ನಗರದಿ ಬೀ । ಸಾಡಿದಂಥ ಬಾಂಬಿನಿಂ ||
ಕೇಡಿಗೀಡಾದ ಜನಕೆ ನೀಡಿರೀ ಸಹಾಯವಾ ||
ಬುದ್ಧಿಹೀನರಾಗುತೇ । ಅಬದ್ಧ ಯುದ್ಧವಾಡುವಾ ||
ಬುದ್ಧಿಗೇಡಿ ಜನಕೆ (ವಿಚಾರ) ಜ ನ ಕೆ ಜ-ನ-ಕೆ

ಶೂಲ — ಮೇಲಿನ ಮಟ್ಟಿನಲ್ಲಿ ಅವಳ ಪ್ರತಿಭೆ ಅರ್ಥಕ್ಕೆ ನಿಲ್ಲಲು ಅವಳ ಸ್ವರ ದಲ್ಲಿಯೇ ಆ ಪದದ ಚರಣ ಸೂಚಿಸುವನು—ನಮ್ಮ ಶುದ್ಧ ಪ್ರೇಮ ಗಲಿಸುವಾ.

ಗೌರಿ — ಅಹುದಹುದು ॥ ನಮ್ಮ ಶುದ್ಧ ಪ್ರೇಮಗಲಿಸುವಾ ॥
ತನುಮನಧನದಿಂದ ದೀನ । ಜನಕೋಟಿಯು ಸೇವೆಯೂ ।
ಅನುನಯದಿಂ ಮಾಡಿ ಜಗದ—ಜಗದ—ಜ ಗ ದ

ಶೂಲ — (ನುಡಿ ಪೂರ್ತಿಗಾಗಿ ಸೂಚಿಸುವ ಶಬ್ದಗಳು) ಮನವೊಲಿಸುವ ಶಾಂತಿಗೆ.

ಗೌರಿ — (ತಾನು ಸಹ) ಮನವೊಲಿಸುವ ಶಾಂತಿಗೆ (ಎಂದು ಶೂಲಪಾಣಿಯುಗೂಡ ಸಹಕರಿಸುವಳು) ಅಹಹಾ ಸುಂದರ ರಚನೆಯಾಯಿತು. ಬುದ್ಧಿಗೇಡಿ ಜನಕೆ ನಮ್ಮ । ಶುದ್ಧ ಪ್ರೇಮಗಲಿಸುವಾ ಅನುನಯದಿಂ ಮಾಡಿ ಜಗದ । ಮನವೊಲಿಸುವ ಶಾಂತಿಗೆ । ಎಂತಹ ಪರಿಣಾಮಕಾರಿ ಶಬ್ದ ಯೋಜನೆ ! ಇವೆರಡು ಚರಣ ಭಾಗಗಳನ್ನು ಯಾರೋ ನನಗೆ ಹೇಳಿ ಕೊಟ್ಟಂತಾಯಿತು. ಮತ್ತಾರು ಹೇಳಿಕೊಡತಕ್ಕವರು ? ನನ್ನ ಅಂತ ರಾತ್ಮಾ (ಅನುಮಾನಿಸಿ) ಅಲ್ಲಲ್ಲ ! ಬೇರೆಯವರೇ ಹೇಳಿದಂತಾಯಿತು ! ಇಂಥಹ ಭಾವ ಪ್ರಚೋದಕ ಶಬ್ದ ಸೂಚಕರಾರು ?

ಶೂಲ — ನಾನು–ನಿನ್ನ ಪ್ರೇಮಯಾಚಕನಾದ ನಾನು.

ಗೌರಿ — (ಬಹು ಗೊಂದಲದಲ್ಲಿ ಬಿದ್ದಿರಲು)

ಶೂಲ — ಗೌರೀ, ನಾನು ನಿನ್ನನ್ನು ಪ್ರೀತಿಸುವೆ. ಒಪ್ಪಿಯಾದರೇ ನಿನ್ನನ್ನು ವರಿಸಲು ಸಹ ನಾನು ಸಿದ್ಧನೇ. ಈ ವಿಚಾರ ನಿನಗಾದರೂ ಹೊಳೆದಿರ ಲಿಕ್ಕೇ ಸಾಕು.

ಗೌರಿ — (ಯೋಚಿಸಿ) ಅ ಹು ದು.

ಶೂಲ — ಹಾಗಾದರೆ ಹೇಳು, ನಿನ್ನನ್ನು ಕೊನೆಯವರೆಗೂ ಪ್ರೀತಿಸುವದಕ್ಕೆ ನನಗಪ್ಪಣೆಯನ್ನು ಮಾಡುವಿಯಾ ?

ಗೌರಿ — (ಮುಗುಳು ನಗೆಯಿಂದ ಸಾತ್ವಿಕ ಶೃಂಗಾರ ಭಾವ ಬೀರಿ) ನಿಮ್ಮ ತಂದೆ ಯವರು ಕೇಳುವ ೫ ಸಾವಿರ ವರದಕ್ಷಿಣೆಯ ವಿಚಾರ ?

ಶೂಲ — ಗೌರೀ ! ವರದಕ್ಷಿಣೆಗಾಗಿಯಂಥವಳನ್ನಾದರೂ ಕೊರಳಿಗೆ ಕಟ್ಟಿ ಕೊಳ್ಳುವ ಪಾಶವೀ ವೃತ್ತಿಯ ತರುಣನು ನಾನಲ್ಲ. ಪ್ರೇಮವು ದೈವೀ ಸಂಪತ್ತು. ಅದು ಸಿಕ್ಕ ಸಿಕ್ಕವರಿಗೆ ಕೊಡಲು ಬಾರದ ಸಂಪತ್ತು.

ಗೌರಿ — ಹಾಗಾದರೆ, ವರದಕ್ಷಿಣೆಯನ್ನು ತಕ್ಕೊಂಡು ಮದುವೆಯಾದವರಲ್ಲಿ ಪ್ರೇಮವು ಇರುವದಿಲ್ಲವೆಂದು ಹೇಳುವಿಯೋ.

ಶೂಲ — ಇದ್ದರೂ ಅದು ತಾಮಸೀ ಪ್ರೇಮ. ಭೋಗಲಾಲಸೆಯಿಂದ ಬೆಳೆದು ಬಂದ ಪ್ರೇಮ. ಅಂಥಹ ವಿಷಮ ಪ್ರೇಮವಿವಾಹಿತ ದಂಪತಿ ಗಳ ಸಂತಾನದಿಂದಲೇ ಮಾನವ ಕೋಟಿಯ ಅಧಃಪತನವಾಗಿದೆ.
(ಸರೋಜಮ್ಮನು ಮರೆಗೆ ನಿಂತು ಸಂವಾದ ಕೇಳುತ್ತಿರುವಳು)

ಗೌರಿ — ಒಪ್ಪಿದೆ.

ಶೂಲ — ಹಾಗಾದರೆ ನನ್ನನ್ನು ವರಿಸುವಿಯಾ ?

ಗೌರಿ — ವ ರಿ ಸು ವೆ.

ಸರೋ — (ಪ್ರಕಟವಾಗಿ ಉಭಯರ ಮಧ್ಯ ನಿಂತು ಹೂಗಳನ್ನು ಹಾರಿಸಿ) ಶುಮು ಹೂರ್ತೇ ಸಾವಧಾನ ||

ಗೌರಿ — (ಕಿಂಚಿತ ಹುಬ್ಬುಗಂಟಿಕ್ಕಿ) ಇದೆಂಥ ವಿನೋದ ಸರೋಜಮ್ಮಾ ಈಗೇನು ನಾವು ಲಗ್ನವೇದಿಕೆಯಲ್ಲಿ ನಿಂತಿರುವೆವೆ ?

ಸರೋ — ಇಲ್ಲದಿದ್ದರೂ ನಿಲ್ಲಬಹುದು.

ಉಭಯರು — ತಥಾಸ್ತು.

ಸರೋ — ಹಂ. ಹಂತ. ಕನಕರಾಯರಿಗೆ ಸಿಗತಕ್ಕ ೫ ಸಾವಿರ ರೂಪಾಯಿ ಗಳಿಗೆ ಸೊನ್ನೆ ಸುತ್ತಬೇಕೆನ್ನುವಿರೋ ?

ಶೂಲ — ಅದೇ ನನ್ನ ಮಟ್ಟಿನ ನಿರ್ಧಾರ.

ಸರೋ — (ಗಂಭೀರ ಭಾವ) ಶೂಲಪಾಣೀ ಯುವಕರೆಲ್ಲರೂ ನಿನ್ನಂತೆ ನಿರ್ಧಾ ರಿಗಳಾದರೇ ಭಾರತೀಯರ ಮಟ್ಟಿ ದೇವತೆಗಳ ಸಮಾನವಾದೀತು ಆದರೆ, ಆದರೇನು ಮಾತಾಪಿತೃಗಳ ಅನ್ಯಾಯದ ವರ್ತನೆಗೆ ಮೌನ ದಿಂದ ಸಮ್ಮತಿಯನ್ನು ಕೊಡುವ ಬಾಲಿಶ ಆತ್ಮವಂಚಕ ತರುಣರೇ,

ಎತ್ತ ನೋಡಿದತ್ತ ತುಂಬಿ ಹೋಗಿದ್ದಾರೆ. ನೀನು ಮಾತ್ರ ಹಾಗಾಗದಿರು: ನಿರ್ಧಾರವು ಅಚಲವಾಗಿರಲಿ.

ಶೂಲ — ನಿನ್ನ ಆಶೀರ್ವಾದವಿದ್ದರೇ —

ಸರೋ — ಬೆಂದು ಹೋದ ಮನಸ್ಸಿನವಳ ಆಶೀರ್ವಾದದಿಂದ ನಿಮಗೇನಾಗಬೇಕಾಗಿದೆ ?

ಗೌರಿ — ಹಾಗಿದ್ದರೂ ನೀನು ಪರಮಪಾವನೆಯಾದ ಹೆಣ್ಣು ಮಗಳು. ಹಣದಾಸೆಗಾಗಿ ನಿನ್ನನ್ನು ಈ ಮುದುಕ ನೀಚ, ನಿರ್ಬುದ್ಧ, ಮನೋವೃತ್ತಿಯ ಸುಬ್ಬಾಭಟ್ಟನಿಗೆ ಕೊಟ್ಟಿದ್ದರೂ ಮಲಿನಮಾನಸಿಯಾಗದಿರುವ ನಿನ್ನ ಆಶೀರ್ವಾದವು ಫಲಿಸದೇ ?

ಸರೋ — (ಆಶೆಯಿಂದ) ಹಾಗಾದರೇ ನನ್ನ ಆಶೀರ್ವಾದವು ಫಲಿಸಿದುದನ್ನು ಎಂದು ತೋರಿಸುವಿರಿ.

ಶೂಲ — ನಮ್ಮ ಲಗ್ನವಾದಾಗ್ಗೆ.


ಸರೋ — ಅದೆಂದಾಗುವದು ?

ಗೌರಿ — ನಮ್ಮ ಉಭಯರ ಪ್ರೇಮವು ಒರೆಗೆ ಹತ್ತಿದ ಮೇಲೆ.

ಸರೋ — ಅದೆಂದು ಹತ್ತಬೇಕಮ್ಮ ? (ಚಿಂತೆಯ ಸ್ವರ) ಚೈನಾಶುಶ್ರೂಷಾ ಪಥಕದೊಡನೇ ಯುದ್ಧ ಜರುಗುವ ಪ್ರದೇಶಕ್ಕೆ ಹೊರಟ ನಿಮ್ಮ ಬಾಳಿನ ಭರವಸೆಯೋ ?

ಶೂಲ — ಎಂದೂ ಸಾಯದ ಭರವಸೆಯ ಬಾಳನ್ನು ಪಡೆಯುವದಕ್ಕಾಗಿಯೋ ನಾವು ಇಂದು ಚೈನಾ ರಣಕ್ಷೇತ್ರಕ್ಕೆ ಹೊರಡಲು ಸಿದ್ಧರಾಗಿ ಶುಶ್ರೂಷಾ ಪಥಕದಲ್ಲಿ ನಮ್ಮ ಹೆಸರುಗಳನ್ನು ಕೊಟ್ಟಿದ್ದೇವೆ.

ಸರೋ — ನಾನೂ ನಿಮ್ಮ ಜೊತೆಯಲ್ಲಿ ಬರಬೇಕೆಂದೆ; ಆದರೆ (ಉದಾಸಭಾವ) ವಿವಾಹಿತೆಯಾದ ನನಗಪ್ಪಣೆ ಸಿಗಲಿಲ್ಲ. ಆಗಲಿ ನಡೆಯಿರಿ. ಹೊತ್ತಾಯಿತು, ಕೀರ್ತಿಲಾಲಸೆಯಿಲ್ಲದೇ ರಾಷ್ಟ್ರ ಸೇವೆಗಾಗಿ ದೇಹ ಸವಿಸಲು ಸಿದ್ಧರಾದ ನಿಮ್ಮ ಬಾಳೇ ಬಾಳು. ದೇವರು ನಿಮ್ಮಗಳಿಗೆ ಒಳಿತು ಮಾಡಲಿ. (ಆಶೀರ್ವಾದ ಕೊಡುವಾಗ್ಗೆ ತೆರೆ ಬೀಳುವದು.)



ದೇವರು ನಿಮ್ಮಗಳಿಗೆ ಒಳ್ಳಿತಾಗಿ ಆಶೀರ್ವಾದ ಮಾಡಲಿ (ಪುಟ ೨೬)

-: ಅಂಕು :-

ಬೀದಿ—ಸುಬ್ಬಾಭಟ್ಟನ ಪ್ರವೇಶ

ಸುಬ್ಬಾ — (ಒಳ್ಳೇ ಆವೇಶದಿಂದ ನಾಗರಹಾವಿನಂತೆ ಬುಸುಗುಟ್ಟುತ್ತ ಕಣ್ಣುಗಳನ್ನು ಕೆಂಪಗೆ ಮಾಡಿಕೊಂಡು ತುಟಿಗಳನ್ನು ಕಚ್ಚುತ್ತ) ಹಾರಾ! ಹೂವಿನ ಹಾರಾ! ಪರಪುರುಷನಿಂದ ಇಡೀ ಊರ ಮುಂದೆ, ಕೊರಳಿಗೆ ಹೂವಿನ ಹಾರವನ್ನು ಹಾಕಿಸಿಕೊಳ್ಳುವದೇ! ನನಗೂ ಸಾಕಾಗಿ ಹೋಗಿದೆ ಇವಳ ಕಾಲಲ್ಲಿ! ಒಂದು ಸಲ ಏನಾದದ್ದಾಗಲಿ ತೋರಿಸಿಯೇ ಬಿಡುವಾ ಗಂಡನೆಂದರೇನಂಬದನ್ನು. ಸಲಿಗೆ ಕೊಟ್ಟ ನಾಯಿ ತಲೆಗೇರಿತಂತೆ..... ನಮ್ಮ ಊರ ಜನಗಳಾದರೂ ಎಂಥಹ ದಡ್ಡರು! ಇವಳಿಗೆ ಇಲ್ಲಿ ಇಲ್ಲದ ಮರ್ಯಾದೆ ಸಲ್ಲಿಸುತ್ತಿರುವರು. ಇವಳು ಒಳ್ಳೇ ಓದಿಕೊಂಡವಳಂತೆ. (ತುಚ್ಛಭಾವ) ಏನು ಓದಿದ್ದಾಳೆ ತನ್ನ ತಲೆ? ಒಂದು ಸಂಹಿತೆಯೇ, ಪವಮಾನವೇ? ರುದ್ರವೆ, ನಮಕವೇ, ಚಮುಕವೇ, ಹೋಗಲಿ! ಸ್ವರಪೂರ್ವಕವಾಗಿ ಶ್ರೀ ಪುರುಷಸೂಕ್ತಗಳನ್ನಾದರೂ ಹೇಳಲಿ ನೋಡುವಾ! ಓದಿಕೊಂಡವಳಂತೆ, ಓದಿಕೊಂಡವಳು! ಶಾಲೆಗೆ ಹೋಗಿ ನಾಲ್ಕು ಪುಸ್ತಕಗಳನ್ನು ಓದಿಕೊಂಡು, ಅಡ್ಡ ಬೈತಲೆ ತೆಗೆದು ವನಪು ವೈಯಾರಗಳನ್ನು ಮಾಡಿದ ಮಾತ್ರಕ್ಕೆ ಈ ಜನಗಳೆಲ್ಲಾ ಸೇರಿ ಇವಳನ್ನು ಅಷ್ಟು ಅಟ್ಟಕ್ಕೆ ಒಯ್ದು ಬಿಡಬೇಕೇ? ತಲೆ ಕೆಡಿಸಿ ಬಿಟ್ಟಿದ್ದಾರೆ. ಅಂತೆಯೇ ಅವಳಿಗೆ ತನ್ನ ಗಂಡನ ಪರಿವೇ ಇಲ್ಲದಾಗಿದೆ. ಹೆಜ್ಜೆ ಹೆಜ್ಜೆಗೆ ತೇಜೋಭಂಗ ಮಾಡುವಳು! ನಾನೆಂದರೆ ಅವಳ ಪಾಲಿಗೆ ಏನೋ ಆಗಿ ಬಿಟ್ಟಿದ್ದೇನೆ. ಬರಲಿ, ಬರಲಿ, ಹುಂ. ಆ ಮುನಸಿಪಾಲಿಟಿ ಬೈಲಿನಲ್ಲಿ, ಇಡೀ ಊರ ಜನರ ಸಮಕ್ಷಮ ನನಗವಮಾನವಾಗುವಂತೆ ವರ್ತಿಸಿದರ ಸೇಡು-ಸೇಡು ತೀರಿಸಿಕೊಳ್ಳದಿದ್ದರೇ (ಎದೆ ಬಡಿದುಕೊಂಡು) ನಾನು ತಿಪ್ಪಾ ಜೋಯ್ಸರ ಮಗನಾದ ಸುಬ್ಬಾ ಜೋಯ್ಸನೇ ಅಲ್ಲ. ಬರಲಿ-ಬರಲಿ. ಸಾಕ್ಷಾತ್ ಲಗ್ನ ಮಾಡಿಕೊಂಡ ಗಂಡನ ಕಣ್ಣೆದುರು ಇಷ್ಟೆಲ್ಲ ನಡೆದು ಹೋಗಬೇಕೇ? (ಸೇಡು ತೀರಿಸಿಕೊಳ್ಳುವ ಭಾವ) ಬರಲಿ ಬರಲಿ. ಒಂದು ಕೈ ನೋಡಿಯೇ ಬಿಡುವಾ. (ತೆರೆ ನೋಡಿ ತೆಪ್ಪಗಾಗಿ,) ಅವೋ ಬಂದಳಲ್ಲ (ಕಡತುದ ಆವೇಶದಿಂದ) ಆ ಡಾಕ್ಟರ ನಾರ್ಯಾ

ಹಾಕಿದ ಹಾರವನ್ನು ಮುಂಗೈ ಮೇಲೆ ಹಾಕಿಕೊಂಡು ವನಪು ವೈಯ್ಯಾರ ಮಾಡುತ್ತ ಬಂದಳಲ್ಲಿ. (ಜೋಯ್ಸರ ವರ್ಣನೆಯಂತೆ ಸರೋಜಮ್ಮ ಬರುವಳು.) ಏ, ಮೊದಲು-ಮೊದಲು ಬೀಸ್ಹಾಕು ಆ ಹಾರವನ್ನು ಬೀಸ್ಹಾಕು ಆಚಿಕೆ ನಾಚಿಕೆ ಇಲ್ಲದವಳೇ! ಊರ ಜನವೆಲ್ಲ ಸೇರಿರುವಾಗ್ಗೆ ಆ ನಾರ್‍ಯಾ ಡಾಕ್ಟರನಿಂದ ಹೇಗೆ ಕೊರಳಲ್ಲಿ ಹಾರ ಹಾಕಿಸಿಕೊಂಡಿಯೋ ಹೇಳು ? ಹೇಗೆ ಹಾಕಿಸಿಕೊಂಡಿಯೋ.

ಸರೋ — (ನಕ್ಕು) ಹಾರವನ್ನು ಹಾಕಿ ನನ್ನನ್ನು ಗೌರವಿಸಿದರು. ಅದರಲ್ಲಿ ತಪ್ಪೇನು ?

ಸುಬ್ಬಾ — ನಿನ್ನ ಕೊರಳಲ್ಲಿ ಹಾರವನ್ನು ಹಾಕುವದಕ್ಕೆ ಅವನಿಗೇನಧಿಕಾರವೇ? ಅವನಂದರೇನು ನಾನೇ ? ನಿನ್ನ ಕೊರಳಲ್ಲಿ ಹಾರ ಹಾಕುವ ಅಧಿಕಾರ ಯಾರದು ? ನನ್ನದು-ನಿನ್ನ ಮದುವೆಯ ಗಂಡನಾದ ನನ್ನದು. ಹುಂ. ಬೀಸ್ಹಾಕು ಆ ಹಾರಾ ಮೊದಲು.

ಸರೋ — (ಜಗ್ಗಿ ನಕ್ಕು) ಅಯ್ಯೋ ಕಾಡು ಪ್ರಾಣೀ.

ಧರ್ಮಣ್ಣ — (ಆತುರದಿಂದ ಬಂದು) ಏನು ಸುಬ್ಬಾ ಜೋಯ್ಸರೇ ಏನಿದು ಆವೇಶ ?

ಸುಬ್ಬಾ — (ಅವನನ್ನು ಗಣಿಸದೇ) ಬೀಸ್ಹಾಕು ಆ ಹಾರವನ್ನು.

ಸರೋ — (ನಗುವಳು)

ಧರ್ಮಣ್ಣ — ಅದನ್ನೇಕೆ ಬೀಸ್ಹಾಕುವದು ? ಅಧ್ಯಕ್ಷಪದಕ್ಕೆ ಸಲ್ಲಿಸಿದ ಬಹುಮಾನವನ್ನು ಬೀಸ್ಹಾಕಬೇಕೆ ?

ಸುಬ್ಬಾ — (ಧರ್ಮಣ್ಣನನ್ನು ವಿಕ್ಷಿಪ್ತ ನೋಟದಿಂದ ನೋಡಿ) ಅಂದರೆ ಇದರ ಅರ್ಥವೇನು ? ಇವಳ ಕೊರಳಲ್ಲಿ ಹಾರವನ್ನು ಹಾಕಲಿಕ್ಕೆ ಆ ಡಾಕ್ಟರನೇನು ಇವಳ ಗಂಡನೇ ?

ಇಬ್ಬರೂ — (ಗಟ್ಟಿಯಾಗಿ ನಗುವರು)

ಸುಬ್ಬಾ — (ವ್ಯಂಗ್ಯ) ಏ, ಸೋಗಲಾಡೀ-ಸೋಗಲಾಡೀ ನನ್ನ ಸಲುವಾಗೇನು ನಗುವೇ ? ನಿನ್ನ ಕೊರಳಲ್ಲಿ ಆ ನಾರ್‍ಯಾ ಹಾರ ಹಾಕುವಾಗ್ಗೆ ಇಡೀ

ಊರೆಲ್ಲ ಚಪ್ಪಳಿ ಇಕ್ಕಿ ಗೇಲಿ ಮಾಡಿದ್ದನ್ನು ನಾನು ಕಣ್ಣಾರೇ ನೋಡಿ ಕಿವಿಯಾರೆ ಕೇಳಿದ್ದೇನೆಯೋ ? ನನ್ನ ಸಲುವಾಗೇನು ನಗುವಿ ?

ಇಬ್ಬರೂ — (ಮತ್ತಿಷ್ಟು ನಗುವರು)

ಧರ್ಮಣ್ಣ — ಸುಬ್ಬಾಭಟ್ಟರೇ ನಿಮ್ಮ ಮಬ್ಬುತನದ ಪರಮಾವಧಿಯಾಯಿತು.

ಸುಬ್ಬಾ — ಅಂದರೆ— !

ಧರ್ಮಣ್ಣ — ಅಂದರೆ-ಮಿಂಚಿನ ಗತಿಯಿಂದ ಬದಲಾವಣೆ ಹೊಂದುತ್ತಿರುವ ಪ್ರಪಂಚದ ರೀತಿ ನೀತಿಗಳನ್ನು ನೀವು ನೋಡುವದಿಲ್ಲವಂತೇ ಹೀಗೆ ಪೇಚಾಡುವಿರಿ. ಸರೋಜಮ್ಮನವರು ಇಂದು ಅಭೂತ ಪೂರ್ವ ಮರ್ಯಾದೆಯನ್ನು ಹೊಂದಿದ್ದಾರೆ. ಅದರಿಂದ ನಿಮಗೂ ಗೌರವ. ನಿಮ್ಮ ಮನೆತನಕ್ಕೂ ಗೌರವ.

ಸುಬ್ಬಾ — ಬೆಂಕಿಯಿಕ್ಕಿ ಇಂಥ ಗೌರವಗಳಿಗೆ ! ಧರ್ಮಣ್ಣನವರೇ ಇಂದಿನ ಸಂದರ್ಭವನ್ನು ನೋಡಿ ಹೊಟ್ಟೆಯಲ್ಲಿ ಸಾಸಿವೆ ಅರೆದು ಸುರಿದಂತಾಗಿದೆ. (ಉದ್ವಿಘ್ನಭಾವ) ಯಾವ ಜೋಯ್ಸ್ರ ಮನೆತನದ ಹೆಣ್ಣು ಮಕ್ಕಳು ತಲೆಯ ಮೇಲೆ ಸೆರಗೆಳೆದುಕೊಂಡು ಬೀದಿಯಲ್ಲಿ ಹೋಗುವಾಗ್ಗೆ ಅವರ ಮುಖನಂತೂ ! ಬಿಡಿ—ಮುಖದ ಮೇಲಿನ ಮೂಗು ಸಹಾ ಕಾಣುತ್ತಿದ್ದಿಲ್ಲವೋ, ಆ ಮನೆತನದ ಹೆಂಗಸು ಹೆಗಲ ಮೇಲೆ ಸೆರಗು ಒಗೆದುಕೊಂಡು ಓಡಾಡುವದೇ ? ಯಾವ ಜೋಯ್ಸ್ರ ಮನೆತನದ ಹೆಣ್ಣು ಮಕ್ಕಳು ಹಿತ್ತಲ, ಅಡಿಗೆ ಮನೆಯು ವಿನಃ ಪಡಸಾಲೆಯಲ್ಲಿ ಸಹ ಸುಳಿಯುತ್ತಿದ್ದಿಲ್ಲವೋ ಅದೇ ಮನೆತನದ ಈಗಿನ ಹೆಂಗಸು ಊರು ಹೊಲಗೇರಿಯೆಲ್ಲ ಸುತ್ತು ಹಾಕಬೇಕೇ ? ಯಾವ ತಿಪ್ಪಾ ಜೋಯ್ಸರ ಹೆಣ್ಣು ಮಕ್ಕಳ ಮಾತಿನ ಧ್ವನಿಯನ್ನು ನೆರೆಮನೆಯುವರು ಸಹ ಕೇಳಿದ್ದಿಲ್ಲವೋ ಅದೇ ಮನೆತನದ ಹೆಂಗಸು ವೀರಭದ್ರನ ಒಡಪು ಹೇಳುವ ಪುರಂತರಂತೆ ಸ್ವರ ತೆಗೆದು ಉದ್ದುದ್ದ ಕೈ ಬೀಸುತ್ತ ಒದರಾಡಿ ಒಂದೇ ಸವನೆ ಚಪ್ಪಳಿಕ್ಕಿಸಿಕೊಂಡು ನಗಿಸಿಕೊಳ್ಳಬೇಕೇ ? (ಉದಾಸ ಭಾವ) ಧರ್ಮಣ್ಣನವರೇ ಇನ್ನು ನಾವು ಬದುಕಿರಬಾರದು ಸಾಯಬೇಕು.

ಸರೋ — ಈಗಾಗಲೇ ೧೦೦ ಕ್ಕೆ ಇನ್ನೂ ೨೦ ವರ್ಷಗಳುಳಿದಿವೆ. ಈಗಾಗಲೇ ಸಾಯುವದೇ ?

ಸುಬ್ಬಾ — (ಆಶ್ಚರ್ಯತೆಯಿಂದ) ಯಾರು ಹಾಗೆ ಹೇಳುವವರು ? ೧೦೦ ಕ್ಕೆ ಇನ್ನು ೨೫ ವರ್ಷಗಳು ಉಳಿದಿವೆ. ಲೆಖ್ಖ ಹಾಕು. ಧರ್ಮಣ್ಣನವರೇ ರಕ್ತಾಕ್ಷಿಯಿಂದ ರಕ್ತಾಕ್ಷಿ ಅರವತ್ತು–ಕ್ರೋಧನ-ಕ್ಷಯ–ಅರವತ್ತೆರಡು ಪ್ರಭವದಿಂದ ಪ್ರಮಾಥಿ ಹದಿಮೂರು, ಒಂದು ಅರವತ್ತೆರಡು ಗುಣಿಲೇ ಹದಿಮೂರು. (೬೨ × ೧೩).

ಧರ್ಮಣ್ಣ — ಗುಣಿಲೇ ಅಲ್ಲ ಸ್ವಾಮಿ. ಅಧಿಕ ಎಂದು ಹೇಳಿ.

ಸುಬ್ಬಾ — ಹುಂ, ಹುಂ. ಒಂದರವತ್ತೆರಡು ಅಧಿಕ ಹದಿಮೂರು ಎಪ್ಪತ್ತೈದು ಆಯಿತು. ಇನ್ನೂ ಇಪ್ಪತ್ತೈದು ವರ್ಷಗಳುಳಿದಿವೆಯೋ ?

ಧರ್ಮಣ್ಣ — ಜೋಯಿಸರೇ ನಿಮ್ಮ ಮಾತುಗಳಿಗೆ ನಗಬೇಕೋ ಅಳಬೇಕೋ ಅದೇ ತಿಳಿಯುದಾಗಿದೆ. (ಬೀಗಲ್ ಸ್ವರ ಕೇಳುವದು)

ಸರೋಜ — (ಚಿತ್ತಕೊಟ್ಟು ಕೇಳಿ) ಓಹೋ ಧರ್ಮಣ್ಣನವರೇ ಚೈನಾಸಂಕಟಗ್ರಸ್ತ ನಿಧಿಯನ್ನು ಸೇಖರಿಸಲು ಸ್ವಯಂಸೇವಕಿಯರ ಪ್ರೊಸೆಷನ್ ಹೊರಡುವದು. ಅದರ ಅಗ್ರಭಾಗದಲ್ಲಿ ನಾನಂತೂ ಬೇಕೇ ಬೇಕು. ನೀವಿವರಿಗೆ ಸಾಧ್ಯವಾದರೆ ಈ ವಿಚಾರಗಳನ್ನೆಲ್ಲ ತಿಳುಹಿಸಿ. ನನಗೆ ನಿಲ್ಲಲು ಮಾರ್ಗವಿಲ್ಲ. (ಸರ್ರನೆಹೋಗಿ ಮನೆಯೊಳಗಿಂದ ರಾಷ್ಟ್ರಧ್ವಜವನ್ನು ಹೆಗಲಮೇಲೆ ಹೊತ್ತುಕೊಂಡು ಅವಸರದಿಂದ ಹೋಗುವಳು.)

ಸುಬ್ಬಾ — (ಬೆಪ್ಪನಂತೆ ನೋಡುತ್ತ) ಎಲಾ, ಎಲಾ, ಎಲಾ, ಹೆಗಲ ಮೇಲೆ ನಿಶಾನೆ ಹೊತ್ತುಕೊಂಡು ಫಂಡ್ರಾಪುರಕ್ಕೆ ಹೊರಟಳೋ ಏನೋ ವಿಠೋಬನ ವಾಲ್ಕರಿಯಾಗಿ ?

ಧರ್ಮಣ್ಣ — (ಭಟ್ಟನನ್ನು ಎಳೆಯುತ್ತ) ಬನ್ನಿ, ಬನ್ನಿ, ಇವೆಲ್ಲಾ ವಿಚಾರಗಳನ್ನು ವಿವರವಾಗಿ ಹೇಳುವೆನು ಬನ್ನಿ.

(ನಿಷ್ಕ್ರಾಂತ) (ಮೆರವಣಿಗೆ ನಿಧಿ ಸಂಗ್ರಹಕ್ಕೆ)

ಸರೋ — (ತ್ರಿವರ್ಣ ಝೆಂಡಾ ಸಮೇತ ಅಗ್ರಭಾಗದಲ್ಲಿರತಕ್ಕದ್ದು.)

॥ ಪದ ॥

ದೇವರಾಜ್ಞೆಯೆಂದರೇ ದೇಶದಾಜ್ಞೆಯಲ್ಲವೇ ।
ನಾವಕಾಶ ಮಾಡದೇ ಈ ಸುಯೋಗ ಸಾಧಿಸೇ ॥
ಹೇಡಿ ಭಟರು ನಗರದಿ ಬಿ । ಸಾಡುವಂಥ ಬಾಂಬಿನಿಂ ।
ಕೇಡಿಗೀಡಾದ ಜನಕೆ ನೀಡಿರಿಸಹಾಯವಾ ॥

ದೇಶ ಬಂಧು ಭಗಿನಿಯರೇ ಸುಮ್ಮನೇ ನೋಡುವಿರಲ್ಲಾ. ಸಲ್ಲಿಸಿ, ಸಲ್ಲಿಸಿ! ಸಂಕಟದಲ್ಲಿರುವ ಚೀನಾ ಬಂಧುಗಳ ಸಹಾಯಕ್ಕೆ ! ಶಕ್ತ್ಯಾನುಸಾರ ಏನಾದರೂ ಸಲ್ಲಿಸಿ ! ಇದೇನು ನಾಟಕದೊಳಗಿನ ದೃಶ್ಯವಲ್ಲಾ. ಬಿಕ್ಕೆ ಬೇಡುವ ಗೋಪಿಚಂದ, ಅಥವಾ ಮಹಾನಂದ ನಾಟಕದೊಳಗಿನ ಕುಷ್ಟರೋಗೀ ಪರಮೇಶ್ವರ, ಇಲ್ಲವೇ ಯಚ್ಚಮನಾಯಕ ನಾಟಕದೊಳಗಿನ ಕರಿಯಾಜಟ್ಟಿ ದಾಸಯ್ಯನಂಥ ಪಾರ್ಟುಗಳು ಸಿಕ್ಕಕೂಡಲೇ ಅದನ್ನೇ ರಸಭಂಗವಾಗುವಂತೆ ತಿಕ್ಕಾಡಿ, ಪ್ರೇಕ್ಷಕರಿಂದ ಕಾಸು ಕಲೆಹಾಕಿಕೊಂಡು ಆ ಹಣದಿಂದ ಕಾಫೀ ತಿಂಡಿ ತಿಂದು ತೇಗುವ ಹೇಸಿಮಾನಸರಾದ ನಟರು ಇವರಲ್ಲಾ. ನಿಮ್ಮಿಂದ ಸಿಕ್ಕ ಸಹಾಯ ಧನವನ್ನು ಸತ್ಸೇವೆಗಾಗಿ ನಿಂತ ಮಹಾ ಮಹಾ ಸಂಸ್ಥೆಗಳಿಗೆ ಕೊಡುವರು. ಅದಕ್ಕಾಗಿ "ತುರ್ತ ದಾನಂ, ಮಹಾಪುಣ್ಯ" ಸಲ್ಲಿಸಿ, ಏನಾದರೂ ಸಲ್ಲಿಸಿ.

ಡಾಕ್ಟರ — (ವ್ಹಿಸಲ್ ಮಾಡುವಾ) ಮತ್ತೆ ಪೂರ್ವೋಕ್ತ ॥ ದೇವರಾಜ್ಞೆಯಂದರೇ- ಎನ್ನುತ್ತ ಹೋಗುವರು.

ಎರಡನೇ ಬೀದಿ

ಸರೋ — ಬುದ್ಧಿಹೀನರಾಗುತೆ ಅಬದ್ಧ ಯುದ್ಧವಾಡುವಾ ।
ಬುದ್ಧಿಗೇಡಿ ಜನಕೆ ನಮ್ಮ । ಶುದ್ಧ ಪ್ರೇಮುಗಲಿಸುವಾ ।
ಮಹಾ ಜನವೇ ನಿಮ್ಮ ಗ್ರಾಮದಲ್ಲಿ ಸಿಕ್ಕ ಹಣವನ್ನು ಅಥವಾ ಬಟ್ಟೆ

ಬರೆಗಳನ್ನು ನಿಮ್ಮ ಗ್ರಾಮದ ಜವಾಬದಾರ ದೇಶ ಸೇವಾಬದ್ಧ ಕಾಂಗ್ರೆಸ ಕಮಿಟಿ ಇದ್ದರೆ ಅದರ ಸ್ವಾಧೀನಕ್ಕೇನೇ ಒಪ್ಪಿಸುವೆವು. ಅದನ್ನದು ಈ ಪಥಕವು ಚೀನಕ್ಕೆ ಹೋಗಿ ತಲ್ಪಿದ ಮೇಲೆ ಟಪಾಲ ದ್ವಾರಾ ಕಳುಹಿಸಬಹುದು.

ಡಾಕ್ಟರ — (ವ್ಹಿಸಲ್, ಮಾರ್ಚ,)

೩ ನೇ ಬೀದಿ

ಸರೋ — ತನುಮನಧನದಿಂದ ದೀನ | ಜನಕೋಟಿಯ ಸೇವೆಯಾ |
ಅನುನಯದಿಂ ಮಾಡಿ ಜಗದ | ಮನವೊಲಿಸುವ ಶಾಂತಿಗೆ |

ನಾನು ಹೇಳುವದು ತಮಾಷೆಯ ಮಾತಲ್ಲ. ದೇಶ ಬಂಧು ಭಗಿನಿಯರೇ! ಪಂಚವರ್ಣದ ಗಿಳಿಯಂತೆ ಸಿಂಗರಿಸಿಕೊಂಡು ಪೀಠಿಕೆಯಲ್ಲಿ ದೊಡ್ಡ ದೊಡ್ಡ ವೇದಾಂತದ ಮಾತುಗಳನ್ನು ಕೊಚ್ಚಿ, ಆರತಿಯ ತಟ್ಟೆಯ ಕಡೆಗೆ ಓರೆಗಣ್ಣಿನಿಂದ ನೋಡುತ್ತ ದುಬಾರಿ ಕೂಲಿಯಿಂದ ಕೀರ್ತನ ಮಾಡುವ ನಾಮಧಾರೀ ಹರಿದಾಸರಿಗೆ ಎಷ್ಟೆಷ್ಟೋ ದಾನ ಮಾಡುವಿರಿ. ಹೀಗಿರಲು ಶುಶ್ರೂಷಾಪಥಕ ವಿಚಾರವು ಇನ್ನೂ ನಿಮಗೆ ಹೊಳೆಯ ಲಿಲ್ಲವೇ ? ಇದೋ ನೋಡಿ ಬಡಿವೆಯಾದರೂ ಚಿಂತೆಯಿಲ್ಲ. ನನ್ನ ಸಹೋದರ ಸಹೋದರಿಯರಿಗೆ ಮೇಲ್ಪಂಕ್ತಿಯನ್ನು ಹಾಕಿಕೊಡಲು, ನನಗೆ ನನ್ನ ತವರುಮನೆಯವರು ಕೊಟ್ಟ ಈ ಜೋಡು ಕಾಪುಗಳಲ್ಲಿ ಸದ್ಯಕ್ಕೆ ಒಂದನ್ನು ಕೊಟ್ಟು ಬಿಡುವೆ. (ಕೊಟ್ಟು) ಇನ್ನು ಮೇಲೆ ನೀವು ನಿಮಗೆ ಸರಿದೋರಿದಂತೆ ಮಾಡಿರಿ. ಈ ವಿಷಯದಲ್ಲಿ ಹೆಚ್ಚಾಗಿ ಹೇಳಿದರೇ ಕ್ಷೇತ್ರಗಳ ಅಥವಾ ಮಹಾರಾಜರೆನಿಸಿಕೊಳ್ಳುವ ನಾಮ ಧಾರೀ ಸಾಧುಗಳ ವರ್ಣನೆಯನ್ನು ಬಣ್ಣ ಕೊಟ್ಟು ಯಥಾಸ್ಥಿತವಾಗಿ ಮಾಡಿ ಜನಗಳನ್ನು ಹುರಿದುಂಬಿಸಿ, ಆ ಕ್ಷೇತ್ರಗಳ ಅಥವಾ ಆ ಸಾಧು ಮಹಾರಾಜರ ಸಂಸ್ಥಾನಗಳ ಆದಾಯ ಬೆಳೆಸುವ ಹೊಗಳ ಭಟ್ಟ ಕಮಿಶನ್ ಏಜಂಟರ ಪಂಕ್ತಿಯಲ್ಲಿ ನನ್ನನ್ನು ಸಹ ಗಣಿಸಲಿಕ್ಕೆ ನೀವೇನು ಹಿಂದೆಗೆಯತಕ್ಕವರಲ್ಲಾ. ಆದಕ್ಕಾಗಿ ಇಷ್ಟಕ್ಕೆ ಸಾಕು. ಬರುವೆ. ವಂದೇಮಾತರಂ.

ಬ್ಯಾಂಕರ — (ಆವೇಶದಿಂದ) ಏ ಡಾಕ್ಟ್ರ್ಯ ಏನು ದೊಡ್ಡ ಮನುಷ್ಯನಯ್ಯಾ ನೀನು ? ಚಿಕ್ಕ ಚಿಕ್ಕ ಮಕ್ಕಳುಗಳಿಗೆ ಹೀಗೆ ಮಂಕು ಹಿಡಿಸಿ, ಓಡಿಸಿ ಕೊಂಡು ಹೋಗುವದು ನ್ಯಾಯವೇ ?

ಶೂಲ — ಹಾಗೆ ನಮ್ಮ ಸೇನಾಪತಿಗಳಿಗೆ ಕೆಟ್ಟ ಮಾತುಗಳನ್ನಾಡಬಾರದು. ನಾವೇ ಸ್ವಸಂತೋಷದಿಂದ ಚೀನಾ ರಣಕ್ಷೇತ್ರಕ್ಕೆ ಹೊರಟಿದ್ದೇವೆ.

ಬ್ಯಾಂಕರ — ಅಲ್ಲೇನು ಪ್ರಾಣ ಕೊಡಲಿಕ್ಕೆ ಹೋಗುವಿಯಾ ?

ಶೂಲ — ಇದ್ದರೂ ಇರಬಹುದು. ಜಪಾನಿಗಳ ಬಾಂಬಿನ ಪ್ರಸಾದವು ಸಿಕ್ಕರೇ ಪ್ರಾಣವಾದರೂ ಹೋಗಬಹುದು

ಬ್ಯಾಂಕರ — ಏ, ಡಾಕ್ಟ್ರ್ಯ ನನ್ನ ಮಗನನ್ನು ಬಿಡುವಿಯೋ ಇಲ್ಲವೋ ?

ಡಾಕ್ಟರ — ಬ್ಯಾಂಕರರೇ ನಾನೇನು ಅವರನ್ನು ಕಟ್ಟಿ ಹಾಕಿರುವೆನೇ ?

ಬ್ಯಾಂಕರ ಕನಕ — ಎಲೇ-ಲೇ-ಲೇ ಗಾಂಧೀಮರೀ ! ದೇಶಭಕ್ತಿ, ರಾಷ್ಟ್ರಭಕ್ತೀ, ದೇಶಾಭಿಮಾನ, ಭಾಷಾಭಿಮಾನ-ನಿಮ್ಮ ದೊಡ್ಡ ದೊಡ್ಡ ಮಾತುಗಳಿಂದ ಹುರಿದುಂಬಿಸಿ, ಇಂಥಹ ಬಂಗಾರದಂಥ ಮಕ್ಕಳನ್ನು ಬಲಿಗೊಟ್ಟು ನೀವು ದೊಡ್ಡಿಸ್ತಿಕೆಯಿಂದ ಲಡ್ಡು ಜಿಲೇಬಿ ಹೊಡೆಯುತ್ತ ಚೈನಿ ಮಾಡಬೇಕೆನ್ನುವಿರಾ ?

ಶೂಲ — ತಂದೆಯವರೇ ! ನಿಮ್ಮ ನಿಂದೆಯು ಮೇರೆಯನ್ನು ಮೀರಿತು. ನನ್ನ ಸಲುವಾಗಿ ಎಂತಹ ಕೀಳ ಮಾತುಗಳನ್ನಾದರೂ ಬಳಿಸಬಹುದು. ಆದರೇ ಆ ಜಗದ್ವಂದ್ಯ ವಿಭೂತೀ ಮಹಾತ್ಮಾಗಾಂಧೀಜೀಯವರ ಸಲುವಾಗಿ ದುಃಶಬ್ದಗಳನ್ನಾಡಿ ದುರ್ಗತಿಯ ಸಾಧನ ಮಾಡಿಕೊಳ್ಳ ಬಾರದು.

ಬ್ಯಾಂಕರ ಕನಕ — ಎಲೇ-ಲೇ ಶೂಲ್ಯಾ ! ಆ ನಿನ್ನ ಜಗದ್ವಂದ್ಯ ವಿಭೂತೀ ನನ್ನ ಕೈಗೆ ಸಿಕ್ಕಿದ್ದರೇ ಹೇಳುತ್ತಿದ್ದೆ. ಅದೆಲ್ಲವಿರಲಿ. ನೀನು ಇದೇ ಕ್ಷಣವೇ ಮನೆಗೆ ನಡೆ.

ಶೂಲ — ಬರಲಾರೆ.

ಡಾಕ್ಟರ — ಹಾಗೆ ಅವರು ಮನೆಗೆ ಹೋದರೆ ಪ್ರತಿಜ್ಞಾಭಂಗ ಮಾಡಿದ ಮಹಾಪಾತಕಕ್ಕೆ ಗುರಿಯಾದಾರು.

ಬ್ಯಾಂಕರ — ನಿನ್ನ ತಲೆಯನ್ನು ಒಡೆದುಹಾಕಲೋ (ಬಡಿಗೆಯನ್ನು ಡಾಕ್ಟರನ ತಲೆಯಮೇಲೆ ಹೇರುವಾಗ್ಯೆ ಸರೋಜಮ್ಮನು ಹಿಂದಿನಿಂದ ಅದನ್ನು ಹಿಡಿಯುವಳು)

ಡಾಕ್ಟರ — ಬ್ಯಾಂಕರರೇ ! ನಿಮ್ಮಿಂದ ನನ್ನ ತಲೆಗೆ ಪೆಟ್ಟುಹಾಕಿಸುವದು ಸತ್ಯಕ್ಕೆ ಸಮ್ಮತ ವಿಲ್ಲವಂತೇ ನನ್ನ ರಕ್ಷಣೆಗಾಗಿ, ಅದು ಸರೋಜಮ್ಮನವರನ್ನು ಕಳುಹಿಸಿದೆ.

ಶೂಲ-ಗೌರಿ — ಸಂದೇಹವೇನು ?

ಸರೋಜ — ಬ್ಯಾಂಕರರೇ ! ನಿಮಗೇಕೆ ಆ ಶ್ರಮವು ? ನಿಮ್ಮ ಲಾಠೀ ಪೆಟ್ಟಿಗಿಂತಲೂ ಸಾವಿರಪಾಲು ಹೆಚ್ಚಾಗಿ ಬಿರುಸಾದ ಜಪಾನಿಯರ ಬಾಂಬಿನ ಪೆಟ್ಟುಗಳಿಂದ ಇವರೆಲ್ಲರೂ ಅನಾಯಾಸವಾಗಿ ಸಾಯುವರು.

ಬ್ಯಾಂಕರ — (ಹಲ್ಲುಕಟಿದು) ಥೂ ಬೀದಿ ಬಸಿವೆ ಏನಮಂಗಲ ಬೊಗಳುವೆ ? ಹೊಟ್ಟೆಗೆ ಹಿಟ್ಟಿಲ್ಲದವರೆಲ್ಲ ಈ ದೇಶಾಭಿಮಾನ, ಭಾಷಾಭಿಮಾನಗಳ ಮಬ್ಬಿಗೆ ಬಿದ್ದು ಸುತ್ತುಕೊಳ್ಳಲಿ. ನಮ್ಮಂಥ ಶ್ರೀಮಂತರ ಮಕ್ಕಳ ಜೀವವು ಅಷ್ಟು ಅಗ್ಗವಾಗಿ ಬೀದಿಯಲ್ಲಿ ಬಿದ್ದಿಲ್ಲ. ಏನನ್ನುವಿಯೋ ಏ ಡಾಕ್ಟ್ರ್ಯ? ನಿನ್ನಜ್ಜ ಬಂದರೂ ನಾನು ನನ್ನ ಶೂಲಪಾಣಿಯನ್ನು ಬಿಡಲಾರೆ.

ಡಾಕ್ಟರ — ಕರೆದುಕೊಂಡು ಹೋಗಿ; ಯಾರು ಬೇಡೆನ್ನುವರು ?

ಶೂಲ — ಯಾರು ಕರೆದರೂ ಬರುವದಿಲ್ಲ. ಮತ್ತು ಯಾರು ಕಳುಹಿಸಿದರೂ ಹೋಗುವದಿಲ್ಲ. ರಾಷ್ಟ್ರಪತಿಗಳ ಇಚ್ಛೆಯನ್ನು ನೆರವೇರಿಸುವದೇ ನಮ್ಮ ಪವಿತ್ರತಮ ಧರ್ಮವು. ತಾವು ಹಿಂತಿರುಗಬೇಕು. ವಿಶೇಷವೇನು ? ಈ ಸಮಯಕ್ಕೆ ನನ್ನ ಕುಲದೈವತವು ಪ್ರತ್ಯಕ್ಷವಾಗಿ ಬಂದು ಹೇಳಿದರೂ ನಾನೇನು ಮನೆಗೆ ಬರಲಾರೆ. ತಾವು ದಯಮಾಡಿಸಿ.

ಬ್ಯಾಂಕರ — (ಸ್ವಗತ) ಈ ತಿರುಕರ ಪಿಡುಗು ಶ್ರೀಮಂತರನ್ನು ಸಹ ಸುತ್ತುಗಟ್ಟಿತು. ರಾಮಜೀ ರಾಮಜೀ ಓಡುತ್ತಹೋಗಿ ನಮ್ಮ ಜಿನ್ನಿಂಗ ಫ್ಯಾಕ್ಟರಿಯ ಆಳುಗಳನ್ನು ಕರೆದುಕೊಂಡು ಬಾ. ಇವರೆಲ್ಲರ ಮುಸುಕೆಯನ್ನು ಕಟ್ಟಿಹಾಕಿಸಿ; ಶೂಲಪಾಣಿಯನ್ನು ಕೊಂಡೊಯ್ಯುವಾ.

ರಾಮಜೀ — ಜೀ ಹುಕುಂ. (ಎಂದು ಹೋಗಿ ತಿರುಗಿ ಬಂದು) ಆದರೆ ಈ ಗಾಂಧೀ ಜನರಮೇಲೆ ಅವರು ಕೈ ಮಾಡಲಾರರು ಧಣೀ.

ಬ್ಯಾಂಕರ — (ಅತಿ ಸಿಟ್ಟಿನಿಂದ) ಬದ್ಮಾಷ್ ನಾಯೀ ! ಸುಮ್ಮನೆ ಹೋಗಿ ಕರೆ ತರುವದು ಬಿಟ್ಟು ಎದುರುತ್ತರ.

ರಾಮಜೀ — (ತಿರಸ್ಕಾರಭಾವ) ಧಣೀ! ಹಾಗೆ ಬಾಯಿ ಹರೆ ಬಿಡಬಾರದು. ನಾನು ಬದ್ಮಾಷ್‌ನೂ ಅಲ್ಲಾ ಮತ್ತು ನಾಯಿಯಂತೂ ಅಲ್ಲವೇ ಅಲ್ಲಾ. ನಾನೂ ತಮ್ಮಂತಹ ಮನುಷ್ಯನೇ! ತಾವೇನು ನನಗೆ ಬೈಸಿಕೊಳ್ಳುವ ಕರಾರಿನಿಂದ ಚಾಕರಿಗಿಟ್ಟುಕೊಂಡಿಲ್ಲವಲ್ಲಾ? ಅಥವಾ ಬೈಸಿಕೊಳ್ಳಲಿಕ್ಕೆ ಬೇರೆ ಸಂಬಳವನ್ನೇನಾದರೂ ಕೊಡುವಿರಾ?

ಬ್ಯಾಂಕರ — ಬಸ್, ಫಾಜಿಲ್, ಹೊರಟು ಹೋಗು ನಮಗೆ ನಿನ್ನ ನೌಕರಿಯೇ ಬೇಕಿಲ್ಲ.

ರಾಮಜೀ —ಜೀ- ರಾಮ. ರಾಮ. (ನಮಿಸಿ ಬಿಗುವಿನಿಂದ ಹೋಗುವನು.)

ಗೌರಿ ಮತ್ತು ಎಲ್ಲರೂ — ಬೋಲೋ ಭಾರತ ಮಾತಾಕೀ ಜೈ. ಕರ್ನಾಟಕ ಮಾತಾಕೀ ಜೈ. ವಂದೇ ಮಾತರಂ.

ಬ್ಯಾಂಕರ — (ಗೌರಿಯು ಸಪ್ಪಳವನ್ನು ಕೇಳಿ ಹುಡುಕಾಡಿನೋಡಿ) ಓಹೋ ಸಮವಸ್ತ್ರದಲ್ಲಿ ಇವಳಿವಳೋ ಎಂದುಕೊಂಡಿದ್ದೆ. ಇವಳು ಗೌರಿ, ಕಂಚಿನ ಗೌರಿ, ಗುಲ್ಲುಗಂಟೆ.

ಗೌರಿ — (ಸಿಟ್ಟಿನಿಂದ) ಬ್ಯಾಂಕರರೇ ನಾಲಿಗೆಯನ್ನು ಬಿಗಿ ಹಿಡಿಯಬೇಕು. ಅಸಭ್ಯ ಮಾತುಗಳನ್ನು ಬಳಿಸಬಾರದು.

ಬ್ಯಾಂಕರ — ಇಲ್ಲಿ ನಿನ್ನ ಉದ್ದೇಶವು ಸಾಧಿಸಲಿಲ್ಲವೆಂದು ನನ್ನ ಶೂಲಪಾಣಿಯನ್ನು ಚೀನ ದೇಶಕ್ಕೆ ಓಡಿಸಿಕೊಂಡು ಹೊರಟಿರುವಿಯಾ?

ಗೌರಿ — ಓಡಿಸಿಕೊಂಡು ಹೋಗುವದಕ್ಕೆ ನಿಮ್ಮ ಶೂಲಪಾಣಿಯೇನು ಪಶುವೇ ?

ಬ್ಯಾಂಕರ — ಎಲೇಲೇ ಬಜಾರಿ.

ಗೌರಿ — ಛೀ ! ಬಾಯಿ ಮುಚ್ಚು.

ಶೂಲ — ತಲೆಯೂ ಸಮವಿಲ್ಲ.

ಸರೋ — ತಲೆಯೂ ಸಮವಿಲ್ಲದ ಕಾರಣವಲ್ಲ. ಶ್ರೀಮಂತಿಕೆಯ ಮಬ್ಬು ಕಣ್ಣಿಗೇರಿದಾಗ್ಗ ಒಡವರು ಕಾಣುವದಿಲ್ಲ-

ಬ್ಯಾಂಕರ — (ಸಿಟ್ಟಿನಿಂದ ಜಗ್ಗಿ ಕೂಗಿ) ಆಟ್ಪ್ರನ್ಸ್ ನನ್ನ ಮಗನನ್ನು ಬಿಟ್ಟು ಹೋಗಿ, ಇಲ್ಲವಾದರೇ ಇದೋ ನೋಡಿ ಉರುಸುವೆನು. (ಪಿಸ್ತೂಲ ಡಾಕ್ಟರನ ಎದೆಗೆ ಗುರಿಯಾಗಿ ಹಿಡಿದಿರಲು)

ಶೂಲ — (ಬ್ಯಾಂಕರನ ಪಿಸ್ತೂಲಿಗೆ ಎದುರಾಗಿ) ನಿಮ್ಮ ಮಗನನ್ನು ಮೊದಲು ಉರುಳಿಸಿರಿ. ಆ ಮೇಲೆ ಡಾಕ್ಟರರನ್ನು.

ಸರೋ — (ಲಟಿಕೆ ಹಾಕುತ್ತ) ಹುಂ. ಬ್ಯಾಂಕರರೇ ! ಹಾರಿಸಿ ಪಿಸ್ತೂಲ !! ಒಂದೇಟಿಗೆ ಎರಡು ಬೇಟೆಗಳು ಬೀಳುವವು.

ಕಮಲಮ್ಮ — (ಗಾಬರಿಯಾಗಿ ಬಂದು ಬ್ಯಾಂಕರರ ಕೈ ಪಿಸೂಲ ಕಸಿದು) ಅಯ್ಯೋ, ಅಯ್ಯೋ ಇದೇನನರ್ಥ! ತಾವು ಮನೆಗೆ ಹೋಗಿ; ನಾನು ಹೇಗಾದರೂ ಮಾಡಿ ಶೂಲಪಾಣಿಯನ್ನು ಕರೆದುಕೊಂಡು ಬರುವೆನು. ಹೋಗಿ ಅಂದರೇ, ಅಯ್ಯೋ ನಿಮ್ಮ ಆವೇಶವೇ; ದಯವಿಟ್ಟು ಹೋಗಿಯಂದರೇ.

ಬ್ಯಾಂಕರ — (ಡಾಕ್ಟರನ ಮೇಲೆ ಏರಿ ಹೋಗುತ್ತ) ಎಲೇ ಡಾಕ್ಟ್ರ್ಯ ಬಿಳೀ ಟೊಪ್ಪಿಗೀ ನನ್ನ ಮಗನನ್ನೊಂದೇ ಕರೆದುಕೊಂಡು ಹೋಗು ಆ ಮೇಲೆ ನನಗಿದೆ ನಿನಗಿದೆ ಬಾ ಮಗನೇ.

ಶೂಲ — ಅವರು ಬೇಡವೆಂದರೂ ನಾನೆಲ್ಲಿ ಬಿಡುವೆನು.

ಬ್ಯಾಂಕರ — ಸತ್ತುಹೋಗು ಮಗನೇ.

ಶೂಲ — ತಮ್ಮ ಆಶೀರ್ವಾದ ವಿದ್ದರೇ ಜೈನಾರಣ ಭೂಮಿಯಲ್ಲಿ ಸತ್ತೇ ಹೋಗುವ ಭಾಗ್ಯವನ್ನು ಪಡೆಯುವೆನು.

ಕಮಲಮ್ಮ — (ಅಳುತ್ತ) ಅಮಂಗಲ ದೂರಾಗಲಮ್ಮಾ (ಎಂದು ಬದಿಗೆ ಚಟಕು ಮುರಿಯುವಳು) ಬೇಡ ಮಗು ಹಾಗನ್ನ ಬೇಡಾ (ಬ್ಯಾಂಕರನನ್ನು ದಬ್ಬುತ್ತ) ನೀವು ದಯಮಾಡಿ ಮನೆಗೆ ಹೋಗಿರಿ. (ಅವನು ಹೋದ ಬಳಿಕ) ಡಾಕ್ಟರರೇ ದಯಮಾಡಿ ನನ್ನ ಮಗನನ್ನು ಬಿಟ್ಟು ಹೋಗಿರಪ್ಪಾ.

ಶೂಲ — (ಒಂದು ಬದಿಗೆ ಧರ್ಮಣ್ಣಾ ವಸುಂಧರಾದೇವಿಯುವರು ಆರತಿಯೊಂದಿಗೆ ಗೌರಿಗೆ ಆಶೀರ್ವದಿಸಲು ಬರುವರು ಅದನ್ನು ನೋಡಿ) ಅದೋ ಗೌರಿಗೆ ಆಕೆಯ ತಂದೆ ತಾಯಿಗಳು ಹೇಗೆ ಆಶಿರ್ವದಿಸಿ, ಕಳುಹಿಸುತ್ತಿರುವರೋ ಹಾಗೆ ನೀನಾದರೂ ಮಾಡಬಾರದೇ ?

ಧರ್ಮಣ್ಣಾ — ಮಗು ಗೌರಿ! ಮಹತ್ಕಾರ್ಯಕ್ಕಾಗಿ ಹೊರಟ ನಿನಗೆ ನಿನ್ನ ಹಡೆದವಳು ಹರಿಸಿ, ಬೀಳ್ಕೊಡಲು ಬಂದಿದ್ದಾಳೆ. ಸ್ವಲ್ಪ ಹೀಗೆ ನಿಲ್ಲು.

ಗೌರಿ — ಇಂಥವೆಲ್ಲ ಮರ್ಯಾದೆಯನ್ನು ಹೊಂದುವದಕ್ಕೆ ನಮಗೆ ನಮ್ಮ ಕಮಾಂಡರ ಅಪ್ಪಣೆ ಬೇಕು.

ಡಾಕ್ಟರ — ಗೌರಮ್ಮಾ ಆಶೀರ್ವಾದವನ್ನು ಹೊಂದುವದಕ್ಕೆ ನಮ್ಮ ಅಪ್ಪಣೆಯ ಅಗತ್ಯವಿಲ್ಲ. ಧರ್ಮಣ್ಣಾ ವಸುಂಧುರಾದೇವಿಯುವರೇ ಆಶೀರ್ವದಿಸಿ, ಮಗಳು ಲೋಕೋತ್ತರ ಕೀರ್ತಿಯನ್ನು ಪಡೆಯಲೆಂದು ಆಶೀರ್ವದಿಸಿ.

ವಸುಂಧರಾ — (ಗೌರಿಗೆ ಆರತಿ ಮಾಡುವಷ್ಟರಲ್ಲಿ ಡಾಕ್ಟರ ವ್ಹಿಸಲ್ ಮಾಡುವನು.)

ಶೂಲ —ಅದೋ ಕಮಾಂಡರರ ಅಪ್ಪಣೆಯಾಯಿತು. ನಾನಿನ್ನು ತಡೆಯಲಾರೆ. (ಹೋಗುವನು.)

ಕಮಲಮ್ಮ — (ಅಳುತ್ತ) ಶೂಲಪಾಣೀ ! ಮಗೂ ಶೂಲಪಾಣೀ!! ನನ್ನನ್ನು ಬಿಟ್ಟು ಹೋಗಬೇಡಾ.

ಸರೋ — ಕಮಲಮ್ಮನವರೇ ! ಸೈನಿಕರು ಒಂದು ಸಮಯ ಶಿಸ್ತು ಭಂಗ ಮಾಡಬಹುದು ? ಆದರೆ ಕಟ್ಟಾ ಕಾಂಗ್ರೆಸ ಭಕ್ತರು ಎಂದೂ ಶಿಸ್ತು ಭಂಗ ಮಾಡರು.

|| ಪದ್ಯ ||

ದೇಶ ಸೇವಾಬದ್ಧ ವೀರನಾರಿಯರು ಆಶೆ ಮಾಡರು ಸ್ವಹಿತ
ಸಾಧನೆಯೊಳೂ || ಪಾಶಹರಿದೊಗೆದು ಸನ್ಯಾಸಿಗಳ ತೆರವೋಹ |
ಅಸುವಿದ್ದರು ನಡೆವರು || ಚಲಿಸಬಹುದಚಲಕುಲ |
ಜಲಧಿ ಮೇರೆಯ ದಾಟಿ ಬಳಿಸಬಹುದೊಂದು ಸಮಯಾ |
ಸಲೆ ಗಾಂಧಿ ಮಾತ್ಮನ ದಲದವರು ಶಿಸ್ತನು ಪ್ರಲಯವಾದರು
ಮಿಾರರು ||

ಪ್ರವೇಶ

(ರಾಷ್ಟ್ರಪತಿಗಳ ಶಿಬಿರ. ಉನ್ನತವಾಗಿ ಒಂದು ಪಕ್ಕಕ್ಕೆ ರಾಷ್ಟ್ರಧ್ವಜವು ಹಾರುತ್ತಲಿದೆ. ರಾಷ್ಟ್ರಪತಿಗಳು ತಮ್ಮ ಕಾರ್ಯದಲ್ಲಿ ನಿರತರಾಗಿದ್ದಾರೆ. ಹತ್ತಿರ ಕಾರ್ಯದರ್ಶಿಗಳು ತಕ್ಕ ಮರ್ಯಾದೆಯಿಂದ ನಿಂತಿದ್ದಾರೆ.

ರಾಷ್ಟ್ರಪತಿ — ಓಹೋ! ಕರ್ನಾಟವು ಎಷ್ಟು ತೀವ್ರ ಸೇವಾದಲವನ್ನು ಸಿದ್ಧಪಡಿಸಿತು! ಅದು ಇಂದು ಬರುವದೇನು ?

ಸೆಕ್ರೆಟರಿ — ಈಗಾಗಲೇ ಬಂದು ಬಿಟ್ಟಿದೆ. ಮತ್ತು ರಾಷ್ಟ್ರಪತಿಗಳ ಅಪ್ಪಣೆಯನ್ನು ಎದುರು ನೋಡುತ್ತಲಿದೆ.

ರಾಷ್ಟ್ರಪತಿ — ಬರಮಾಡಿಸಿ, ಅದರ ಕಮಾಂಡರ ಮತ್ತು ಕ್ಯಾಪ್ಟನ್‌ರನ್ನು.

ಸೆಕ್ರೆ — (ನಾಲ್ಕು ಹೆಜ್ಜೆ ತೆರೆ ಸರಿದು) ಕರ್ನಾಟಕ ಸೇವಾ ಪಥಕ (ಮೂರು ಸಲ)

ತೆರೆ — ಹಾಜರ್.

ಸೆಕ್ರೆ — ಕಮಾಂಡರ ಮತ್ತು ಕ್ಯಾಪಟನ್ನರು ಬನ್ನಿ.

ಡಾಕ್ಟರ-ಗೌರಿ-ಶೂಲಪಾಣಿ — (ಮಿಲಿಟರಿ ಪದ್ಧತಿಯಲ್ಲಿ ಬಂದು ರಾಷ್ಟ್ರಪತಿಗಳನ್ನು ಸನ್ಮಾನಿಸುವರು.)

ರಾ. ಪತಿ — (ಎದ್ದು ಬಂದು ಸ್ವಾಗತವನ್ನೀಯುತ್ತ) ಏನು ಬಾಲಕಾ ಪಥಕವೂ ಸಮರಭೂಮಿಗೆ ನಡೆದಿದೆಯೇ ?

ಡಾಕ್ಟರ — ಗೌರಿಮಂಡಲವೆನ್ನುವ ಅವಿವಾಹಿತ ಯುವತಿಯರ ದಲವಿದು. ಈ ಗೌರಮ್ಮನು ಅದರ ಕ್ಯಾಪ್ಟನ್, ವರದಕ್ಷಿಣಾ ರೂಪದಿಂದ ತವರು ಮನೆಗೆ ಡಾಕೇ ಹೊಡೆಯುವದನ್ನು ನಿಷೇಧಿಸಿ, ಅವಿವಾಹಿತೆಯರಾಗುವ ಪ್ರತಿಜ್ಞೆಯಿಂದ ರಾಷ್ಟ್ರ ಸೇವೆಗೆ ಸಿದ್ಧರಾಗಿ ಬಂದಿದ್ದಾರೆ.

ರಾ. ಪತಿ — (ಗದ್ಗತಿತನಾಗಿ) ಬ್ಯೂಟೀಫುಲ್ ! ಭಾರತಾಂಬೇ ! ನಿಸ್ಸಂದೇಹವಾಗಿ ನಿನ್ನ ಭಾಗ್ಯೋದಯ ಕಾಲವು ಸಮೀಪಿಸಿದೆ,ನಿನ್ನ ಹೆಸರೇನಮ್ಮಾ

ಗೌರಿ — ಗೌರಿ.

ರಾ. ಪತಿ — ಅಹಹಾ ! ಗೌರವಸ್ಥಾನಕ್ಕೆ ಒಪ್ಪುವ ನೀನು ನಿಜವಾದ ಗೌರಿಯೇ ಅಹುದಮ್ಮಾ

ಗೌರಿ — (ತಲೆಬಾಗಿ ನಮಿಸುವಳು.)

ರಾ. ಪತಿ — ಕುಮಾರಿ ಗೌರೀ ! ಭಾರತಾಂಬೆಯ ಸುಪುತ್ರಿಯರಾದ ನೀವು ಗಳು ದೇಶಸೇವಾಪ್ರೇರಿತರಾಗಿ ಚೈನಾ ರಣಕ್ಷೇತ್ರಕ್ಕೇನೋ ಹೋರಟಿರುವಿರಿ. ಅಲ್ಲಿ ಅಕಸ್ಮಾತ್ ಸಂಧಿ ಸಾಧಿಸಿ, ಹೀನವೃತ್ತಿಯ ಜಪಾನೀ ನರಪಶುಗಳು ನಿಮ್ಮ ಮೇಲೆ ಅತ್ಯಾಚಾರ ನಡಿಸಲುದ್ಯುಕ್ತರಾದರೆ ಅವರನ್ನು ಹೇಗೆ ಪ್ರತಿಭಟಿಸುವಿರಿ ? ಆ ಸಾಮರ್ಥ್ಯವು ನಿಮ್ಮಲ್ಲೆಲ್ಲಿದೆ ?

ಗೌರಿ — ದುರ್ದೈವದಿಂದ ಅಂತಹ ಪ್ರಸಂಗವೇ ಬಂದರೇ ಮತ್ತು ಅವರನ್ನು ಪ್ರತಿಭಟಿಸುವದು ನಮಗೆ ಸಾಧ್ಯವಾಗದಿದ್ದರೇ ಇದೋ (ತನ್ನ ಉಡಿಯಿಂದ ಪಿಸ್ತೂಲ ತೆಗೆದು ತನ್ನ ಮುಲೆಕೆಗೆ ಹಚ್ಚಿಕೊಂಡು) ಇದರ ಸಹಾಯದಿಂದ ಎಂದೂ ಅವರ ಕೈಗೆ ಸಿಗದ ಸ್ವರ್ಗಕ್ಕೆ ಅರೆಕ್ಷಣದಲ್ಲಿ ಹಾರಿ ಹೋಗುವೆವಲ್ಲದೇ ಮರ್ಯಾದೆಗೆ ಮಾತ್ರ ಎಂದೂ ಭಂಗ ತಂದುಕೊಳ್ಳಲಾರೆವು.

ರಾ. ಪತಿ — ಹಾಗೆ ಮಾಡದೇ ಅದೇ ಪಿಸ್ತೂಲ ಅವರ ಸಲವಾಗಿ ಉಪಯೋಗಿಸಬೇಕು.

ಗೌರಿ — ಅದು ಅಹಿಂಸಾ ಧರ್ಮಕ್ಕೆ ಸಲ್ಲದ ವರ್ತನೆಯಾಗುವದು.

ರಾ. ಪತಿ — ಭಾಪು ! ಭಾಪು! ಕುಮಾರೀ ಅಹಿಂಸಾತತ್ವವು ದೇಶಭಕ್ತರೆಂದು ಮುಂದೆ ಬರುವ ಪ್ರತಿಯೊಬ್ಬರಿಗೆ ನಿನ್ನಷ್ಟಾದರೂ ಮನದಟ್ಟವಾಗಿದ್ದರೇ ಮಹಾತ್ಮರ ಉದ್ದೇಶವು ಎಂದೋ ನೆರವೇರುತ್ತಿತ್ತು. (ಶೂಲಪಾಣಿಯ ಕಡೆಗೆ ನೋಡಿ) ನೀವು ಬಾಯ್‌ಸ್ಕೌಟ್ ಕ್ಯಾಪ್ಟನ್ನರೋ ? (ಅನುಮಾನ ಭಾವದಿಂದ) ನಿಮ್ಮನ್ನು ಎಲ್ಲಿಯೋ ಕಂಡಂತಿದೆಯಲ್ಲಾ ! ಎಲ್ಲಿ ಕಂಡದ್ದು ?

ಶೂಲ — ಹಿಂಡಲಿಗಿ ಜೇಲಿನಲ್ಲಿ.

ರಾ. ಪತಿ — (ನಕ್ಕು) ನೀವಂತೂ ನುರಿತವರು. ಆದರೆ ಚೈನಾರಣಾಂಗಣದಲ್ಲಿ ಬೀಳುವ ಪೆಟ್ಟುಗಳು ಬ್ರಿಟಿಶ್ ಗವ್ಹರ್ನಮೆಂಟ ಪೋಲಿಸಿನ ವಾಂಛ್ಲ್ಯದ ಲಾಠೀ ಪೆಟ್ಟುಗಳಲ್ಲ, ಜಪಾನಿಯರ ಪ್ರಾಣಘಾತಕ ಬಾಂಬಿನ

ಪೆಟ್ಟುಗಳು. ಅಂತಹ ರುದ್ರತಾಂಡವ ಭೂಮಿಯಲ್ಲಿ ಚೈನಾಬಂಧು ಗಳ ಸೇವೆಯನ್ನು ಮಾಡಬೇಕು. ನೀವು ಬಲ್ಲಿರೋ ?

ಶೂಲ — ಶ್ರೇಷ್ಠವಾದ ಜಗತ್ಸೇವೆಗಾಗಿ ನಮಗವಕಾಶವನ್ನು ಕಲ್ಪಿಸಿ ಕೊಟ್ಟ ರಾಷ್ಟ್ರಪತಿಗಳಿಗೆ ಅನಂತ ವಂದನೆಗಳು.

ರಾ. ಪತಿ —. ಕೆಚ್ಚೆದೆಯ ಹಿಂದೂಪುತ್ರನು ಅಹುದಯ್ಯಾ ನೀನು. ಆಗಲಿ, ಹೋಗಿ ಬನ್ನಿ; ಸತ್ಯವು ನಿಮ್ಮನ್ನು ಕಾಪಾಡಲಿ. ಕಮಾಂಡರ ಜೊತೆ ಯಲ್ಲಿ ಸಾಕಷ್ಟು ಔಷಧೋಪಚಾರಗಳ ಸಾಮಗ್ರಿ ಇರುವದೇ ?

ಡಾಕ್ಟರ — ಸದ್ಯಕ್ಕೆ ನಾಲ್ಕಾರು ಸಾವಿರ ಜನಕ್ಕೆ ಸಾಕಾಗುವಷ್ಟಿದೆ ಪರಾಂಬರಿಸೋಣಾಗಲಿ.

ರಾ. ಪತಿ — (ಫೋನ ಗಂಟೆ ಕೇಳಿ) ಸ್ವಲ್ಪ ತಡೆಯಿರಿ, ಹಲೋ, ಯಾರು.... ....ನಾನು ಕಾಂಗ್ರೆಸ ಪ್ರೆಸಿಡೆಂಟ. ತಾವು ಯಾರು............ವಂದನೆ ಗಳನ್ನು ಸ್ವೀಕರಿಸೋಣಾಗಲಿ ಪೂಜ್ಯ ಬಾಪೂಜೀ. ಪ್ರಕೃತಿಯು ಚನ್ನಾ ಗಿದೆ. ಚೈನಾ ಸಂಕಟ ಗ್ರಸ್ತರ ಸಹಾಯಕ್ಕಾಗಿ ತಕ್ಕ ಸಿದ್ಧತೆಯೊಡನೇ ಕರ್ನಾಟಕದಿಂದೊಂದು ಸೇವಾಪಥಕವು ಬಂದು ನಿಂತಿದೆ. ಅದಕ್ಕೆ ಬೀಳ್ಕೊಡುವ ಅವಸರದಲ್ಲಿದ್ದೇನೆ. ತಾವಾದರೂ ಅದಕ್ಕೆ ಆಶೀರ್ವಾದ ಸಂದೇಶವನ್ನು ಕಳುಹಿಸಬೇಕೆಂದು ಬೇಡಿಕೊಳ್ಳುವೆ. (ರಿಸೀವ್ಹ ಮಾಡಿ ಕೊಂಡು) ಕೇಳಿ ! ಶುದ್ಧಾಚರಣೆಯಲ್ಲಿದ್ದು, ಶುದ್ಧ ಮನಸ್ಸಿನಿಂದ ಸ್ವಲ್ಪವೂ ಮೈಗಳ್ಳತನ ಮಾಡದೇ ಪ್ರೇಮ-ದಿಂದ ಚೈನಾ ಬಂಧುಗಳ ಸೇವೆಯನ್ನು ಮಾಡಿ ಭಾರತಕ್ಕೆ ಕೀರ್ತಿಯನ್ನು ತರಬೇಕೆಂದು ಮಹಾ ತ್ಮಾಜಿಯವರು ಸಂದೇಶ ಕಳುಹಿಸಿದ್ದಾರೆ. ಹೋಗಿ ಬನ್ನಿರಿ. ಸತ್ಯವು ನಿಮ್ಮನ್ನು ಕಾಪಾಡಲಿ. (ವಂದನೆ ಮಾಡುವರು.)

— ಅಂಕು —

(ಚೀನ ದೇಶ ಹಳದೀ ನದಿಯ ತೀರದಲ್ಲಿ ಶುಶ್ರೂಷಾಲಯವಿದ್ದಂತೆ ಯುದ್ಧ ಮಾನ ಪ್ರವೇಶ—ಅಡವಿಯ ಮಾರ್ಗದಲ್ಲಿ.)

ಡಾಕ್ಟರ — (ತಿರಸ್ಕಾರಭಾವ) ಥೂ, ಥೂ. ಪಾಪೀ ಜಪಾನಿಯರೇ! ಮಹಾತ್ಮಾ ಗೌತಮ ಬುದ್ಧನ ಮತಾನುಯಾಯಿಗಳೆಂದು ಹೇಳಿಕೊಳ್ಳುವ ನಿಮಗೆ

ನಾಚಿಕೆಯಿಲ್ಲ. ಇರುವೆ ತಗಣಿಗಳಂಥ ಕ್ರಿಮಿಗಳನ್ನು ಸಹ ಹಿಂಸಿಸ ಬಾರದೆಂದು ಕಲಿಸುವ ಆತನ ಧರ್ಮವೆತ್ತ ? ನಿಷ್ಪಾಪ ಚೀನೀ ನಾಗ ರೀಕರ ಮೇಲೆ ಬಾಂಬ ಸುರಿಸಿ ಕರುಣೆಯಿಲ್ಲದೇ ಕೊಲ್ಲುವ ನೀವೆತ್ತ ? ಅಯ್ಯೋ ನಿಮ್ಮ ರಾಜ್ಯಲೋಭವೇ ! ಅನೇಕ ಮಾನವ ಬಂಧುಗಳ ಸಂಹಾರ ಮಾಡಿ ಅವರ ಹೆಣಗಳ ರಾಶಿಯ ಮೇಲೆ ಕುಳಿತು, ಸುಖ ಪಡಬೇಕೆಂಬ ನಿಮ್ಮ ರಾಕ್ಷಸೀ ಮಹತ್ವಾಕಾಂಕ್ಷೆಯು ಭ್ರಮೆ ಮೂಲಕ ವಾಗಿದೆ. ದೇವರು ನಿಮ್ಮಂಥವರನ್ನು ಎಂದೂ ಕ್ಷಮಿಸನು ? (ಗಾಬರಿ ಯಿಂದ ಶಿಬಿರದ ಕಡೆಗೆ ನೋಡಿ) ಅದೇನು ಶಿಬಿರದ ಮೇಲೆ ಬಾಂಬ, ಅಹಹಾ ಶಿಬಿರಕ್ಕೆ ಬೆಂಕಿ ಹತ್ತಿತು. ಇದೇನು ಅನಾಹುತ (ಆತುರದಿಂದ ಓಡುವನು.)

(ಸದ್ಯದ ಚೀನ ಯುದ್ಧವನ್ನು ನಡಿಸಿರುವ ಮುಖ್ಯ ಸೇನಾ ನಾಯಕರಾದ ಲಾರ್ಡ ಚ್ಯೆಂಗಕೈಷೇಕ ದೊರೆಗಳು ನಾಪತ್ತಿಕರಾಗಿ ದುರ್ಬಿನದೊಳಗಿಂದ ನೋಡುತ್ತ)

— ಪ್ರವೇಶ —

ಚೆಂಗಕೈಷೇಕ — (ಉಡದು ಭಾಷೆ) ಅಫ್ ಸೋಸ್. ಬೇಹದ್ ಅಫ್ ಸೋಸ್, ಪೇಖೇ ಪ್ಯಾರಿ ಲೇಡೀ ಚೆಂಗಕೈಷೇಕ, ಕುದರತೀಖೇಲ್, ಕೈಸಾಹೈ ! ಊಪರಸೇ ವೊಹ್ ಬೇರಹಂ ಜಪಾನಿಯಾಂ ಏರೋ ಪ್ಲಾನ್ಸೇ ಬಾಂಬ ಫೇಕರ ಹೇಂಹೈ ಇಧರ್ ಪೀಲೀ ನದ್ದೀಕಾ ಪಾನೀ ಬೇಹದ್ ಚಡ್ಡ ರಹಾ ಹೈ ಕೈಸಾ ಮುಸೀಬತ್‌ಕಾ ವಖ್ತ ಆಗಯಾ.

ಲೇಡೀ ಚಂ. — ಸಾಹೇಬ್ ಓ ದೇಖೇ, ಕ್ಯಾಂಪತೋ ಜಲ್, ರಹಾಹೈ ಜಲ್ದಿ ವಂಹಾಕೇ ಮಾಜೂರೋಂಕೂ ಬಚಾನೇಕೇ ಕೋಷಿಷ್ ಕರ್ನಾ.

ಚ್ಯೆಂ. ಕೈ. — (ಕಮಾಡಿಂಗ ಟೋನ) ಕೊನ್ ಲೆಫ್ಟನೆಂಟ ? ಜಲ್ದಿ ಮಿಲಿಟರೀ ಲೇ ಜಾವ್ ಓರ್ ಕ್ಯಾಂಪ್ ಅಭೀಕೇ ಅಭೀ ಖಾಲೀ ಕರೊ. ಯಲ್ಲೋ ನದ್ದೀಶೇ ಆಠ್‌ದಸ್ ಮೈಲ ಪರ್ ಫತಹ್ ಮೈದಾನ್ ಮೇ ಜೋ

ಹಮಾರಾ ಕ್ಯಾಂಪ್ ಹೈ. ವಂಹಾ ಸಬ್ ಮಾಜೂರೋಂಕೂ ಪೂಹ ಜಾಂವ್ ಹಮಾರೇ ಇಮಡಾದ್ಕೇಲಿಯೇ ಆಯೇ ಸೋ ಹಿಂದಭಾಯಿ ಬಹಿನೋಂಮೇ ಏಕ ಆಷಖಾಸಭೀ ಜಾಯಾನ ನಹೀಹೋನಾ. ದಿಲಾವಬಿಗಲ್‌ಕಾ ಇಷಾರಾ ಮಿಲಿಟರಿ ಬುಲಾವ್ ? ಅಭೀಕೇ ಅಭೀ ಜಾವ್ ಔರ್ ಸಬ್ ಲೋಗೊಂಕೂ ಬಚಾವ್. ಬೀವೀ ಸಾಹೇಬಾ ಚಲಿಯೇ ಕ್ಯಾಂಪ್ಮೇ ಲಾತೇಸೋಯುಹ ಸಬ್ ಮಾಜೂಂರೊಂಕೇ ಲಿಯೇಜಾಯತಯಾರೀ ಕರ್ಕೇ ರಖ್ಖಾಯೆಂಗೇ ಚಲಿಯೇ ಜಲ್ದಿ. (ಒಳಗೆ ಹೋಗಿ ಹಾರ್ನ ಮಾಡಿ ಮೋಟರ ನಡಿಸಿದ ಶಬ್ದ.)

ತೆರಿ — ಅರೇ ಭಾಗೋ, ಭಾಗೋ ! ಅಪನಾ ಅಪನಾಜಾನ್ ಬಚಾಲೋ, ಯಲ್ಲೋ ನದ್ದೀಕಾ ಪಾನೀ ಬೇಹದ್ ಚಡ್‌ರಹಾಹೈ. ಆಧಾಸೇ ಜೀಯಾದಾ ಹಮಾರಾ ಕ್ಯಾಂಪ ಬಹ್‌ಗಯಾ ಭಾಗೋ ಭಾಗೋ ಜಲ್ದಿ ಭಾಗೋ.

ಡಾಕ್ಟರ — (ಅವಸರದಿಂದ ಬರುತ್ತ) ಮಿಸ್ ಗಂಗಾ ! ಕಮ್‌ಸೂನ್ ! ಗಂಗಾ ಕಮ್‌ಸೂನ್! ಛೀ ಛೀ ಎಂತಹ ದುರಂತವಿದು ! ಮುಖ್ಯ ಶಿಬಿರದ ಮೇಲೆ ಬಾಂಬುಗಳು ಒಂದೇ ಸವನೇ ಬೀಳುತ್ತಲಿವೆ. ಅಲ್ಲಲ್ಲಿ ಬೆಂಕಿ ತಗಲಿ ಬಿಟ್ಟದೆ. ಇಂತಹದರಲ್ಲಿ ಜೀವದ ಹಂಗುದೊರೆದು ಒಳಗಿದ್ದ ರೋಗಿಗಳನ್ನು ಹೊತ್ತು ಹೊತ್ತು ತಂದು ಹೊರಗೆ ಹಾಕುವ ಶೂಲ ಪಾಣಿಯ ಸಾಹಸಕ್ಕೆ ಮಿತಿಯಿಲ್ಲದಾಯಿತು. ಕೇವಲ ಹೋಪ್ಲೆಸ್ ರೋಗಿಗಳ ಸಲುವಾಗಿ, ಹಾಗೆ ಗಂಡಾಂತರದಲ್ಲಿ ಬೀಳುವದು ಸರಿಯಲ್ಲ ವೆಂದು, ಎಷ್ಟು ಬಗೆಯಾಗಿ ಹೇಳಿದರೂ ಅವನು ಕೇಳದಂತಾಗಿದ್ದಾನೆ. ಗೌರಮ್ಮನನ್ನಾದರೂ ಕರೆ; ಅವಳಿಂದ ಹೇಳಿಸಿ ನೋಡುವಾ.

ತೆರಿ — ಅರೇ ಭಾಗೋ ಭಾಗೋ ಯಲ್ಲೋ ನದ್ದೀ ಬಿಲ್‌ಕೂಲ ಕ್ಯಾಂಪಮೇ ಘುಸ್ ಗಯಾ ಭಾಗೋ ಭಾಗೋ.

ಗಂಗಾ — ಇದೊಂದು ಹೆಚ್ಚಿನ ದುರಂತ ಡಾಕ್ಟರ್ ಈ ಸಮಯಕ್ಕೆ ಯಾರ್‍ಯಾರು ತಮ್ಮ ತಮ್ಮ ಬುದ್ಧಿಗೆ ಹೊಳೆದಂತೆ ಮಾಡುವದು ಒಳಿತು.

ಡಾಕ್ಟರ — ಅಹುದಹುದು. (ತೆರೆ ನೋಡಿ) ಅದೋ ನೋಡಿದಿಯಾ ಹಳದೀ ನದಿಯ ಹುಚ್ಚು ರಭಸಾ? ಇನ್ನು ಹೆಚ್ಚು ಸಮಯ ನಿಂತು ಪ್ರಯೋಜನವಿಲ್ಲ, ಬೇಗ ನಡೆ.

ಗಂಗಾ — (ತೆರೆ ನೋಡಿ ಗಾಬರಿಯಿಂದ) ನೋಡಿ ಡಾಕ್ಟರ! ಏರಿಬರುವ ನದಿಯಿಂದ ಹೊರಬರುತ್ತಿರುವವನು ಶೂಲಪಾಣಿಯಲ್ಲವೇ ? ಹೆಗಲ ಮೇಲೆ ಏನೋ ಹೊತ್ತಂತಾಗಿದೆ. ನಸುಗತ್ತಲ; ಸರಿಯಾಗಿ ಕಾಣದು. ಹಚ್ಚಿ ನೋಡಿ ಟಾರ್ಚ.

ಡಾಕ್ಟರ — ಅಹಹಾ! ಶೂಲಪಾಣಿ! ಅಯ್ಯೋ ಜೋಲಿ ಹೊಡೆಯುವನು ಅವನಿಗೂ ಪೆಟ್ಟಾಗಿದೆಯೋ ಏನೋ! ಅಹಹಾ ಬಿದ್ದೇ ಬಿಟ್ಟನಲ್ಲ. ನಡೆ ತೀವ್ರ, ಅವನನ್ನು ಹೊತ್ತು ತರುವಾ.

— ಪ್ರವೇಶ —

(ನದಿಯ ದಂಡೆ ಶೂಲಪಾಣಿ ಒಂದು ನಾಲ್ಕೈದು ವರ್ಷದ ಮಗುವನ್ನು ಹೊತ್ತು ತಂದು)

ಶೂಲ — ಮತ್ ರೋ ಬಚ್ಚೀ! ತುಜಕೋ ಅಭೀ ತೇರೇ ಅಮ್ಮಾಕೇ ಪಾಸ್ ಪೊಂಹ ಚಾತಾಹೂಂ. ಮತ್ ರೋ ಪ್ಯಾರೀ (ಮಗು. ಪಾನೀ ಅಮ್ಮಾಗೇ ಪಾನೀ) ಕ್ಯಾ ಪಾನೀ ಪಿಲಾವೂಂ. (ಏಳುವ ಪ್ರಯತ್ನ) ಇದೇನು ! ಪರವಶಾವಸ್ಥೆ ! ಏಳಲು ಬರಲೊಲ್ಲದು. (ಮಗು–ಪಾನೀ ಪಾನೀ) ಲಾಯಾ ಠೈರ್ ಪಾನೀ ಉಕ್ಕಿ ಹರಿಯುವ ನದಿಯೋ ! ಮಗೂ ನೀರಡಿಸಿದೆ. ಬಾಬಾ! ಇನ್ನೂ ಕೊಂಚ ಹತ್ತಿರಕ್ಕೆ ಬಾ!! ಮಗುವಿಗೆ ನೀರು ಕುಡಿಸಿದ ಮೇಲೆ ನಮ್ಮನ್ನು ಕೊಚ್ಚಿಕೊಂಡೊಯ್ದರೂ ಪರವಿಲ್ಲ. (ಮಗು–ಪಾನಿಗೆ ಅಮ್ಮಾ) (ಶೂಲ–ದುಃಖದಿಂದ) ನನ್ನ ಈ ಒದ್ದೆಯಾದ ಬಟ್ಟೆಯಲ್ಲಿ ರಕ್ತ ಮಿಶ್ರಿತ ಜಲವಿದೆ. ಈಗ್ಗೆ ಇದನ್ನೇ ಕುಡಿ, ಲೇ-ಪಾನೀ (ಮಗುವಿನ ಮುಖದಲ್ಲಿ ಹಿಂಡುವನು.) ಬಂತು ! ನದಿಯು ಕಾಲ್ದೆಶೆಯಲ್ಲಿಯೋ ಬಂತು ಇನ್ನು ನಮ್ಮನ್ನು ಕರುಣೆಯಿಲ್ಲದೇ ಕೊಚ್ಚಿಕೊಂಡೊಯ್ಯುವದು. (ಕೂಸನ್ನಪ್ಪಿ ಅಳುತ್ತ) ದೇವಾ ನನ್ನದೇನಾದರೂ ಆಗಿಕೊಳ್ಳಲಿ ಈ ಮಗುವನ್ನು ಮಾತ್ರ ಕಾಪಾಡು. ನಿಷ್ಪಾಪ ಕಂದಮ್ಮಾ, ಬಾಂಬಿನ ಪೆಟ್ಟಿನಿಂದ ಸುಟ್ಟು ಹೋಗಿದೆ, ತಲೆ ಒಡೆದಿದೆ, (ಬಿಚ್ಚಿದ ಡ್ರೆಸ್ಸಿಂಗ ನೋಡಿ

ಗಾಬರಿ) ಇದೇನು ತಲೆ ಡ್ರೆಸ್ಸಿಂಗ ಬಿಚ್ಚಿ ಬಿಟ್ಟಿದೆಯಲ್ಲಾ! ಗಾಯ ದಲ್ಲಿ ಗಾಳಿಯ ಸೇರಿ ಮಗು ಸಾಯುವದು. (ಕಟ್ಟುವ ಪ್ರಯತ್ನ) ಬರ ಲೊಲ್ಲದು ಕಟ್ಟಲಿಕ್ಕೆ ಬರಲೊಲ್ಲದು. ನನ್ನ ಕೈ ಮುರಿದಿದೆಯೋ ಏನೋ (ಕೈಕಾಲು ನೋಡಿಕೊಂಡು) ಅಹುದು ಈ ಕೈ-ಮತ್ತು ಈ ಕಾಲು ಮುರಿದು ಹೋಗಿದೆ. (ನದಿಯ ನೋಡಿ) ಬಂತು ನದಿಯು ತೀರ ಕಾಲ್ದೆಸೆಗೆ ಬಂತು. ಚೀರಿ ಅತ್ತು) ಯಾರಾದರೂ ಈ ಮಗುವನ್ನು ಉಳಿಸಿಕೊಳ್ಳಿರಿ. (ಮಗು-ಗಟ್ಟಿಯಾಗಿ ಅಮ್ಮಾಗೇ ಅಮ್ಮಾ) ಶೂಲ :- ಅಳುತ್ತ ಅಂ--ಅಂ--ಅಂ.) ಬನ್ನಿ, ಯಾರಾದರೂ ಈ ಮಗುವನ್ನು ತಕ್ಕೊಳ್ಳಿ. ನಾನು ನೀರ ಪಾಲಾಗುವೆ. (ಉಸುರ್ಗರೆದು) ಹುಂ. ಇನ್ನಾರು ಬರತಕ್ಕವರು. ಈ ಮೃತ್ಯು ತಾಂಡವ ಲೀಲಾ ಭೂಮಿಯಲ್ಲಿ ಇನ್ನಾರು ಬರತಕ್ಕವರು! ಬಂದರೆ ಮೃತ್ಯು ನಿರ್ದಯ ಮೃತ್ಯು ಕೂಸು :- (ಅಮ್ಮಾಗೇ ಅಮ್ಮಾ) (ಅರುವು ತಪ್ಪುತ್ತಲಿದೆ ಕೂಸಿನ ಸ್ವರಕ್ಕೆ ಸ್ವರಗಲಿಸಿ ಅ....ಮ್ಮಾ....ಗೇ) ದೇವಾ ಈ ಮಗುವನ್ನು ರಕ್ಷಿಸು (ಅಳುತ್ತ ಅಸ್ಪಷ್ಟ) ಅಂ....ಅಂ....ಅಂ. ಈ ಕಂದಮ್ಮನಿಗೆ ಅದರ (ಗಟ್ಟಿಯಾಗಿ ಅಮ್ಮನ ದರ್ಶನ ಮಾಡಿಸು. (ಮೂರ್ಛೆಯಿಂದ ಬೀಳುವಷ್ಟರಲ್ಲಿ ಡಾಕ್ಟರ ಮತ್ತು ಗಂಗಾ ಬಂದು ಶೂಲಪಾಣೀ ಮತ್ತು ಆ ಮಗುವನ್ನು ಹೊತ್ತು ಕೊಂಡು ಹೋಗುವರು.)

(ಮತ್ತೊಂದು ಬದಿಯಿಂದ ನಾಲ್ಕಾರು ಹೆಣ್ಣು ಮಕ್ಕಳನ್ನು ಮತ್ತು ಮಕ್ಕಳನ್ನು ರಿಕ್ಷಾ [ಕೈಗಾಡಿ] ದಲ್ಲಿ ಹಾಕಿಕೊಂಡು ಒಳ್ಳೇ ಸಾಹಸದಿಂದ ಗೌರಿಯು ಎಳೆದುಕೊಂಡು ಬರುವಳು. ಶ್ರಮ ಪರಿಹಾರಕ್ಕಾಗಿ ಅನ್ನುವ ಪದ.)

॥ ಪದ ॥

ಗೌರಿ -- ದೇವ ನಿನ್ನ ಮಹಿಮೆಯ ತಿಳಿಯುವದು ।
ಯಾವ ಕುಶಲ ನರನಿಂದಾಗುವದು ॥
ಆಗು ಹೋಗುಗಳು ನಿನ್ನಾಧೀನಾ ।
ಬೇಗನಿವಾರಿಸು ದೀನರದೈನಾ ॥
ನಾವು ನಿನ್ನ ನಾಟಕ ನಟರಿಹೆವು ।
ನೀನು ಕಾಣಿಸಿದಂದದಿ ಕುಣಿಯುವೆವು ॥



ಈ ಕಂದಮ್ಮನಿಗೆ ಅದರ (……………) ಅಮ್ಮನ ದರ್ಶನ ಮಾಡಿಸು. ! (ಪುಟ ೨೪)

ಘೆಬರೋ ಮತ್ ಜಬ್‌ತಲಗ್ ಮುಯ್ ಜೀತೀ ರಹೂಂಗೀ ತಬ್ ತಲಗ್ ಆಪ್ ಲೋಗೋಂಕೇ ಜಿಂದಗೀಕೂ ಬಿಲ್ಕುಲ್ ಧೋಕಾನಹೀ ಘೆಬರೋ ಮತ್ ನದ್ದೀಕಿನಾರೇಸೇ ಬಹುತ್ ದೂರಾಗಯೇ— (ದೂರಿನ ಶಬ್ದ ಕೇಳಿದಂತೆ ನಟಿಸಿ) ನಿಜವಾಗಿ ಶೂಲಪಾಣಿಯು ಅಳು ವಂತೆ ಕೇಳಿಸಿತು ಮೃತ್ಯುವು ಪ್ರತ್ಯಕ್ಷವಾಗಿ ಬಂದು ನಿಂತರೂ ಅತ್ತು ಕೊಳ್ಳದ ಧೀರನಲ್ಲವೇ ಅವನು ! (ಕಿವಿಗೊಟ್ಟು ಕೇಳಿ ಆಶ್ಚರ್ಯದಿಂದ) ಅದೋ ಅದೋ ದೇವಾ ರಕ್ಷಿಸು–ರಕ್ಷಿಸು ಎಂದು ಗೋಳಿಡುತ್ತಿರುವನು. ದೇವರು ಯಾರನ್ನು ರಕ್ಷಿಸಬೇಕು ? ಏನು ತನ್ನನ್ನೇ ! (ಕೇಳಿ) ಅಪುವ ಹುದು ಶೂಲಪಾಣಿಯೇ ಅಳುತ್ತಿರುವನು) (ತಿರಸ್ಕಾರ) ಛೀ ನೀನೆಂಥ ಹೇಡಿಯು ವೀರನಂತೆ ರಣಕ್ಷೇತ್ರಕ್ಕೆ ಬಂದು ಹೇಡಿಯಂತೆ ಅಳುವದೇ! (ದೂರಿನ ಸ್ವರ ಕೇಳುವಂತೆ ನಟಿಸಿ) ಏನು ! ಏನು ! ಅಮ್ಮನ ದರ್ಶನ ಮಾಡಿಸು ! ಥೂ-ಥೂ ಹೇಡಿ ಅಮ್ಮನ ದರ್ಶನ ಮಾಡಿಸೆಂದು ಅಳು ತ್ತಿರುವ. ಭಾರತಮಾತೆಯ ಸೇವೆಗಾಗಿ ಹೊರಟಿದ್ದಾನೆ ನಿರ್ಲಜ್ಜಾ. (ಆಕಾಶ ನೋಡಿ) ದೇವಾ ನನ್ನನ್ನು ಒಳಿತಾಗಿ ಉಳಿಸಿದೆ. ನನಗೆ ಈ ಹೇಡಿ ಶೂಲಪಾಣಿಯ ಪತ್ನಿ ಎನ್ನಿಸಿಕೊಳ್ಳುವ ಕಲಂಕ ತಟ್ಟಿಸಲಿಲ್ಲ. (ರಿಕ್ಷಾ ಎಳೆಯುತ್ತ ಮೊದಲಿನ ಪದವನ್ನನ್ನುತ್ತ ಹೋಗುವಳು.)

—: ಜಂಗಲ ರಸ್ತಾ ಪ್ರವೇಶ :—

ಚೆಂಗ ಕೈಷೇಕ — (ಡಾಕ್ಟರ ಮತ್ತು ಕೆಲ ಜನ ಹಿಂದ ಸ್ವಯಂಸೇವಕರು) ಹಿಂದ ಭಾಯಿಯೋ, ಚೈನಾ ಆಪಕೀ ಮದತ್ ಕಭೀ ನಹೀ ಭುಲೇಗಿ: ಗೋ ಜಪಾನಿಯೋಂಕೇ ಬಾಂಬ್ಸೇ ಹಮಾರೇ ಹಜಾರೋ ಲೋಗ್ ಜಲ್ಗಯೇ ಹೈಂ. ಯುಲ್ಲೋ ನದ್ದೀಕೆ ತುಗಯಾನೀಸೇ ಲಾಖ್ಯೋ ಹಮಾರೇ ಭಾಯಿಯಾಂ ಬಹ್‌ಗಯೇ ಹೈಂ! ತೋಭೀ ಹಮೇ ಫಿಕರ್ ನಹೀಂ. ಮಗರ್ ಹಮಾರೇ ಇಮದಾದಕೇಲಿಯೇಆಯೇಸೋ ಆಪ್ ಲೋಗೋಮೇ ಚಂದ ಜಾಯಾ ಹೋನೇಸೇ ಹಮಾರೇ ದಿಲ್‌ಕೂ ಬಹುತ್ ಸದ್ಮಾ ಪೊಹಂಚಾಹೈ. ಉಸ್ಮೇಭೀ ಓಹ್ ಜೋ ಆಪಕೇ

ಗರ್ಲ್ಸ್ ಬ್ಯಾಜ್ಸ್ ಕ್ಯಾಪ್ಟನ್ ಬಚ್ಚೀ ಜೋ ಕ್ಯಾಂಪ್ಮೇ ಬಿಜಲೀಸೇ ಚಮಕತೀಥಿ! ಓಹ್ ಗ್ರೈಬ್ ಹೋನೆಸೇ ಹವಾರೀ ದಿಲ್‌ಕೂ ಬಹುತೀ ಬಹೋತ್ ರಂಜ ಹೋಗಯಾ.

ಲೇಡೀ ಚಂ. ಕೈ. — (ದುರ್ಬಿನಿನಿಂದ ನೋಡಿ) ಓ ದೇಖೀಜೀಯೇ ಸಾಹೇಬ್ ಏಕ ಹಿಂದೀ ಬಚ್ಚೀ ಬಹೋತ್ ಮೆಹನ್ನತ್‌ಸೇ ರಿಕ್ಷಾಖೀಂಚ ಲಾರಹೀ ಹೈ.

ಡಾಕ್ಟರ — (ಬೈನಾಕ್ಯುಲರದಿಂದ ನೋಡಿ) ಮೆಹಬರ್ಾನ ವಹೀ ಹೈ ಹಮಾರೇ ಫೀಮೇಲ ಬ್ಯಾಜ್ಸ್ ಕ್ಯಾಪ್ಟನ್.

ಚಂ. ಕೈ. — (ಆನಂದದಿಂದ ಕುಣಿದು) ಖೂಬ್. ಖೂಬ್ ಅಲ್ಲಾಹೊ ತಾಲಾಕೀ ಮೆಹರ್ಬಾನೀ (ಕಮ್ಯಾಂಡಿಂಗ ಟೋನ) ಅರೇ ಕೋಯೀ ಜಲ್ದಿ ಜಾವ್ ರಿಕ್ಷಾಸೇ ಬಚ್ಚೀಕೂ ಛುಡಾವ್ ಔರ್ ಸಾಥ ಬಚ್ಚೀಕೇ ರಿಕ್ಷಾಖೀಂಚ ಲಾವ್.

ಲೇ. ಚಂ. ಕೈ. — ತೋಬ್ಬಾ. ತೋಬ್ಬಾ ಬಚ್ಚೀಕಿತನೀ ಥಕ್‌ಗಯಿಹೈ !

ಚಂ. ಕೈ. —ದಿಲ್‌ದೇಹೀಸೇ ಮಜೂರೊಂಕೇ ಖಿದ್ಮತ್ ಅದಾಕರನೇಮೇ ಓಹ್ ಖುದ್ದಕೇ ತಕಲಿಫೊಂಹಕೀಪರವಾ ನಹೀಂಕೀ ಬಿಲ್ಕುಲ್ ಹಸೀನ್ ನಜರ್ ಆರಹೀಹೈ (ಗಂಭೀರ ಭಾವ) ಐ. ಭಾರತ ಐಸೇ ಬಹಾದ್ದರ ಬಾಲಬಚ್ಚೀ ರಹತೇಭೀ ತೇರೇ ಹಿಸ್ಸೇಮೇ ಗುಲಾಮಗಿರೀ?

ಡಾಕ್ಟರ — ಮೆಬರ್ಾನ ಓಹ್ ಕುದರತೀ ಖೇಲ್

ಗೌರಿ — (ಬೆವರು ಒರಸುತ್ತ) ಚಂಗಕೈ ಶೇಕ ದಂಪತಿಗಳಿಗೆ ನಮಿಸುವಳು)

ಲೇಡೀ — (ವಾಂಛಲ್ಯದಿಂದ ಗೌರಿಯ ತಲೆ ಬೆನ್ನ ಮೇಲೆ ಕೈಯಾಡಿಸುತ್ತ) ಪ್ಯಾರೀ ಬಚ್ಚೀ ! ಮುಝೆ ಏಕ ಬೋಸಾ ದೇವ, ತುಮ್ಹಾರಾ ನಾಮ ಕ್ಯಾ ?

ಗೌರಿ — ಗೌರೀ

ಚೈಂಗ ಮತ್ತು ಲೇಡಿ — ಗಮ್‌ರೀ ! ಬಿಲ್ಕುಲ್ ಪ್ಯಾರಾ ನಾವ.

ಲೇಡಿ — ಪ್ಯಾರೀ ಬಚ್ಚೀ (ತನ್ನ ಕೊರಳಲ್ಲಿನ ಮುತ್ತಿನ ಹಾರ ಅವಳ ಕೊರಳಿಗೆ ಹಾಕುವಾಗ್ಗೆ) ಎಹ್ ಮೇರೀ ಮೋಹ್‌ಬ್ಬತ್ಕೀ ಅಲಾಮತ್ ತುಮ್ ಅಪನೇ ಪಾಸ ರಖನಾ.

ಗೌರಿ — (ತಡೆದು) ಐಸೇ ಬಕ್ಷಿಸ್ ಪಾನೇಕೇಲಿಯೇ ಮುಝೇ ಅಪನೀ ಕಾಂಗ್ರೆಸಕೀ ಹುಕುಂ ಹೋನೀ ಚಾಹೀಯೇ ಮುವಾಫಕೀಜಿಯೇಗಾ.

ಚಂ. ಕೈ. — (ಅತ್ಯಾನಂದದಿಂದ) ಆಫ್‌ರೀಂ ಸದ್ ಆಫ್‌ರೀಂ. ತುಝೇ ಔರ್ ತೇರೇ ಕಾಂಗ್ರೆಸ್‌ಕೂ ಖುದಾ ಆಬಾದರಖ್ಖೇ. ಠೀಕ್ ಹಮ್ ಆಪನಾ ಇನಾಂ ತುಮುಕೋ ಬಜರೀಯಾ ತುಮ್ಹಾರೇ ಕಾಂಗ್ರೆಸ ಪ್ರೆಸಿಡೆಂಟಕೇ ಪೊಹಚಾಯೆಂಗೇ. ಗಂರೀ ವೈಸೇ ಬಹಾದ್ದರ್ ಬಚ್ಚೀಯೊಂಕೂ ಜಜಗೀ ದೇನೇವಾಲೀ ಐಭಾರತ ತುಝುಕೂ ವೈ ಬೇಷಕ್ ಭೆಹಿಸ್ತ ಸಮುಝುತಾಹೂಂ. ಠೀಕ್ ಕಮಾಂಡರ ಆಪಲೋಗೊಂಕೀ ಇಮದಾದ್ ಚೈನಾ ಔರ್ ಇಂಡಿಯಾಕೀ ಮೊಹಬತ್ ಮಜಬೂತ್ ಕರ್ದೀ. ಚಂದ್ರೋಜ್ ಆಪ್ ಸಬ್ ಆರಾಮ ಪಾಕರ್ ಇಂಡಿಯಾ ಜಾನಾ. ಲೆಫ್ಟನೆಂಟ ಏಕ್ ಅಮನ್‌ಜಾಯಪರ್ ಎಹಸಬ್ ಹಮಾರೇ ಹಿಂದಭಾಯಿಯೊಂಕೂ ರಖಕರ್ ಇನ್ಹೋಕೇ. ಖಿದ್ಮತ್ಕೀ ಬರ್ದಾಸ್ತ ಅಚ್ಛೇ ತೌರಸೇ ರಖವಾನಾ. ಡಾಕ್ಟರ್ ಮುಝೆ ಇಜಾಜತ್ ? (ನಮಸ್ಕಾರಾ ನಂತರ ಗಂಗಾ ಗೌರೀ ಡಾಕ್ಟರ ವಿನಃ ಸಕಲರೂ ಹೋಗುವರು.)

ಡಾಕ್ಟರ — ಗಂಗಮ್ಮಾ! ಬೇಗ ಗೌರಮ್ಮನನ್ನು ಕರೆದುಕೊಂಡು ನಮ್ಮ ಹೊಸ ಕ್ಯಾಂಪಿಗೆ ಬಾ. ಲಾರ್ಡ ಚೆಂಗಕೈಷೇಕ ಧೊರೆಗಳು ಸಪತ್ನೀಕರಾಗಿ ಬಂದದ್ದರಿಂದ ಉಪಾಯಗಾಣದೇ ಶೂಲಪಾಣಿಯನ್ನು ಬಿಟ್ಟು ಬಂದಿದ್ದೇನೆ. (ಸರ್‍ರನೇ ಹೋಗುವನು.)

ಗಂಗಾ — ನಡೆ ಗೌರಮ್ಮಾ ಬೇಗ ವೈ ತೊಳೆದುಕೋ ಶೂಲಪಾಣಿಯ ಹತ್ತರ ಇರುವಾ. ಗೌರಮ್ಮಾ ಬಾಂಬಿನ ಪೆಟ್ಟಿನಿಂದ ಎಂತಹ ಗಾಯಗಳಾಗಿವೆಯೇ ಅವನಿಗೆ ಪ್ರಾಣ ಉಳಿದದ್ದೇ ಹೆಚ್ಚು.

ಗೌರಿ — (ತಿರಸ್ಕಾರದಿಂದ) ಬದುಕಿದ್ದಾನೆಯೇ ? ಸತ್ತು ಹೋಗಿದ್ದರೆ ಚನ್ನಾಗಿತಲ್ಲಾ.

ಗಂಗಾ — ಛೀ ಆದರ್ಶವೀರನ ಸಲುವಾಗಿಯೇನಮಂಗಲ ಮಾತೇಗಳ ನಾಡುವಿಯೇ.

ಗೌರಿ — (ಸ್ವಲ್ಪ ಸಿಟ್ಟು ತಿರಸ್ಕಾರ) "ಆದರ್ಶವೀರ" ಹಂ. ಅವನು ಆದರ್ಶ ವೀರನೇ ರಣಕ್ಷೇತ್ರದಲ್ಲಿ ದೇವಾ ರಕ್ಷಿಸು ರಕ್ಷಿಸೂ. ಅಮ್ಮನ ದರ್ಶನ ಮಾಡಿಸೆಂದು ಗೋಳಾಡಿ ಅತ್ತುಕೊಂಡವನು ಆದರ್ಶವೀರನೇ ? ಆ ಹೇಡಿಯ ಮಾತೆತ್ತಬೇಡಾ. ಅಂತಹ ಹೇಡಿ ಗಂಡುಗಳೇ ನಮ್ಮ ಭಾರ ತಾಂಬೆಯ ಪಾರತಂತ್ರ್ಯಕ್ಕೆ ಕಾರಣರು.

ಗಂಗಾ — ಹೀಗೇನು ? ಎಚ್ಚರದಪ್ಪಿ ಮಾತುಗಳನ್ನಾಡುವೇ? ನಿನಗೇನಾಗಿದೆ?

ಗೌರಿ — ನನಗೇನೂ ಆಗಿಲ್ಲ.

ಗಂಗಾ — ಒಪ್ಪೆನು ಎಚ್ಚರವಿದ್ದವಳು ಆ ಅಸಾಮಾನ್ಯವೀರ ಶೂಲಪಾಣಿಯು.

ಗೌರಿ — ಛೀ ಸಾಯಲನ್ಸ ಆ ಜೀವಗಳ್ಳನ ಮಾತೆತ್ತಬೇಡಾ.

ಗಂಗಾ — ಶೂಲಪಾಣಿಯ ವಿಷಯಕವಾದ ನಿನ್ನ ಕಲ್ಪನೆಗಳು ತಲೆಕೆಳ ಗಾಗಿವೆ. ಗೌರಮ್ಮಾ ತನ್ನ ಜೀವವನ್ನು ತೃಣೀಕರಿಸಿ ಅನೇಕ ಚೈನಾ ಬಂಧುಗಳನ್ನು ಮೃತ್ಯುವಿನ ದವಡೆಯಿಂದ ಹೊರತೆಗೆದು ಬದುಕಿಸಿ ಕೊಂಡವನು ಜೀವಗಳ್ಳನೇ ? ಬಾಂಬಿನ ಪೆಟ್ಟು ತಾಕಿ ಕೈಕಾಲು ಮುರಿದವನಾಗಿ ಉಕ್ಕೇರಿ ಹರಿದು ಬರುವ ನದಿಯ ಪಕ್ಕದಲ್ಲಿ ಪರವಶ ನಾಗಿ ಬಿದ್ದು ಬಿಟ್ಟಿದ್ದರೂ ಒಂದು ಗಾಯ ಹೊಂದಿದ ಚೀನಿ ಕಂದಮ್ಮ ನನ್ನು ಬದುಕಿಸಬೇಕೆಂದು ಎಚ್ಚರದಪ್ಪಿ ಬೀಳುವತನಕ ಹೆಣಗಾಡಿದ ಗಂಡುಗಲಿಯು ಜೀವಗಳ್ಳನೇ ? ಅಂಥವನು ಜೀವಗಳ್ಳನಾದರೇ ಮಹಾತ್ಮಾಜಿಯವರು ಶಾಂತಿ ಸಂಗ್ರಾಮದ ಕಹಳೆಯನ್ನು ಹಿಡಿಯು ತ್ತಲೇ ಮಳೆಗಾಲದಲ್ಲಿ ಹುಟ್ಟಿದ ನಾಯಿ ಕೊಡೆಗಳು ಬೇಸಿಗೆಯಲ್ಲಿ ಮಾಯವಾಗುವಂತೆ ತಲೆಯ ಮೇಲಿನ ಬಿಳೀ ಟೊಪ್ಪಿಗೆಗಳನ್ನು ಬೀಸ್ಹಾಕೀ ಅನೇಕಾನೇಕ ಕುಂಟ ನೆವ ಹೇಳುತ್ತ ಹೆಂಡರುಮಕ್ಕಳ ಮಧ್ಯದಲ್ಲಿ ಅಡಗಿಕೊಳ್ಳುವ ದೇಶದ್ರೋಹಿ ಉತ್ತರ ಕುಮಾರರೆಲ್ಲರೂ ಗಂಡುಗಲಿಗಳಾಗಬೇಕಾಯಿತು.

ಗೌರಿ — ಹಾಗಾದರೇ ಅವನು ಗೋಳೋ ಎಂದು ಅತ್ತುಕೊಂಡದ್ದೇಕೆ ?

ಗಂಗಾ — ಹಾಗಾರು ಹೇಳುವರು !

ಗೌರಿ — ಯಾರು ಹೇಳುವದೇಕೇ ಕಿವಿಯಾರೇ ಕೇಳಿದ್ದೇನೆ. (ವ್ಯಂಗ್ಯ) "ದೇವಾ ರಕ್ಷಿಸು-ರಕ್ಷಿಸು, ಅಮ್ಮನ ಭೆಟ್ಟಿ ಮಾಡಿಸು" ಎಂದು ಸ್ಪಷ್ಟ ವಾದ ಕನ್ನಡ ಮಾತಿನಲ್ಲಿ ಕೂಗಿಕೊಂಡು ಅತ್ತದ್ದು ಕಿವಿಯಾರೇ ಕೇಳಿದ್ದೇನೆ.

ಗಂಗಾ — (ಆಲೋಚಿಸಿ) ಸರೀ. ಸಮಸ್ಯೆಯ ಪರಿಷ್ಕಾರವಾಯಿತು. ಈಗಲೂ ಕೂಡಾ ಮಧ್ಯೆ ಮಧ್ಯೆ ಎಚ್ಚರವಾದಾಗ್ಯೆ ಹಾಗೆಯೇ ಅಳುವನು. ಮಾತ್ರ ಅವನ ಅಳುವ ವಾಕ್ಯದೊಳಗಿನ ಒಂದೆರಡು ಶಬ್ದಗಳು ನಿನ್ನ ಕಿವಿಗೆ ಬಿದ್ದಿಲ್ಲವಂತೇ ಭಾರತ ಯುದ್ಧದಲ್ಲಿಯ ಶ್ರೀ ಕೃಷ್ಣನ ಶಂಖನಾದ ದಿಂದ ಕುಂಜರ ಶಬ್ದವನ್ನು ಕೇಳದ ದ್ರೋಣಾಚಾರ್ಯರಂತೆ ನಿನ್ನ ಅವಸ್ಥೆಯಾಗಿದೆ.

ಗೌರಿ — ಅಂದರೆ ಸರಲವಾಗಿ ಹೇಳು, ಹೀಗೆ ಸುತ್ತಿಸುತ್ತಿ ಹೇಳುವದು ಬೇಡಾ.

ಗಂಗಾ — ಅಷ್ಟೇಕೆ ? ಪ್ರತ್ಯಕ್ಷವಾಗಿ ನಿನ್ನ ಸಂಶಯನಿವೃತ್ತಿ ಮಾಡಿಸು ವೆನು, ಬಾ.

— ಪ್ರವೇಶ —

(ಚಿಗ್ಣಾಲಯ. ಶೂಲಪಾಣಿ ಸ್ಮೃತಿದಪ್ಪಿ ಬಿದ್ದಿದ್ದಾನೆ. ತಲೆ-ಕೈಕಾಲುಗಳಿಗೆ ಡ್ರೆಸಿಂಗ ಮಾಡಿದ್ದಾರೆ. ಡಾಕ್ಟರು ಅವನ ಹೃದಯ ನಾಡೀ ಪರೀಕ್ಷಿಸುತ್ತ ಚಿಂತಾಮಗ್ನನಾಗಿದ್ದಾನೆ. ಅಷ್ಟರಲ್ಲಿ ಗೌರೀ-ಗಂಗಾ ಇಬ್ಬರೂ ಬರುವರು. ಅವರನ್ನು ಕಂಡು ಮೂಗಿನ ಮೇಲೆ ಬೆರಳಿಕ್ಕಿ ಗದ್ದಲ ಮಾಡಬೇಡಿರೆಂದು ಸಂಕೇತ ಮಾಡುವನು. ಶೂಲಪಾಣೀ ಸ್ವಲ್ಪ ಹೊರಳಾಡುತ್ತಲೇ ಒಂದು ಡೋಜ್ ಔಷಧ ಕುಡಿಸುವನು.)

ಶೂಲ — (ಸ್ವಲ್ಪ ಗಟ್ಟಿಯಾಗಿ ಯಾತನಾಮಯ ಹಾಗೂ ಅಳುವ ಅನುಕಂಪಸ್ವರದಲ್ಲಿ ಸಾಧ್ಯವಿದ್ದಷ್ಟು ಕೈಮೇಲಕ್ಕೆತ್ತಿ) ಬಂತು ! ಹಳದೀ ನದೀ ಉಕ್ಕಿ ಬಂತು.

(ಗೊಗ್ಗರಸ್ವರ) ನಾನು ತೇಲಿಹೋದರೂ ಪರವಿಲ್ಲ. ಈ ಕಂದಮ್ಮನನ್ನು ನಿಷ್ಪಾಪ ಕಂದಮ್ಮನನ್ನು (ಗಟ್ಟಿಯಾಗಿ) ದೇವಾ ರಕ್ಷಿಸು–ರಕ್ಷಿಸು. (ಸ್ವಲ್ಪ ಮೂರ್ಛೆ ನಟಿಸಿ) ನಿರ್ದಯ ಮರಣವೇ! ನನ್ನನ್ನೂ ಸಂತೋಷದಿಂದ ನುಂಗು; ಈ ಕಂದಮ್ಮನನ್ನು ಬಿಡು. (ಅಳುತ್ತ) ಅಯ್ಯೋ ಅಮ್ಮಾಗೇ ಎಂದು ವಾಂಛಲ್ಯದಿಂದ ಕರುಳು ಕರಗಿಸುವಂತೆ ಕರೆಯುವ ಈ ಕೂಸಿಗೆ (ಗಟ್ಟಿ ಸ್ವರ) ದೇವಾ (ತಗ್ಗು ಸ್ವರ) ಆದರ (ಪುನಃ ಗಟ್ಟಿ ಸ್ವರ) ಅಮ್ಮನ ಹಡೆದಮ್ಮನ ದರ್ಶನ ಮಾಡಿಸು.

ಗೌರಿ — (ಗದ್ಗದಿತಳಾಗಿ ಪಶ್ಚಾತ್ತಾಪ ನಟಿಸಿ ಮಿಶ್ರಭಾವ) ಶೂಲಪಾಣೀ ವೀರವರ ನಿನ್ನನ್ನು ವೃಥಾ ಜರಿದೆ. (ಗೊಗ್ಗರ ಸ್ವರ ದೈನ್ಯ ಸ್ವರದಲ್ಲಿ) ಡಾಕ್ಟರ ಈತನು ಗುಣವಾಗಬಹುದೇ?

ಡಾಕ್ಟರ — ಆಗಬಹುದು. ಮಾತ್ರ ಎಡಗೈ, ಮತ್ತು ಬಲಗಾಲು ನೆಟ್ಟಗಾಗುವದು ಕಷ್ಟ. ವ್ಯಂಗ ಉಳಿದೀತು.

ಗೌರಿ — ಅದು ಅವನ ಒಡೆದು ಕಾಣಿಸುವ ಶೌರ್ಯದ ಬಿರಿದಾವಳಿ ಎನಿಸೀತು. ಬಿಡಿ. ಇಂತಹ ನರವರನು ಬಹು ಕಾಲ ಬದುಕಿ ಭಾರತಾಂಬೆಯ ಸೇವೆಯನ್ನು ಮಾಡಲೆಂದೇ ನಮ್ಮಗಳ ಹಾರೈಕೆ.

ಡಾಕ್ಟರ — ಅದು ದೇವರ ಇಚ್ಛೆ! ಮಾತ್ರ ಶೂಲಪಾಣಿಗೆ ಜ್ವರ ಬರಬಾರದು. ಆಗಲಿ, ಗೌರಮ್ಮಾ ನೀನು ಈತನನ್ನು ದಕ್ಷತೆಯಿಂದ ನೋಡಿಕೋ ಸ್ವಲ್ಪ ಎಚ್ಚರಿಯುತ್ತಲೇ ಒಂದು ಡೋಜ್ ಈ ಔಷಧಿಯನ್ನು ಕುಡಿಸು. ಅದರಿಂದ ಚನ್ನಾಗಿ ಎಚ್ಚರಿಯುವನು. ಆ ಮೇಲೆ ಈ ಮೋಸಂಬೀ ರಸವನ್ನು ನಾಲ್ಕೈಂಸಿನ ವರೆಗೂ ಕುಡಿಸು. ಹೋಗಿ ಬಂದು ಸ್ವಲ್ಪ ದೂರದಲ್ಲಿ ಕುಳಿತು ಮಧುರವಾಗಿರುವ ದನಿಯಿಂದ ಕೀರ್ತನೆಗಳನ್ನು ಹೇಳುತ್ತಿರು. ಅದು ನೇಚರ್ ರೆಮೆಡೀ ಪದ್ಧತಿಯಾಗಿದೆ. ವೇದನೆಗಳನ್ನು ಮರೆತು ಗಾಯನ ಕೇಳುವ ನಾದವು ಹತ್ತಿದರೇ ರೋಗಿಯು ಬಹು ತೀವ್ರ ಗುಣವಾಗುವನು. ನಡೆ ಗಂಗಮ್ಮಾ; ಮಿಕ್ಕ ಬಂಧುಗಳ ರೋಗ ವಿಚಾರಣೆ ತಕ್ಕೊಳ್ಳುವಾ. (ಹೋಗುವರು)

ಶೂಲಪಾಣಿ -- (ಎಚ್ಚತ್ತು) ಆಂ. ಆಂ (ನರಳುವನು)

ಗೌರಿ — (ಔಷಧ ಕುಡಿಸಿ, ಆಮೇಲೆ ಮೋಸಂಬಿ ರಸವನ್ನು ಕುಡಿಸುವಳು. ಸ್ವಲ್ಪ ದೂರ ಕುಳಿತು ಕಿರುದನಿಯಿಂದ ಇಂಪಾಗಿ) || ಪದ ||

|| ಪದ ||

ಕರುಣಾಳೋ ಕಮಲಾವರಾ ।
ಕಾಯುವ ಭಾರವು ನಿನ್ನದು ||
ದೇವಾ । ದಾರುಣತರ ಸಂಕಟದಿಂದ ||
ಕ್ರೂರಮಕರಿ ಹಿಡಿತದಿ ಸಿಕ್ಕಂಥಾ । ವೀರ
ಗಜೇಂದ್ರನು ಪರವಶನಾಗಿ । ಧೀರ ನಿನಗೆ
ಮೊರೆಯಿಡಲು ವೇಗದೇ ||
ಹಾರಿ ಬಂದು ಕರಿರಾಜನುಳಿಸಿದೆ ।

ಶೂಲ — ಯಾರು ಗೌರೀ.

ಗೌರಿ — (ಎದ್ದು ಅವನ ಹತ್ತಿರಕ್ಕೆ ಹೋಗಿ) ಆಹುದು ನಾನು ಗೌರೀ.

ಶೂಲ — (ಏಳುವ ಪ್ರಯತ್ನ ಮಾಡುವನು.)

ಗೌರಿ — (ಗಾಬರಿಯಾಗಿ) ಛೀ , ಛೀ ಅತ್ತಿತ್ತ ಸರಿದಾಡಗೂಡದು. ತಮಗೂ ಬಾಂಬಿನ ಪೆಟ್ಟುಗಳು ಬಿದ್ದಿವೆ. ಬಲಗಾಲು ಎಡಗೈ ಮತ್ತು ಎಲವು ಗಳಿಗೆ ವಿಶೇಷ ಧಕ್ಕೆಯಾಗಿದೆ. ಡಾಕ್ಟರರು ಚನ್ನಾಗಿ ಕಟ್ಟಿದ್ದಾರೆ. ಇದೋ ಈ ರಸ ಕುಡಿಯಿರಿ (ಮೋಸಂಬಿ ರಸ ಕುಡಿಸುವಳು.)

ಶೂಲ — ಏನು ನನಗೂ ಪೆಟ್ಟಾಗಿದೆಯೇ ?

ಗೌರಿ — ಸ್ವಲ್ಪ ಹೆಚ್ಚಾಗಿ.

ಶೂಲ — (ಆನಂದ ನಟಿಸಿ) ಆಹಹಾ ಸಂತೋಷ; ಚೈನಾ ಬಂಧುಗಳ ದುಃಖ ದಲ್ಲಿ ನಾನೂ ಪಾಲುಗಾರನಾದೆ.

ಗೌರಿ — ಇದೋ ಹೆಚ್ಚಾಗಿ ಮಾತುಗಳನ್ನಾಡಿ ಆಯಾಸಪಟ್ಟುಕೊಳ್ಳಬಾರ ದೆಂದು ಡಾಕ್ಟರರ ಅಭಿಪ್ರಾಯ.

ಶೂಲ — ಇಲ್ಲ, ಆಯಾಸಪಟ್ಟುಕೊಳ್ಳುವದಿಲ್ಲ.

ಗೌರಿ — ಇನ್ನೂ ಸ್ವಲ್ಪ ಹಣ್ಣಿನ ರಸವನ್ನು ಕುಡಿಯಿರಿ.

ಶೂಲ — (ಕುಡಿದು ಸಮಾಧಾನ ನಟಿಸಿ) ಗೌರೀ ! ನಾನು ಉಪಚರಿಸುತ್ತಿದ್ದ ಆ ಚೀನೀ ಕಂದಮ್ಮನ ಗತಿ ಏನಾಯಿತು ? ಪಾಪ ! ಅದರ ತಲೆಯ ಡ್ರೆಸ್ಸಿಂಗ ಬಿಚ್ಚಿತ್ತು. ನನ್ನಿಂದ ಕಟ್ಟುವದಾಗಿದ್ದಿಲ್ಲ.

ಗೌರೀ — ಅಂತಹ ಸ್ಥಿತಿಯಲ್ಲಿ ಪುನಃ ಬಾಂಬಿನ ಒಂದು ತುಣುಕು ಅದರ ಎದೆಗೆ ಬಡೆದು ಅದು ಕೂಡಲೇ ಪ್ರಾಣಬಿಟ್ಟಿತು.

ಶೂಲ — ಪ್ರಾಣ ಬಿಟ್ಟಿತು ! ಸರಿ, ಯಾತನೆಗಳಿಂದ ಮುಕ್ತವಾಯಿತು. ಉಂ. ಭೂಮಿಯಲ್ಲಿ ಸೈತಾನನ ತಾಂಡವ ನೃತ್ಯವು ನಡೆದಿದೆ. ಬಾಂಬಿನ ಪೆಟ್ಟುಗಳೇ ಅದಕ್ಕೆ ತಾಳ, ರೈಫಲ್ಲುಗಳ ಕೋಟ್ಯಾವಧಿ ಪಟಪಟ ಶಬ್ದಗಳೇ ಅದರ ಕಾಲ್ಗೆಜ್ಜೆಗಳ ನಾದ, ಗಾಯ ಹೊಂದಿದವರ ರೋದನವೇ ಅದರ ಸಂಗೀತ.

ಗೌರೀ — (ಸ್ವಲ್ಪ ಬೆದರಿಸುವ ಸ್ವರ) ಇದೋ ಶೂಲಪಾಣೀ ಹೆಚ್ಚಾಗಿ ಮಾತುಗಳನ್ನಾಡಿ ಆಯಾಸಪಟ್ಟುಕೊಳ್ಳಬಾರದೆಂದು ಡಾಕ್ಟರರು ಹೇಳಿದ್ದಾರೆ.

ಶೂಲ — (ಅವಳ ಮಾತಿನ ಕಡೆಗೆ ಅಲಕ್ಷ್ಯಮಾಡಿ) ಗೌರೀ, ಅರಸುತನದ ಆರಾಧ್ಯ ದೈವತವೇ ಪೈಶಾಚಿಕ ಸ್ವಾರ್ಥ, ಅದನ್ನು ತೃಪ್ತಪಡಿಸುವ ಪೂಜಾವಿಧಾನವೇ ಯುದ್ಧ, ರಾಯಫಲ್, ಬಾಂಬ, ಟ್ಯಾಂಕ, ತೋಪುಗಳೇ ಅದರ ಪೂಜಾಸಲಕರಣ, ವಿಷಧೂಮ್ರವೇ ಧೂಪಾ, ಅಗಣಿತ ನರಬಲಿಯೇ ಅದಕ್ಕೆ ನೈವೇದ್ಯ , ಭಲಾ ! ಭಲಾ ! ನರಜನ್ಮವೇ (ಚೀರಿ ಎಚ್ಚರದಪ್ಪಿ ಬೀಳುವನು.)

ಗೌರಿ — (ಗಾಳಿ ಹಾಕಿ ಎಚ್ಚರಿಸಿ) ನೀವು ಸುಮ್ಮನಿರುವದಿಲ್ಲವೇ ?

ಶೂಲ — (ನಿಟ್ಟುಸಿರು ಬಿಟ್ಟು) ಹಾಗಾದರೆ ನೀನು ಯಾವಾಗಲೂ ಹೇಳುವ ಆ ನಿನ್ನಂಥ ಸತ್ಯಸಂಧ || ಎಂಬ ಕೀರ್ತನವನ್ನು ಹೇಳು. ಕೇಳುತ್ತ ಕೇಳುತ್ತ ಮನವನ್ನು ಈ ಹಿಂಸಾಮಯ ನರಕದಿಂದ ಅಹಿಂಸಾಮಯವಾದ ಸ್ವರ್ಗದಲ್ಲಿ ವೈದಿರಿಸುವೆನು.

ಪದ (ಗಜಲ)

ಗೌರಿ— ನಿನ್ನಂಥ ಸತ್ಯಸಂಧ । ಇನ್ನಾರು ಲೋಕದಲ್ಲಿ ।
ನಳನಹುಷ ಹರಿಶ್ಚಂದ್ರ । ಉಳಿದರ್ ಪುರಾಣದಲ್ಲಿ ।
ನಂಬಿಹಳು ಭಾರತಾಂಬೆ । ತನ್ನ ದಾಸ್ಯಮುಕ್ತಿಗಾಗಿ ।
ನಿನ್ನನ್ನು ದೀನ ಬಂಧು । ಕಸ್ತೂರಿದೇವಿ ನಲ್ಲ ॥

— ಅಂಕು —

ಡಾಕ್ಟರ — ಮಿಸ್ ಗಂಗಾ! ಶೂಲಪಾಣಿಯ ವೃತ್ತಿಯೇ ಬದಲಾಗಿದೆ. ತಾನು ಹಿಂದುಸ್ತಾನಕ್ಕೆ ಬರುವದೇ ಇಲ್ಲವೆಂದು ಅವನು ಹೇಳುತ್ತಿರುವನು.

ಗಂಗಾ — ಬಾಂಬಿನ ಪೆಟ್ಟಿನಿಂದ ಪಂಗುವಾಗಿ ವಿಕಾರ ಮುಖನಾದುದಕ್ಕೆ ಆತನು ಹಾಗೆ ಹೇಳುವನಲ್ಲವೇ ?

ಡಾಕ್ಟರ — ಅಹುದು ತನ್ನವರಿಗೂ ತನ್ನ ಗ್ರಾಮದವರಿಗೂ ತನ್ನ ಆ ದುರ್ದಶೆಯನ್ನು ಖಂಡಿತವಾಗಿ ತೋರಿಸಲಾರೆನೆಂದು ಅವನು ಹೇಳುತ್ತಿರುವನು.

ಗಂಗಾ — ಡಾಕ್ಟರ್ ನನ್ನ ಅಭಿಪ್ರಾಯವನ್ನು ಕೇಳುವದಾದರೇ ರಣಕ್ಷೇತ್ರದಿಂದ ಅಚ್ಚಳಿಯದೇ ತಿರುಗಿ ಬರುವ ಸೈನಿಕನಿಗಿಂತಲೂ ಅತಿಶಯವಾಗಿ ಪೆಟ್ಟು ತಿಂದು ಮರಳಿ ಬರುವ ಶೂಲಪಾಣಿಯಂಥ ಸಾಹಸಿಯನ್ನೇ ಗುಣಲುಬ್ಧರಾದ ನಮ್ಮಂಥವರು ಹೆಚ್ಚು ಪ್ರೀತಿಸುವರು. ನಿಜವಾದ ಶೂರ ಸೈನಿಕನ ಸರ್ಟಿಫಿಕೆಟ್ಸ್ ಮತ್ತು ಮೆಡಲ್ಸಗಳೆಂದರೆ ಅವನ ಮೈಮೇಲೆ ಒಡೆದು ಕಾಣಿಸುವ ಶಸ್ತ್ರಾಸ್ತ್ರಗಳ ಗಾಯ, ಸುಟ್ಟ ಕಲೆಗಳೇ !

ಡಾಕ್ಟರ — ನೀನು ಹೇಳುವದು ನಿಜವಾಗಿದ್ದರೂ ಶೂಲಪಾಣಿಯಂಥ ಕೇವಲ ಪಂಗುವಾದವನು ಮುಂದೇನು ಮಾಡಬೇಕು ? ಕೈಕಾಲುಗಳು ಮುರಿದು ಹೋಗಿವೆ. ಬಾಂಬಿನ ಹೊಗೆಯಿಂದ ಕಣ್ಣುಗಳು ಮಂಜಾಗಿ ಬಿಟ್ಟಿವೆ. ಪಕ್ಕೆಲುವುಗಳು ಸಡಲಿ ಇಂಥವನು ಬಾಳಿ ಮಾಡುವದೇನು ?

ಗಂಗಾ — ಡಾಕ್ಟರ ಹೀಗೇನು ಹೇಳುವಿರಿ ! ಶೂಲಪಾಣಿಯಂಥವನು ಶತಾಯುಷ್ಯವಂತನಾಗಿ ಬಾಳಬೇಕು. ಅಂತಹ ಆದರ್ಶವೀರನು ತರುಣರ ಕಂಠಮಣಿಯಾಗುವನು. ಅವನನ್ನು ನೋಡುತ್ತಲೇ ಯುವಕರಲ್ಲಿನ ಹೇಡಿತನವು ಮಾಯವಾದೀತು. ಅವನ ಮಾತುಗಳನ್ನು ಕೇಳುತ್ತಲೇ

ರಾಷ್ಟ್ರಸೇವಾ ಪರಾಂಙ್ಮುಖರಾದ ತರುಣರ ನಾಡಿಗಳಲ್ಲಿ ಹುರುಪಿನ ಮಿಂಚು ಸಂಚರಿಸೀತು ! ಆಬಾಲವೃದ್ಧರೆಲ್ಲರಿಗೂ ಅವನ ದರ್ಶನ ದಿಂದ ಧನ್ಯತೆಯೆನಿಸೀತು. ಕೃತಕೃತ್ಯನಾದ ಆತನು ಅಖಂಡವಾಗಿ ಕಣ್ಣೆದುರಿನಲ್ಲಿರಲೆಂದೇ ನಮ್ಮಗಳ ಬಯಕೆ. ಆದ್ದರಿಂದ ಹೇಗಾದರೂ ಮಾಡಿ, ಅವನನ್ನು ನಮ್ಮಗೂಡ ಹಿಂದುಸ್ತಾನಕ್ಕೆ ಕರೆದುಕೊಂಡು ಹೋಗಲೇಬೇಕು.

ಡಾಕ್ಟರ — ನಿನ್ನ ಅಭಿಪ್ರಾಯವು ಸಮಂಜಸವಾಗಿದೆ ನಡೆ. ಗೌರಿಯು ಜಡ್ಡು ಗುಣವಾಗುವಷ್ಟರಲ್ಲಿ ಸ್ವದೇಶಕ್ಕೆ ಹೊರಡುವದಕ್ಕಾಗಿ ಶೂಲ ಪಾಣಿಯ ಮನವೊಲಿಸುವಾ

ಗಂಗಾ — ಡಾಕ್ಟರ್ ನಿನ್ನಿನ ಗೌರಿಯಃ ಸ್ಥಿತಿಯನ್ನು ನೋಡಿ ಅವಳು ಬದುಕು ವದಿಲ್ಲವೆಂದು ತಿಳಿದು ನಾನಂತೂ ಗಾಬರಿಯಾಗಿದ್ದೆನು.

ಡಾಕ್ಟರ — ಇನ್ನೇನು ಪರವಿಲ್ಲಾ. ನಿನ್ನಿಗೆ ೨೧ ದಿನಗಳಾದದ್ದಕ್ಕೆ ಜ್ವರವು ನಾರ್ಮಲ್‌ದ ಹತ್ತರಕ್ಕೆ ಬಂದಿದೆ. ಈಗ್ಗೆ ತಾನೇ ನೋಡಿಕೊಂಡು ಬಂದೆ. ಗೌರಿಯು ತೀವ್ರ ಗುಣವಾಗುವಳೆಂದು ಗ್ಯಾರಂಟೀ ಕೊಡುವೆ. ಆದಾಯಿತು ! ಶೂಲಪಾಣಿಯಲ್ಲಿ ? ಒಂದೆರಡು ದಿನಗಳಲ್ಲಿ ಅವನ ಭೆಟ್ಟಿಯೇ ಇಲ್ಲದಾಗಿದೆ.

ಗಂಗಾ — ನಿಮಗೆ ಗೊತ್ತಿಲ್ಲವೇ ಅವನಿರುವ ಸ್ಥಲ ? ಅದೋ ಆ ಗಿಡಗಳ ಗುಂಪಿನಲ್ಲಿ ಉದಾಸೀನಭಾವದಿಂದ ಯಾವಾಗಲೂ ಉರುಳಿಕೊಂಡಿ ರುತ್ತಾನೆ.

ಡಾಕ್ಟರ — ಹಾಗಾದರೆ ನಾನವನನ್ನು ಕಂಡು ಬರುವೆನು. ನೀನು ಗೌರೀ ಹತ್ತರಕ್ಕೆ ಇರು. (ಹೋಗುವನು.)

(ಗಿಡಗಳ ಗುಂಪಿನ ಪ್ರದೇಶ, ಶೂಲಪಾಣೀ ಉದಾಸೀನ ಭಾವದಲ್ಲಿ ತತ್ವಪದ ಹಾಡುತ್ತ ಕುಳಿತಿರುವನು. ಮುಖವು ಬಾಂಬಿನಿಂದ ಸುಟ್ಟದೆ. ಕೈಕಾಲು ಮುರಿದಿವೆ ಇತ್ಯಾದಿ.)

|| ಪದ ||

ಶೂಲಪಾಣಿ — ಮನನಾತೀತವಿದೇ । ವಿಶ್ವಂಭರ ಮಾಯಾಭಾರೀ ||
ಮಹಾಮಹಾ ಮಹಿಮಾ । ಶಾಲಿನರರು ಮನಗಾಣದೇ !
ನಿಜವಂ ಕಾಣದೇ ವಶರಾದರು ಮೌನಾ । ಭಾರೀ ||
ಆರು ವೈರಿಗಳ ಘನ ವ್ಯಾಪಾರವಲ್ಲದೇ ವಿಶ್ವದಲ್ಲಿ ।
ಪರಿಯಾಲೋಚಿಸಲೇನು । ತೋರದುದಾಗಿದೆ ಬೇರೆ ||

ಡಾಕ್ಟರ — (ಹಿಂದೆ ಬಂದು ಕೆಮ್ಮಿ ಸಂಕೇತ ಮಾಡುವನು.)

ಶೂಲ — ಯಾರು ಡಾಕ್ಟರ, ಏನು ಬಂದಿರಿ ?

ಡಾಕ್ಟರ — ನಿಮ್ಮನ್ನು ಕ್ಯಾಂಪಿಗೆ ಕರೆದೊಯ್ಯಲು. ಶೂಲಪಾಣೀ ನಡೆಯಿರಿ ಇದು ಅಷ್ಟು ಆರೋಗ್ಯಕರವಾದ ಸ್ಥಲವಲ್ಲ.

ಶೂಲ — ಆರೋಗ್ಯ ಭಾಗ್ಯವಂತನಾಗಿ ನಾನೇನು ಮಾಡಬೇಕಾಗಿದೆ. ನನ್ನಂತಹ ಕೈಕಾಲ್ಗಳಿಲ್ಲದ ಕಣ್ಣು ಮಂಜಾದ ಕೇವಲ ಭೂಭಾರನಾಗಿ ಕಾಲಹರಣ ಮಾಡುವವನು ಆರೋಗ್ಯ ಭಾಗ್ಯವಂ ಪಡೆದು ಮಾಡುವದೇನು ?

ಡಾಕ್ಟರ — ಶೂಲಪಾಣೀ ವಿದ್ಯಾವಂತರಾದ ನೀವು ಹೀಗೆ ಅಜ್ಞಾನಿಗಳಂತೆ ಮಾತುಗಳನ್ನಾಡಬಹುದೇ ? ನಿಮ್ಮಂಥವರು ಆರೋಗ್ಯ ಭಾಗ್ಯವಂ ಪಡೆದು ಯುವಕರಲ್ಲಿ ಹುರುಪನ್ನುಂಟು ಮಾಡುವದಕ್ಕಾದರೂ ಬಹು ದಿನ ಬಾಳತಕ್ಕದ್ದು. ಚತುರ್ಭುಜ ಶಂಖ ಚಕ್ರ ಗದಾ ಪದ್ಮಗಳು ಹೇಗೆ ಶ್ರೀ ವಿಷ್ಣುವಿನ ಪರಿಚಯ ಮಾಡಿಕೊಡುವ ಲಾಂಛನಗಳೋ ಹಾಗೆಯೇ ಮುರಿದ ಕೈಕಾಲುಗಳು ಮೈಮೇಲೆ ಶಸ್ತ್ರಾಸ್ತ್ರಗಳ ಪೆಟ್ಟಿನಿಂದಾದ ಕಲೆಗಳು ಶೂರನಿಗೆ ಶೋಭೆಯನ್ನುಂಟು ಮಾಡಿ, ಪರಿಚಯ ಮಾಡಿಕೊಡುವ ಗೌರವದ ಚಿನ್ಹಗಳಾಗಿವೆ. ಕಾರಣ ನೀವು ಈ ಔದಾಸಿನ್ಯವನ್ನು ಬಿಟ್ಟು ನಮ್ಮೊಡನೇ ನಡೆಯಲೇಬೇಕು.

ಶೂಲ — (ದೈನ್ಯದಿಂದ) ಡಾಕ್ಟರ್ ನನ್ನನ್ನು ಹೆಚ್ಚಾಗಿ ಮಾತಾಡುವಂತೆ ಮಾಡಬೇಡಿಯಪ್ಪಾ ನಾನು ಬಹು ದುರ್ಬಲ ಮನಸ್ಸಿನವನಾಗಿದ್ದೇನೆ. ನನ್ನ

ಪಾಡಿಗೆ ನನ್ನನ್ನು ಬಿಟ್ಟುಕೊಟ್ಟರೆ ಕೆಲಕಾಲ ಬುದ್ಧಿಯ ಪ್ರಯೋಜನ ಹೊಂದಿ, ಆತ್ಮಾನಾತ್ಮ ವಿಚಾರಮಗ್ನನಾಗಿ, ಮನಕ್ಕೆ ಶಾಂತಿಯನ್ನು ತಂದುಕೊಳ್ಳುವ ಪ್ರಯತ್ನ ಮಾಡುವೆ.

ಡಾಕ್ಟರ — ನಮ್ಮಗಳ ಜೊತೆಯಲ್ಲಿಯೇ ಇದ್ದು ಅಷ್ಟು ಮಾಡಲಿಕ್ಕೆ ಬಂಧಕವೇನು ?

ಶೂಲ — (ಸಿಡುಕತನದಿಂದ) ನಾನ್‌ಸೆನ್ಸ್ ! ಹೊರಟು ಹೋಗಿ ಜೋಗಾ ಫಾಲ್ಸಿನ ಬಳಿಯಲ್ಲಿ ಕುಳಿತು ವೀಣೆಯನ್ನು ಬಾರಿಸಬೇಕಂತೆ.

ಡಾಕ್ಟರ —ಶೂಲಪಾಣೀ! ಸಿಟ್ಟಾಗಬೇಡಿ; ನಾವು ನಿಮ್ಮ ಹಿತಚಿಂತಕರು, ಗೆಳೆಯರು ನಿಮ್ಮನ್ನು ನಾವು ಅಗಲಿರಲಾರೆವು. ಪ್ರಯುಕ್ತ ಹೇಗೆ ಬಂದಿರುವೆವೋ ಹಾಗೆ ನಾವೆಲ್ಲರೂ ಕಲೆತು ಹಿಂದುಸ್ತಾನಕ್ಕೆ ಹೋಗಲೇಬೇಕು.

ಶೂಲ — (ಡಾಕ್ಟರನನ್ನು ಹರಿದು ತಿನ್ನುವಂತೆ ನೋಡುತ್ತ ವ್ಯಂಗವಾಗಿ) ಅಲ್ಲಿ ನೀವು ನನ್ನನ್ನು ಷೋ ರೂಮಿನಲ್ಲಿಟ್ಟು ಭಾರತೀಯರಿಗೆ ತೋರಿಸತಕ್ಕವರು. ಟಿಕೇಟ ದರವನ್ನು ಸ್ವಲ್ಪ ಹೆಚ್ಚಾಗಿಡಿ. ಅಂದರೆ ಚನ್ನಾಗಿ ಕಾಸಾಗುವದು. ಅಡ್ವರಟಾಯಿಜ್ ಮಾಡುವ ಹ್ಯಾಂಡಬಿಲ್ಸ್ ಮತ್ತು ವಾಲ್‌ಪೋಸ್ಟರ್ಸಗಳಲ್ಲಿ ನನ್ನ ಆಕ್‌ಚ್ಯುಅಲ್ ಬ್ಲಾಕ್ ಹಾಕಿಸಿದರಂತೂ ಒಳ್ಳೇ ಪ್ರಯೋಜನವಾದೀತು ! ನಮ್ಮ ಪಥಕದಲ್ಲಿನ ಎಷ್ಟು ಜನ ತರುಣ ತರುಣಿಯರು ನನ್ನಂತೆ ಷೋರೂಮಿನಲ್ಲಿಡಲು ಯೋಗ್ಯರಾಗಿದ್ದಾರೆ ? ಸಿಗುವ ಪ್ರಾಪ್ತಿಯಲ್ಲಿ ನಮಗೆಷ್ಟು ಕೊಡುವಿರಿ ?

ಡಾಕ್ಟರ — ಓಹೋ ಇವನನ್ನು ಹೆಚ್ಚಾಗಿ ಮಾತಾಡಿಸಬಾರದು. ಗುಡ್ ಬಾಯ್ (ಹೋಗುವನು.)

ಶೂಲ — ಥ್ಯಾಂಕ್ಸ್ ಮೇನೀ ಮೇನೀ ಥ್ಯಾಂಕ್ಸ್ ಫಾರ್ ಯುವರ್ ಕಾಯಿಂಡ್‌ನೆಸ್ ॥ ಮೊದಲಿನ ಮಟ್ಟಿನ ತತ್ವ ಪದ ॥ ಮಹಾ ಮಹಾ ಮಹಿಮಾಶಾಲಿನವರು ಮನಗಾಣದೇ ॥ ಚಾಲತಿ ॥ ನಿಜವಂ ಕಾಣದೇ ವಶರಾದರು ಮೌನಾಭಾರೀ ॥ ಮನನಾತೀತ ॥

—: ಪ್ರವೇಶ ಜಂಗಲ ರಸ್ತಾ :—

ಡಾಕ್ಟರ — (ವ್ಯಸನದಿಂದ) ಆದರ್ಶವೀರ ಸದ್ಗುಣಗಳ ಆಗರ ಮತ್ತು ತರುಣರ ಕಂಠಮಣಿಯಾದ ಈ ಶೂಲಪಾಣಿಯನ್ನು ಇಲ್ಲಿಯೇ ಬಿಟ್ಟು ನಾವು ಭಾರತಕ್ಕೆ ಮುಖ ತೋರಿಸುವದು ಹೇಗೆ? ಅವನು ನಮ್ಮೊಡನೇ ಬರಲೊಪ್ಪುವದಕ್ಕೆ ಏನು ಮಾಡಲಿ ! ಗೌರಿ-ಶೂಲಪಾಣಿಯರು ನಮ್ಮ ಪಥಕದ ಪ್ರಾಣರು. ನಮ್ಮಗಳ ಸುದೈವದಿಂದ ಮೃತ್ಯು ಮುಖದಲ್ಲಿ ಸಿಕ್ಕ ಗೌರಿಯು ಪಾರಾಗಿ ಹೊರಗೆ ಬಂದಳು. ಅವಳ ಸಲುವಾಗಿದ್ದ ಚಿಂತೆಯು ದೂರಾಯಿತು. ಆದರೆ ಈ ಶೂಲಪಾಣಿಯ ವಿಚಾರವಾಗಿ, ಅದು ಬಹುವಾಗಿ ಬೆಳೆಯಿತು.

ಗಂಗಾ — ಡಾಕ್ಟರ್? ಕೊನೆಗೆ ಶೂಲಪಾಣಿ ಏನೆಂದನು ?

ಡಾಕ್ಟರ — ಅವನ ಸ್ಥಿತಿಯನ್ನು ನೋಡಿ ಗಂಗಾ ನನಗೆ ಬಹು ದಃಖವಾಯಿತು. ಯಾವನು ಸದಾ ಆನಂದವೃತ್ತಿಯಲ್ಲಿರುತ್ತಿದ್ದನೋ ಅವನೇ ಇಗ್ಯೆ ಮಿತಿ ಮೀರಿದ ಸಿಡಕನಾಗಿ ಬಿಟ್ಟಿದ್ದಾನೆ ತನಗೆ ಒಪ್ಪಿಗೆ ಇಲ್ಲದ ಬುದ್ಧಿವಾದ ಮಾಡುವ ಎಲ್ಲರನ್ನೂ ತನ್ನ ವೈರಿಗಳೆಂದೇ ಭಾವಿಸುವ ಮಟ್ಟಿನ ಮನೋದುರ್ಬಲನಾಗಿದ್ದಾನೆ.

ಗಂಗಾ — ಕೊನೆಗೆ ಇಂಡಿಯಾಕ್ಕೆ ಹೊರಡುವ ವಿಚಾರಕ್ಕೆ ಏನಂದನು ?

ಡಾಕ್ಟರ — ಬರುವದಿಲ್ಲವೆಂದು ಗಟ್ಟಿ ಹಿಡಿದಿದ್ದಾನೆ. ಏನೋ ಪ್ರೇಮಲ ಸ್ವಭಾವಿಯಾದ ನೀನು ಇನ್ನೂ ಪ್ರಯತ್ನ ಮಾಡಿ ನೋಡು. ಗೌರಮ್ಮನಾಗಿದ್ದರೆ ಇಷ್ಟು ಹೊತ್ತಿನಲ್ಲಿ ಅವನ ವಿಚಾರಗಳನ್ನು ತಿಳಿದು ಬಿಡುತ್ತಿದ್ದಳು.

ಗಂಗಾ — ಅದಹುದು; ಆದರೆ ಟಾಯಫ್ಯಾಡದಿಂದ ನರಳುವ ಅವಳಿಂದೇನಾಗಬೇಕಾಗಿದೆ.

ಡಾಕ್ಟರ — ಗಂಗಾ! ಶೂಲಪಾಣಿಯನ್ನು ಜೊತೆಗೆ ಕೊಂಡೊಯ್ಯದೇ ವಿಧಿಯಿಲ್ಲ. ಅಲ್ಲದೇ ಒಂದೆರಡು ದಿನಗಳಲ್ಲಿಯೇ. ಈ ಕ್ಯಾಂಪು ಬದಲು

ಮಾಡಲೇಬೇಕು. ಯಾಕಂದರೆ ಈಗ್ಯೆ ಇಲ್ಲಿಯ ಹವೆಯು ಬಹಳವಾಗಿ ಕೆಟ್ಟಿದೆ. ಹೋಗು, ಹೋಗು, ಅವನ ಮನವೊಲಿಸುವ ಯತ್ನಮಾಡು.

ಗಂಗಾ — ನೋಡುವಾ, ಪ್ರಯತ್ನಮಾಡಿ ನೋಡುವಾ. (ಹೋಗುವಳು)

ಪ್ರವೇಶ

(ಒಂದು ದೊಡ್ಡ ಭಾವಿ. ಯಾತದ ಬದಿಯಲ್ಲಿ ಅಂದರೆ (ಕಪ್ಪಲಿ ಹೊಡಿಯುವ ಚಕ್ರದ ಬುಡದಲ್ಲಿರುವ ಡೋಣಿಯ ತುಟ್ಟ ತುದಿಗೆ ಕುಳಿತು ಬಾವಿಯಲ್ಲಿ ಕಾಲು ಇಳಿ ಬಿಟ್ಟು) ಶೂಲಪಾಣಿ :— (ವೈರಾಗ್ಯ)

|| ಪದ ||

ಈ ತನುವಾ ಏತಕೆ। ಜೀವಾತುಮ ತಾಳಿರುವಾ ||
ಹತಮತಿ ವ್ಯರ್ಥ ಭುವಿಗೆ ಬಹುಭಾರ ||
ಈಜುವನು ಸಹಾಯವ ಪಡೆಯುವನೇ ?
ಕೊರಳೊಳು ನೇತು ಬಿದ್ದ ಶಿಲೆಯು। ಈ ತನುವಾ ||

ಗಂಗಾ — (ಶೂಲಪಾಣಿಯನ್ನು ನೋಡಿ ಗಾಬರಿಯಾಗಿ) ಅಹಹಾ ! ಶೂಲಪಾಣಿಯು ಎಂತಹ ಸ್ಥಳದಲ್ಲಿರುವನು. ಕೇವಲ ಬಾವೀ ದಂಡೆಯಲ್ಲಿ ! ಆಕಸ್ಮಾತ್ ಜೋಲಿ ಹೋದರೆ ! ಎಂತಹ ಬುದ್ಧಿವಂತನು ಎಷ್ಟು ಬುದ್ಧಿ ಹೀನನಾಗಿ ಬಿಟ್ಟನು! ಶೂಲಪಾಣೀ–ಅಣ್ಣಾ ಶೂಲಪಾಣೀ

ಶೂಲ — ಇವಳಾವ ತಂಗಿ. ತಂದೆ ತಾಯಿಗಳಿಂದ ನಾನೊಬ್ಬನೇ ಹುಟ್ಟಿ ಬಂದಿರಲು ಈ ಹೊಸದಾದ ತಂಗಿ ಯಾವಾಗ್ಗೆ ಹುಟ್ಟಿ ಬಂದಳು (ನೋಡಿ) ಬಾ ತಂಗೀ, ಯಾವ ಉದ್ದೇಶ ಸಾಧನೆಯ ಗುರಿಯನ್ನಿಟ್ಟು ಕೊಂಡು ನೀನು ನನ್ನನ್ನು ತಾತ್ಪೂರ್ತಿಕ ಅಣ್ಣನನ್ನಾಗಿ ಮಾಡಿಕೊಂಡೀ?

ಗಂಗಾ — (ದೈನ್ಯಭಾವ) ಶೂಲಪಾಣೀ, ನಾನು ನಿನ್ನೊಡನೆ ಮುಂದಿರುವ ಮಾತಿನ ಪ್ರಸ್ತವನ್ನೇ ಮಾಡಬಾರದೆಂದು ಹೀಗೆ ಬಿರುಸು ಮಾತುಗಳಿಂದ ಮೊದಲಿಗೇನೇ ಉಪಸಂಹಾರ ಮಾಡುವಿಯಾ ? ಆಗಲಿ ನಿನ್ನಿಚ್ಛೆ, ಬರುವೆನು. (ಹೋಗಲುಪಕ್ರಮಿಸುವಳು)

ಶೂಲ — ಗಂಗಾ, ಏ ಗಂಗಾ ಸಿಟ್ಟಾದಿಯೇನೇ (ವಿನಯ) ದೇಹ ದುರ್ದಶೆಗಾಗಿ ನಾನು ಪಾಪಿಯಾಗಿ ಬಿಟ್ಟಿದ್ದೇನೆ. ಹಿತಚಿಂತಕರಾದ ನಿಮ್ಮಗಳ ಮನವನ್ನು ಇಂತಹ ಬಿರುಸು ಮಾತುಗಳನ್ನಾಡಿ ನೋಯಿಸುವದೇ ನನ್ನ ಚಟವಾಗಿ ಬಿಟ್ಟಿದೆ. ಈಗ್ಗೆ ಸ್ವಲ್ಪ ಸಮಯದ ಹಿಂದೆ ನನ್ನ ಸನ್ಮಿತ್ರರು ಮತ್ತು ಹಿತಚಿಂತಕರಾದ ಡಾಕ್ಟರರಿಗೆ ಏನೇನೋ ಮನಕ್ಕೆ ಹತ್ತುವ ಮಾತುಗಳನ್ನಾಡಿ ಬಿಟ್ಟೆ. (ಉಸುರ್ಗರೆದು) ಆದದ್ದಾಯಿತು, ಗಂಗಾ ನನ್ನನ್ನು ಕ್ಷಮಿಸುವಿಯಾ ? ಬಾ ಹೀಗೆ ಹತ್ತಿರಕ್ಕೆ ಬಾ. ಏಕೆ ನನ್ನ ಹತ್ತರ ಬರಲು ಮನವು ಒಪ್ಪಲೊಲ್ಲದೋ ? ಹೇಗೆ ಒಪ್ಪೀತು ! ಸುಟ್ಟು ಮುಖದವನಾಗಿ ಅಂಗವಿಹೀನನಾಗಿ ಕಾಲ್ಪನಿಕಪಿಶಾಚಿಗಿಂತಲೂ ವಿಕಾರ ರೂಪಿಯಾದ ನನ್ನ ಹತ್ತಿರಕ್ಕೆ ಬಂದು ಕುಳಿತು ಕೊಳ್ಳಲು ಯಾರ ಮನವು ತಾನೇ ಒಪ್ಪೀತು ? ಬೇಡ, ಬೇಡ ಹತ್ತರ ಬರಬೇಡ. ಅಲ್ಲಿಯೇ ನಿಲ್ಲು, ನಾನು ಪಾಪಿಯಾಗಿದ್ದೇನೆ. ಪಿಶಾಚಿಗಿಂತಲೂ ಕಡೆಯಾಗಿ ಬಿಟ್ಟಿದೆ ನನ್ನವಸ್ಥೆ.

ಗಂಗಾ — (ಅಳುತ್ತ ಶೂಲಪಾಣಿಯನ್ನಪ್ಪಿ) ಅಣ್ಣಾ ಶೂಲಪಾಣೀ, ನಾನು ಆ ವಿಚಾರದಿಂದ ದೂರ ನಿಂತಿದ್ದಿಲ್ಲವೋ ಬಾವಿಯ ತುಟ್ಟ ತುದಿಗೆ ಕುಳಿತವನಾದ ಮನೋವ್ಯಥೆಯಿಂದ ಹಗುರು ಮನಸ್ಸಿನವನಾದ ನಿನ್ನ ಇಚ್ಛಾ ವಿರುದ್ಧ ಆಚರಣೆಯು ಆಕಸ್ಮಾತ್ ನನ್ನಿಂದಾದರೆ ಎಲ್ಲಿ ನೀನು ಬಾವಿಯಲ್ಲಿ ಉರುಳುವಿಯೋ ಎಂದು ಅಂಜಿಕೊಂಡಿದ್ದೆ. (ಅಕ್ಕರತೆಯಿಂದ) ಶೂಲಪಾಣಿ ನಿನ್ನನ್ನು ಹಿಂದಕ್ಕೆ ಸರಿಸಲೋ ?

ಶೂಲ — ಆಗಲಿ ಸರಿಸು.

ಗಂಗಾ — (ಅವನನ್ನು ಹಿಡಿದು ಸರಿಸುವಾಗ್ಗೆ)

ಶೂಲ — (ಅವಳ ಆಧಾರದಿಂದ ಏಳುವ ಶೂಲಪಾಣಿ ನೀರಲ್ಲಿ ತಮ್ಮೀರ್ವರ ಪಡಿ ನೆಳಲು ನೋಡಿ ಗಟ್ಟಿಯಾಗಿ) ಗಂಗಾ, ಸೀದ್ಯಾ ದೇವಿಯೊಬ್ಬಳನ್ನು ಸೈತಾನವು ಹಿಡಿದು ಬಿಟ್ಟಿದೆ. ಹೊಡೆ ಆ ಸೈತಾನನ್ನು ; ಒಂದು ಕಲ್ಲಿನಿಂದ ಓಡಿಸು ಅದನ್ನು.

ಗಂಗಾ — (ಅಳು ಮುಖದಿಂದ) ಶೂಲಪಾಣೀ! ಬೇಡವೋ ಹೀಗೆ ಮಾಡಬೇಡ

ಶೂಲ — ನೋಡಿದಿಯಾ? ಆ ದೇವ ತರುಣಿಯು ಅಳುವಳು. ಓ ಬ್ರೂಟ್ ಡೆವಿಲ್ ಗೋ ಬ್ಯಾಕ್ ಅಟ್ವನ್ಸ್ (ಸಿಟ್ಟಿನಿಂದ ತುಟ್ಟಿ ಕಚ್ಚುವನು.)

ಗಂಗಾ — ಶೂಲಪಾಣೀ! ಸೈತಾನವೆಲ್ಲಿ! ಮತ್ತು ದೇವಿಯೆಲ್ಲಿ! ಬಾವಿಯ ನೀರಲ್ಲಿ ಕಾಣುವ ಅವು ನಮ್ಮ ಪ್ರತಿಬಿಂಬಗಳಲ್ಲವೇ?

ಶೂಲ — ಪ್ರಜ್ಞೆ ಬಂದಂತೆ ನಟಿಸಿ) ಅ-—ಹು—ದು ಇದು ನನ್ನ ರೂಪ (ಬಾವಿಯಲ್ಲಿ ನೋಡುತ್ತಿರುವಾಗ್ಗೆ) ಇದು ನಿನ್ನ ರೂಪ (ಅವಳನ್ನು ದೂರ ಸರಿಸಿ) ಗಂಗಾ! ಸರಿ ಅತ್ತ, ಅಮಂಗಲ ಪ್ರಾಣಿಯನ್ನು ಬಿಟ್ಟು ದೂರ ಸರಿ.

ಗಂಗಾ — (ವಾಂಛಲ್ಯದಿಂದ) ಇಲ್ಲ. ನಿನ್ನನ್ನು ಬಿಟ್ಟು ಸರಿಯುವದಿಲ್ಲ. ನಿನ್ನ ದೇಹವು ಅಮಂಗಲವಾಗಿದ್ದರೂ ಆತ್ಮವು ದೇವತೆಗಳಿಗಿಂತಲೂ ಮಂಗಲ ರೂಪವನ್ನು ತಾಳಿದೆ. ನಿನ್ನ ಪ್ರತಿಯೊಂದು ಮಾತಿನ ಸೊಲ್ಲಿನಲ್ಲಿ ಸತ್ಯದ ಪುರಸ್ಕಾರ ಅಸತ್ಯದ ತಿರಸ್ಕಾರ ಮಾಡುವ ಸಂದೇಶವೇ ತುಂಬಿದೆ. ಶೂಲಪಾಣೀ! ನಿನ್ನಂಥ ಪವಿತ್ರಾತ್ಮನಾದ ಭಾರತೀಯನ ಪತ್ನಿಯೆನಿಸಿಕೊಳ್ಳುವ ಯೋಗ್ಯತೆಯು ನನ್ನ ಗೆಳತಿಯಾದ ಗೌರಿಗಲ್ಲದೇ ಮತ್ತಾವಳಿಗಿದೆ.

ಶೂಲ — (ಕೊಳ್ಳನೇ ನಕ್ಕು) ಬಂತು. ಬೈಲಿಗೆ ಬಂತು. ಗಂಗಾ ನಿನ್ನ ಗುಟ್ಟು ರಟ್ಟಾಯಿತು. ಆದರೆ ಇಷ್ಟು ಹೊತ್ತು ನಡಿದದ್ದು ವಿಷಯಕ್ಕೆ ತಕ್ಕ ಪ್ರಸ್ತಾಪನೆಯಾಗಲಿಲ್ಲ. ಗಂಗಾ ಮೊಟ್ಟಮೊದಲು ನೀನು ನನ್ನನ್ನು ಅಣ್ಣಾ ಎಂದು ಕರೆದಾಗಲೇ ಏನು ಹೇಳಿದ್ದೆ ನೆನಪು ಮಾಡಿಕೋ.

ಗಂಗಾ — (ನೆನಪು ಮಾಡಕೊಳ್ಳುವವಳಂತೆ ನಟಿಸಿ) ಏನು? ನೆನಪಾಗಲೊಲ್ಲದು.

ಶೂಲ — ಬಾ, ತಂಗೀ ಯಾವ ಹೇತು ಸಾಧನೆಗಾಗಿ ನನ್ನನ್ನು! ಟೆಂಪರರೀ ಅಣ್ಣನನ್ನಾಗಿ ಮಾಡಿಕೊಂಡೇ ಎಂದು ಕೇಳಿದ್ದೆನಲ್ಲವೇ?

ಗಂಗಾ — ಅ—ಹು—ದು.

ಶೂಲ — ಮಾತಿನಲ್ಲಿ ಗೌರಿ ಮತ್ತು ನನ್ನ ಪತಿ—ಪತ್ನಿ ಸಂಬಂಧ ಹೇಳುವ ನೀನು ಗೌರಿಯ ಹೇಳಿಕೆಯಿಂದಲೇ ಇತ್ತ ಬಂದಿರುವಿಯಲ್ಲವೇ?

ಗಂಗಾ — ಟಾಯ್‌ಫ್ವಾಡದಿಂದ ಸಾವಿನ ಬಾಯಲ್ಲಿ ನಿಂತ ಗೌರಿಯು ಏನು ತಾನೇ ಹೇಳಬಲ್ಲಳು!

ಶೂಲ — ಗೌರಿಗೆ ಟಾಯಫ್ಯಾಡ ! ಗಂಗಾ ! ಡಾಕ್ಟರನು ಎಂತಹ ಧೂರ್ತನು ಈ ಸಮಾಚಾರವನ್ನು ಅವನು ನನಗೆ ಹೇಳಿಯೇ ಇಲ್ಲವಲ್ಲ.

ಗಂಗಾ — ನಿನ್ನ ಮಟ್ಟಿಗೆ ಆ ಸಮಾಚಾರವನ್ನು ತಿಳುಹಿಸಲಾಗದೆಂದು ಎಲ್ಲರಿಗೂ ಆಜ್ಞಾಪಿಸಿದ್ದನು. ಆದರೆ ಮಂಕುಹಿಡಿದ ನಾನು ಆತನ ಆಜ್ಞಾಭಂಗ ಮಾಡಿದೆನು.

ಶೂಲ — ಎಷ್ಟು ದಿನಗಳಾದವು ! ಅವಳಿಗೆ ಟಾಯಫ್ಯಾಡಾಗಿ ?

ಗಂಗಾ — ಚಿಂತೆಮಾಡುವ ಕಾರಣವಿಲ್ಲ. ೨೧ ದಿನಗಳು ಗತಿಸಿದ್ದಕ್ಕೆ ಜ್ವರವು ನಾರ್ಮಲ್‌ಕ್ಕೆ ನಿಂತಿದೆ. ದಿನಕ್ಕೊಂದು ಚಂದ ಅವಳು ಗುಣವಾಗುತ್ತಿರುವಳು. ಈಗ್ಗೆ ಸ್ವಲ್ಪ ಎದ್ದು ನಾಲ್ಕು ಹೆಜ್ಜೆ ನಡೆದಾಡುವಳು. ಅಲ್ಲದೇ ಒಂದೆರಡು ದಿನಗಳಲ್ಲಿಯೇ ಎಲ್ಲರೂ ಈ ಕ್ಯಾಂಪ ಬದಲು ಮಾಡಬೇಕಾಗಿದೆ ಇಲ್ಲಿಯ ಹವೆಯು ತೀರ ಕೆಟ್ಟಿರುವದೆಂದು ಡಾಕ್ಟರರು ಹೇಳಿದ್ದಾರೆ.

ಶೂಲ — ನೆಕ್ಸ್ಟ ಕ್ಯಾಂಪ ಯಾವದು ?

ಗಂಗಾ — ರಂಗೂನ

ಶೂಲ — ಅಂತೂ ಹಿಂದುಸ್ತಾನದ ಹತ್ತ-ಹತ್ತರಕ್ಕೆ.

ಗಂಗಾ — ಅಹುದಲ್ಲವೇ ? ಅಲ್ಲಿಂದ ಒಂದು ವಾರದಲ್ಲಿಯೇ ನಾವೆಲ್ಲರೂ ಮನೆಯನ್ನು ಸೇರುವೆವು.

ಶೂಲ — ನೀವೆಲ್ಲರೂ ಮಾತ್ರ !

ಗಂಗಾ — ಮತ್ತೆ ನೀನು ? ಮೌನವೇಕೆ ಹೇಳು ! ಹೇಳು ! ನೀನೆತ್ತ ಹೋಗಬೇಕೆನ್ನುವಿ ?

ಶೂಲ — (ಆಕಾಶದ ಕಡೆಗೆ ನೋಡುವನು) ಹತಭಾಗ್ಯನಾದ ನನ್ನ ಮನೆ ಅಲ್ಲಿದೆ.

ಗಂಗಾ — ಓಹೋ ಬಹೂ ಘಾತುಕ ವಿಚಾರಗಳನ್ನು ಮಾಡುತ್ತಿರುವಿಯೆಂದು ತೋರುತ್ತೆ. ನಿನ್ನ ಆಕಾಶದಲ್ಲಿ ನಟ್ಟ ದೃಷ್ಟಿಯಿಂದ ನಿನ್ನ ಅಂತರಂಗವೆಲ್ಲವೂ ಗೊತ್ತಾಯಿತು. ಶೂಲಪಾಣೀ ಆತ್ಮಹತ್ಯ ವಿಚಾರ ಮಾಡುವಿಯಾ ?

ಶೂಲ ಆ—ತ್ಮ—ಹ—ತ್ಯ (ನಕ್ಕು) ಆತ್ಮಹತ್ಯ! ಶುದ್ಧ ಬುದ್ಧಿಹೀನೆ. ಆತ್ಮವು ಹತಿಸಲ್ಪಡುವ ವಸ್ತುವೇ? ॥ ನೈನಂ ಛಿಂದಂತಿ ಶಸ್ತ್ರಾಣಿ। ನೈನಂ ದಹತಿ ಪಾವಕಾ ॥ ಇಂತಹ ಆತ್ಮಹತ್ಯವನ್ನು ಮಾಡುವವನದಾವ ಸಮರ್ಥನು? ಗಂಗಾ, ದೇಹವು ಹೇಶಿಯಾಗಿ ಮಾಸಿದರೆ ಆತ್ಮನು ಅದನ್ನು ಬಿಟ್ಟು ಬೇರೆ ಹೊಸ ದೇಹ ಧಾರಣಮಾಡುವನು. ಅಂತಹ ಮಂಗಲಮಯ ಆತ್ಮನ ಲೀಲೆಗಳಿಗೆ ಆತ್ಮಹತ್ಯೆಯನ್ನುವ ಅಮಂಗಲ ವ್ಯಾಖ್ಯೆಯನ್ನು ಮಾಡಬಹುದೇ?

ಗಂಗಾ — ಶೂಲಪಾಣೀ! ಈ ನಿನ್ನ ಅಂತರಂಗವು ಗೌರಿಗೆ ತಿಳಿದುದಾದರೆ ನಿನಗಿಂತಲೂ ಮೊದಲೇ ಅವಳು ತನ್ನ ಪ್ರಾಣ ವಿಸರ್ಜನೆ ಮಾಡುವಳು.

ಶೂಲ — ಕಾರಣ!

ಗಂಗಾ — ಏನೂ ಅರಿಯದವನಂತೆ ಕೇಳುವಿ;ಅವಳು ನಿನ್ನನ್ನು ಮನಸಾ ಪತಿಯೆಂದು ಭಾವಿಸಿದ್ದಾಳೆ.

ಶೂಲ — ಶುದ್ಧ ಮಂಕು. ಗಂಗಾ! ಹಾಗವಳು ವಿಚಾರ ಮಾಡಿದ್ದರೆ ಕೂಡಲೇ ಅದನ್ನು ಬಿಟ್ಟು ಕೊಡುವದಕ್ಕೆ ಹೇಳು.

ಗಂಗಾ — ನೀನೆ ಹೇಳು ಅಲ್ಲಿಯತನಕ ಬಂದು. ಟಾಯಫ್ಹಾಡ್ ಆದ ವೇಳೆ ನೀನವಳನ್ನು ನೋಡಿಲ್ಲ. ಅನಾಯಾಸವಾಗಿ ಭೆಟ್ಟಿಯಾಗುವದು. ಅಲ್ಲದೇ ಸಾಯಂಕಾಲವೂ ಆಯಿತು.

ಶೂಲ — ನಾನು ಬರಲಾರೆ, ನೀನು ಹೋಗು.

ಗಂಗಾ — ಅಂದರೆ ರಾತ್ರಿಯನ್ನು ಇಲ್ಲಿಯೇ ಕಳೆಯುವಿಯೋ?

ಶೂಲ — ಏನು ತಪ್ಪಾಯಿತು!

ಗಂಗಾ — ಶೂಲಪಾಣೀ ಗಿಡಗಳ ಗುಂಪು, ಹುಳಹುಪ್ಪಡಿಗಳ ಕಾಟ, ಹತ್ತರದಲ್ಲಿಯೇ ಗುಡ್ಡವಿದೆ. ಅಲ್ಲಿಂದ ಬರುವ ಶ್ವಾಪದಗಳ ಭಯ, ಇಂತಹ ಅಪಾಯಕರ ಸ್ಥಲದಲ್ಲಿ ರಾತ್ರಿಯನ್ನು ಕಳೆಯಬೇಕೆನ್ನುವ ನಿನಗೇನನ್ನಲಿ?

ಶೂಲ — ಶುದ್ಧ ಮೂರ್ಖನೆಂದು ಹೇಳಬೇಕಾದರೇ?

ಗಂಗಾ — ಛೀ ನಿನಗೆ ಹೇಳುವದು ನನಗೆ ಸಾಧ್ಯವಿಲ್ಲ. ಬೇಕಾದರೆ ಗೌರಿಯೇ ಬಂದು ಹೇಳಲಿ. (ಹೋಗುತ್ತಿರಲು)

ಶೂಲ — ಬೇಡ ಗಂಗಾ ಅವಳನ್ನು ಕಳುಹಿಸಬೇಡಾ; ವಿಷಮಜ್ವರ ಪೀಡಿತೆಯಾದವಳಿಗೆ ತೊಂದರೆ ಕೊಡಬೇಡ.

(ಗಂಗಾ ಹೋಗುವಳು ಶೂನ್ಯ ದೃಷ್ಟಿಯಿಂದ ನೋಡುತ್ತ ಏನೊ ಒಂದು ಮನೋನಿರ್ಧಾರ ಮಾಡಿ)

|| ಪದ ||

ವೇಷದ ಕಾರ್ಯವು ತೀರಲು । ವೇಷ ದಾಸೆಯು ತರವೇ ||
ಜನಸೇವೆ ಮಾಡಲು । ಅನುಕೂಲವಿಲ್ಲದ ।
ತನುವಿನ ಮೋಹವ ಜೀವವೇ ಬಿಡಲೇಕೆ ಹಿಂಜರಿವೆ ||
ಕೊಡನೇ ನೂತನ ವಸ್ತ್ರ ? || ಬಿಡಲು ಜೀರ್ಣಿಸಿದನ್ನು ||
ಒಡೆಯ ವಿಶ್ವದ ನಾಟ್ಯ ಸಂಘದಾ ಜೀವವೇಕೆ ಹಿಂಜರಿವೆ ? ||

(ಒಂದು ಬದಿಯಿಂದ ಡಾಕ್ಟರ ಗಂಗಾ ಇವರಾಧಾರದಿಂದ ನಡಿದು ಬರುವ ಗೌರಿ)

ಗೌರಿ — ಡಾಕ್ಟರ ನಿಶ್ಚಯವಾಗಿ ಅವನು ಆತ್ಮಹತ್ಯೆಯನ್ನು ಮಾಡಿಕೊಳ್ಳುವ ವಿಚಾರದಲ್ಲಿದ್ದಾನೆ. ನೋಡಿ ನೋಡಿ, ಹೇಗೆ ಬಾವಿಯ ತುಟ್ಟತುದಿಗೆ ಸರಿಯುತ್ತಿರುವನು ! ಓಡಿ ಹೋಗಿ ಅವನನ್ನು ಹಿಡಿಯಿರಿ (ಡಾಕ್ಟರ ಓಡುವನು.) ಗಂಗಾ, ಕಣ್ಣುಗಳಿಗೆ ಝೋಳೆಯು ಬರುತ್ತಲಿದೆ. ಬಿದ್ದು ಬಿಟ್ಟೇನು, ಸಂಬಾಳಿಸು.

ಡಾಕ್ಟರ — (ಶೂಲಪಾಣಿಯನ್ನು ಹಿಡಿದು) ಶೂಲಪಾಣಿ, ಹಿಂದಕ್ಕೆ ಸರಿದು ಕುಳಿತುಕೊಳ್ಳಿ. ಸ್ವಲ್ಪೇ ಜೋಲಿ ಹೋದುದಾದರೇ ಬಾವಿಯಲ್ಲಿ ಬಿದ್ದು ಬಿಟ್ಟೇರಿ. ಅದೋ ನೋಡಿದಿರಾ? ಗೌರಿಯು ನಿಮ್ಮನ್ನು ಕಾಣುವದಕ್ಕಾಗಿ ಬರುತ್ತಿರುವಳು.

ಶೂಲ — (ಸ್ವಗತ) ಅಂತೂ ಕೊನೆಗೆ ಈ ವಿಕಾರ ರೂಪವನ್ನು ನೋಡುವಳು. (ಗೌರಿಯನ್ನು ನೋಡಿ) ಅಹಹಾ ಆ ಪೂರ್ಣ ಚಂದ್ರವು ಈ ರಾಹುವಿನ ಹತ್ತಿರಕ್ಕೆ ತಾನಾಗಿಯೇ ಬರುತ್ತಿರುವದಲ್ಲ! ಅಯ್ಯೋ! ಹತ್ತರಕ್ಕೆ

ಬಂದು ಬಿಟ್ಟೆಳು. (ಡಾಕ್ಟರನಿಗೆ ತಕ್ಕಿಸುವ ವಿಚಾರದಿಂದ) ಡಾಕ್ಟರ್ ನಾನೇನು ಓಡಿ ಹೋಗುವದಿಲ್ಲ ಬಿಡಿ. ಬಿಡಿಯಪ್ಪಾ ನಾನೇನು ಓಡಿ ಹೋಗುವದಿಲ್ಲ.

ಡಾಕ್ಟರ — (ನಿರ್ಧಾರ ಸ್ವರ) ನಂಬಿಗೆ ಸಾಲದು.

ಶೂಲ — (ಅತಿ ಸಿಟ್ಟಿನಿಂದ ಡಾಕ್ಟರನನ್ನು ನೋಡುವಾಗ್ಗೆ)

ಡಾಕ್ಟರ — ಗೌರಮ್ಮಾ ಸಂಬಾಳಿಸು ನೀನು ನಿನ್ನ ಶೂಲಪಾಣಿಯನ್ನು ! (ಶೂಲಪಾಣಿಯನ್ನು ಬಿಡುವನು)

ಶೂಲ — (ಬಾವಿಯಲ್ಲಿ ಉರುಳುವಷ್ಟರಲ್ಲಿ)

ಗೌರಿ — (ಅವನ ಉರುಳುವಿಕೆಯ ಮುಂದಾಗಿ) ನಾನೂ ನಿನ್ನ ಜೊತೆಗೆ ಬರುವೆ. ತಾಳು. ಶೂಲಪಾಣೀ ! ಕೇವಲ ಪರವರ ಸ್ಥಿತಿಯಲ್ಲಿರುವ ನಿನ್ನ ಆರೈಕೆಗಾಗಿ ಸಂಗಡ ಒಬ್ಬರು ಬೇಕೇ ಬೇಕು. ಅದಕ್ಕಾಗಿ ನಾನೂ ಬರುವೆನು.

ಶೂಲ — ನೀನು ವಿಷಮುಜ್ವರದಿಂದ ಶಕ್ತಿವಿಹೀನೆಯಾಗಿರುವಿ

ಗಂಗಾ — ಹಾಗಾಪರೆ ಗಟ್ಟಿಗಳಾದ ನಾನು ನಿಮ್ಮಿಬ್ಬರ ಜೊತೆಯಲ್ಲಿರುವೆನು. ಹೇಗೆ ಶೂಲಪಾಣೀ ?

ಡಾಕ್ಟರ — ಶೂಲಪಾಣೀ ನೀನು ಪಂಗು, ಇನ್ನೂ ನಿನ್ನ ಗಾಯಗಳು ಮಾದಿಲ್ಲ. ಗೌರಿಯು ವಿಷಮುಜ್ವರ ಪೀಡಿತೆ ಇಂತಹ ನಿಮ್ಮಿಬ್ಬರ ಔಷಧೋಪಚಾರಗಳನ್ನು ನೋಡಿಕೊಳ್ಳುವದಕ್ಕಾಗಿ, ಡಾಕ್ಟರನಾದ ನಾನಂತೂ ಜೊತೆಯಲ್ಲಿ ಅವಶ್ಯವಾಗಿ ಬೇಕೇಬೇಕು. ಹೇಗೆ ಗಂಗಾ ?

ಗಂಗಾ — ಅಲ್ಲವೇ ಮತ್ತೆ ! ಇವರಿಗಾಗಿ ನೀನು ಡಾಕ್ಟರ ನಾನು ನರ್ಸ್.

ಶೂಲ — ಚೇಷ್ಟೆ ಮಾಡುವಿರಾ (ಇಬ್ಬರನ್ನು ಸಿಟ್ಟಿನಿಂದ ನೋಡುವಾ.)

ಇಬ್ಬರೂ — ಅಯ್ಯೋ ಉಂಟೇ ? ನೀನು M. A. ಮಾಸ್ಟರ ಆಫ್ ಆರ್ಟ ಪದವೀಧರ ! ನಿನ್ನಂಥ ವಿದ್ವನ್ಮಣಿಯೆಂದೆನಿಸಿಕೊಳ್ಳುವವನ ಜೊತೆಗೆ ಚೇಷ್ಟೇಯೇ ?

ಗಂಗಾ — ಡಾಕ್ಟರ ! ನೀನು ಡಾಕ್ಟರನಾದೇ ನಾನು ನರ್ಸಾದೇ, ನಮ್ಮಿಬ್ಬರ ಕೈಬಾಯಿಯೊಳಗಿನ ಕೆಲಸಗಳನ್ನು ಮಾಡಲಿಕ್ಕೆ ಒಬ್ಬಿಬ್ಬ ಪ್ಯೂನ್ಸ ಬೇಕಲ್ಲವೇ ?

ಡಾಕ್ಟರ — ತೆಗೆದುಕೊಳ್ಳುವಾ; ಅದಕ್ಕೇನು ? ಹಿಂದುಸ್ತಾನದಿಂದ ಹೊರಟವರಲ್ಲಿ ಎಷ್ಟೋ ಜನ ಸ್ಕೌಟ್ಸ ಉಳಿದಿದ್ದಾರೆ.

ಶೂಲ — ಡಾಕ್ಟರ ! ಚೇಷ್ಟೆಯನ್ನು ನಿಲ್ಲಿಸುವದಿಲ್ಲವೇ ?

ಗೌರಿ —ಶೂಲಪಾಣೀ ! ಸಂದರ್ಭಕ್ಕೆ ತಕ್ಕಂತೆ ಮಾತುಗಳನ್ನಾಡುತ್ತಿರುವರು, ನಿನಗದು ಚೇಷ್ಟೆಯಂತೆ ಪರಿಣಮಿಸುವದು. ಅದಕ್ಕಾರೇನು ಮಾಡುವರು?

ಡಾಕ್ಟರ — ಅಲ್ಲದೆ ನಿಮ್ಮೆಲ್ಲರನ್ನು ಸಂಬಾಳಿಸುವದಕ್ಕೆ ರಾಷ್ಟ್ರಪತಿಗಳು ನನಗೆ ಪ್ರತ್ಯೇಕವಾಗಿ ಅಪ್ಪಣೆ ಮಾಡಿದ್ದನ್ನು ನೀವು ಕೇಳಲಿಲ್ಲವೇ ? ಅದಕ್ಕಾಗಿ ನೀವಿದ್ದಲ್ಲಿ ನಾನಿರಲೇಬೇಕು.

ಗಂಗಾ — ಅಲ್ಲದೆ ಕ್ಯಾಪ್ಟನ್ ಗೌರೀ ಶೂಲಪಾಣಿಯರನ್ನು ಬಾಲ-ಬಾಲಿಕಾ ಪಥಕವಾದರೂ ಹಿಂಬಾಲಿಸತಕ್ಕದ್ದೇ ! ಆದ್ದರಿಂದ ಬಿಗಲ್ ಮಾಡಿ ಕರೆಯಲೇನು ಎಲ್ಲರನ್ನು ? (ಸ್ವಲ್ಪ ಬಿಗಲ್)

ಶೂಲ — ಏ ! ಬೇಡಾ. ಬಿಗಲ್ ಮಾಡಬೇಡ; ಗಂಗಾ ! ನನ್ನ ವಿಚಾರದ ಡಂಗುರ ಸಾರಬೇಕೆನ್ನುವಿಯಾ ?

ಡಾಕ್ಟರ — ಕ್ಯಾಪ್ಟನ್ನರ ಉದ್ದೇಶವನ್ನು ಪಥಕಕ್ಕೆ ತಿಳುಹಿಸದಿದ್ದರೆ ಹೇಗೆ ?

ಶೂಲ — ಪ್ರಮಾಣ ಪೂರ್ವಕವಾಗಿಯೂ ಆತ್ಮಹತ್ಯ ವಿಚಾರವನ್ನು ಬಿಟ್ಟು ಕೊಟ್ಟೆ. ಮಿತ್ರರೇ ದೇಹಕ್ಕೊದಗಿದ ಅನವಸ್ಥೆಗಾಗಿ, ಆ ಮಾದರಿಯ ವಿಚಾರವುಂಟಾದದ್ದು ನಿಜ. ಆದರೇ ನಿಮ್ಮೆಲ್ಲರ ಪ್ರತಿಗಾಮಿ ಸತ್ಯಾಗ್ರಹ ಪದ್ಧತಿಯ ಬೋಧದಿಂದ ಆ ದುರ್ವಿಚಾರವು ಮಾಯವಾಯಿತು. ನಡೆಯಿರಿ, ಇದ್ದಸ್ಥಿತಿಯಲ್ಲಿಯೇ ಬೇಗ ಮಾತೃಭೂಮಿಯನ್ನು ಸೇರುವಾ. ಮತ್ತು ಆ ಪೂರ್ಣಾವತಾರ ಸತ್ಯಮೂರ್ತಿಯ ದರ್ಶನ ತೆಗೆದು ಕೊಳ್ಳುವಾ.

ಗಂಗಾ — ಅಷ್ಟು ಮಾಡಿದ ಮೇಲೆ ಆ ದೇವರ ದಯಾದೃಷ್ಟಿಯಿಂದ ನಮ್ಮೆಲ್ಲರ ಕಾಯಕಬಾಧೆಗಳು ಕೂಡಲೇ ಗುಣವಾಗುವವು.

ಶೂಲ — ಮಿಕ್ಕ ಆಂತರಿಕ ರೋಗಗಳು ಆ ಯೋಗೀಶ್ವರನ ಯೋಗ ದೃಷ್ಟಿಯಿಂದ ನಿವಾರಣೆಯಾಗಬಹುದು. ಆದರೆ ಕೈಕಾಲು ಮುರಿದದ್ದು ಹೇಗೆ ನೆಟ್ಟಗಾದಾವು ?

ಡಾಕ್ಟರ — ಬಿಡಯ್ಯಾ ಬಿಡೋ, ಇದೇನು ದೊಡ್ಡ ವಿಷಯ? ಆ ವಿಭೂತಿಯ ವಚನ ಮಾತ್ರದಿಂದ ಮಹಾರೋಗದಿಂದ ಗಲಿತವಾದ ಕೈಕಾಲ್ಬೆರಳುಗಳು ಸಹ ಚಿಗಿತವಂತೆ.

ಶೂಲ — ಓದಿದ್ದೇನೆ. " ಸತ್ಯಸಂಕಲ್ಪ " ಪತ್ರಿಕೆಯಲ್ಲಿ ಯಾವದೊ ಒಂದು ಗ್ರಾಮದ ಜಹಗೀರದಾರ ಮಾಧವರಾಯರೆನ್ನುವವರ ಮಹಾರೋಗವು ನಿವಾರಣೆಯಾಗಿದೆಯಂತೆ ಆ ಮಹಾತ್ಮರ ಆಶೀರ್ವಾದದಿಂದ.

ಗೌರಿ — ಇಷ್ಟೆಲ್ಲ ಗೊತ್ತಿದ್ದರೂ ಎಂತಹ ಪ್ರಮಾದ ಕಾರ್ಯದಲ್ಲಿ ತೊಡಗಿದ್ದೀರಿ ?

ಡಾಕ್ಟರ — ಆದದ್ದೆಲ್ಲವೂ ಒಳಿತೇ ನಡೆಯಿರಿ. ಬಹೂ ಕತ್ತಲಾಯಿತು. ಮೇಲಾಗಿ ಬಹೂ ತಂಡಿ ಹಿಡಿದಿದೆ. ಮನೆಗೆ ಹೋಗಿ ಮೊದಲು ಬಿಸಿ, ಬಿಸಿ ಕಾಫೀ ತಕ್ಕೊಳ್ಳುವಾ.

ಗಂಗಾ — ಬಿಸಿ, ಬಿಸಿ ಕಾಫೀ ತಕ್ಕೊಳ್ಳುವಾ.

— ಅಂಕು —

(ಬ್ಯಾಂಕರರ ಮನೆ)

ಕಮಲಮ್ಮ — (ಕನಸಿನಲ್ಲಿ ಶೂಲಪಾಣಿಯ ಮೇಲೆ ಮುಗಿಲು ಕೆಂಡ ಕಾರಿದ್ದನ್ನು ಕಂಡಿರುವಳು. ಕಂಡು ಅಳುವಳು.) ಇಲ್ಲ! ನಾನು ಪ್ರಾಣವನ್ನೇ ಇಡುವದಿಲ್ಲ ! ಇಂದೇ ನನಗೆ ನನ್ನ ಮಗನ ಭೆಟ್ಟೀ ಮಾಡಿಸಲಿಕ್ಕೇಬೇಕು. ಇಲ್ಲವಾದರೇ ಬಾವಿಯಲ್ಲಿ ಬಿದ್ದು ಪ್ರಾಣ ಕೊಟ್ಟೆನೆಂದೇ ತಿಳಿಯಿರಿ. ಇದ್ದೊಬ್ಬ ಮಗನ ಗತಿ ಏನಾಯಿತೋ ಏನೋ ! (ಅಳುವಳು)

ಸುಬ್ಬಾಭಟ್ಟ — ಕಮಲಮ್ಮನವರೇ ಸ್ವಲ್ಪ ಸಮಾಧಾನ; ತಮ್ಮಂಥ ತಿಳಿದವರು ಕನಸುಗಳನ್ನು ಹೀಗೆ ನಂಬಬಹುದೇ? ಸಮಾಧಾನ !

ಬ್ಯಾಂಕರ — ನನ್ನದಾದರೂ ಅದೇ ಅಭಿಪ್ರಾಯ. ಕನಸುಗಳಿಗೇನು ತುದಿ ಮೊದಲುಂಟೇ ?

ಕಮಲ — ಎಂತಹದದು! ನನ್ನ ಮಗನ ಮೇಲೆ ಮುಗಿಲಿನಿಂದ ಬಿದ್ದ ಕೆಂಡ! ಅಯ್ಯೋ ಮಗನು ಕೈಕಾಲು ಮುರಿದವನಾಗಿ ಒದ್ದಾಡುವದನ್ನು ಕಂಡೆ! ಅಯ್ಯೋ ! ಅಪ್ಪಾ ! ಶೂಲಪಾಣೀ !

ಸುಬ್ಬಾ — (ದೈನ್ಯದಿಂದ) ಕಮಲಮ್ಮನವರೇ,

ಕಮಲ — (ಶೋಕ ಪೂರ್ಣ ಸಿಟ್ಟಿನಿಂದ) ಸುಮ್ಮನಿರು ಮುತ್ಸಾಳಿ! ಬ್ರಾಮ್ಹಣಾ! ನನ್ನ ಮಗನನ್ನು ದೇಶಾಂತರ ಪಾಲು ಮಾಡಿದವನು ನೀನೇ. ಅವನ ಇಚ್ಛೆಯಂತೆ ಗೌರಿಗೂಡ ಲಗ್ನ ಮಾಡಿದ್ದರೇ ಈಗ ಸುಖವಾಗಿದ್ದು ಬಿಡುತ್ತಿದ್ದ, ನನ್ನ ಮಗಾ ಮನೆಯಲ್ಲಿ. (ಅಳುವಳು).

ಸುಬ್ಬಾ — ವರದಕ್ಷಿಣೆಗಾಗಿ ಆಗ್ರಹ ಪಡದಿದ್ದರೇ ಅವರ ಲಗ್ನವಾಗದೇ ಇರುತ್ತಿತ್ತೇ ?

ತೆರೆ — ಸಚಿತ್ರ ಸಂಡೇ ಟಾಯಿಮ್ಸು ಮಹತ್ವದ ಸುದ್ದಿ! ಚೀನಕ್ಕೆ ಹೋದ ಹಿಂದೀ ಪಥಕದ ಮೇಲೆ ಬಾಂಬ್ ಎಸ್. ಕೆ. ಬ್ಯಾಂಕರರಿಗೆ ಬಲವಾದ ಪೆಟ್ಟು !

ಬ್ಯಾಂಕರ — (ಗಾಬರಿಯಾಗಿ ಕಮಲಮ್ಮನಿಗೆ ತೋರಗೊಡದಂತೆ) ಜೋಯಿಸರೇ, ಹೋಗಿ ಹೋಗಿ! ಆ ಕೂಗುತ್ತ ಹೋಗುವ ಪೋರನಿಂದ ಒಂದು ಪತ್ರಿಕೆಯನ್ನು ತನ್ನಿ; ಹೋಗಿ ಹೂ. ತೀವ್ರ.

—: ರಸ್ತೆ :—

ಪತ್ರ ಮಾರುವವ — ಸಚಿತ್ರ ಸಂಡೇ ಟಾಯಿಮ್ಸು. ಮಹತ್ವದ ಸುದ್ದಿ! ಚೀನಕ್ಕೆ ಹೋದ ಹಿಂದೀ ಪಥಕದ ಮೇಲೆ ಬಾಂಬ್, ಎಸ್.ಕೆ.ಬ್ಯಾಂಕರರಿಗೆ ಬಲವಾದ ಪೆಟ್ಟು !

ಸುಬ್ಬಾ —ಎಲೊ, ಏ, ಪೋರಾ, ಕಾಗದಾ ಹಂಚುವ ಪೋರಾ, ಏನೋ ಅದು?

ಕಾ. ಹ. ಪೋರಾ — (ಪೂರ್ವೋಕ್ತ ಹೇಳುವನು.)

ಸುಬ್ಬಾ — ಅಂದರೇ ಅದೇನು ನಾಟಕದಾಟವ್ವೋ ಅಥವಾ ಸಿನೆಮಾ ಟೀಗ್ರಾಪ್ರೋ, ಏನು ಕುದರೀ ಆಟೋ? ಒಂದ ಕಾದಗಾ ತಾರೋ ಹೀಗೆ.

ಪೋರಾ — ಇದು " ಸಚಿತ್ರ ಸಂಡೇ ಟಾಯಿಮ್ಸ್ "

ಸುಬ್ಬಾ — ಸಂಡ್ಗೀ ಆಗಲೀ ಮಂಡ್ಗೆ ಆಗಲೀ ಒಂದು ತಾ ಹೀಗೆ. (ಪೋರ ಕೊಡುವನು. ಜೋಯ್ಸರು ಬಗಲ್ಗಿಕ್ಕಿಕೊಂಡು ಹೋಗುವನು.)

ಪೋರಾ — ಸ್ವಾಮಿ, ಸ್ವಾಮಿ ಕಾಸು ಕೊಡಿ ಕಾಸು, ಹಾಗೇ ಹೊರಟು ಬಿಟ್ರಲ್ಲಾ.

ಸುಬ್ಬಾ ಜೋಯ್ಸ — ಹೋಗೋ ಪೋಲೀ, ಇದಕ್ಕೆಲ್ಲಾ ಕಾಸು ಕೊಡೋದೇ? ಹೋಗಾಚೆಗೆ.

ಪೋರಾ — (ಕಾಗದ ಜಗ್ಗುತ್ತ) ತನ್ನಿ ಸ್ವಾಮಿ ಎರಡಾಣೆ; ಕಾಸು ಕೊಡದೇ ನಾನೇನದನ್ನು ಕೊಡುವದಿಲ್ಲ.

ಸುಬ್ಬಾ — ಏತಕ್ಕೋ ಎರಡಾಣೆ? ನಾನೇನು ನಿನ್ನ ನಾಟಕ ಅದೆ ಅಂಥ ಅಥವಾ ಸಿನೇಮಾಟೀಗ್ರಾಪು ನೋಡಲಿಕ್ಕೆ ಬಂದಿರುವೆನೇ? ಏತಕ್ಕೇ ಎರಡಾಣೆ ಕೊಡುವದು?

ಪೋರಾ — ಭಟ್ಟರೇ! ಮುಫತ್ತಾಗಿ ಕೊಡಲಿಕ್ಕೆ ಇದು ಊರಲ್ಲಿ ಹಂಚೋ ಹ್ಯಾಂಡಬಿಲ್ ಅಲ್ಲಾ (ಕಸಿದುಕೊಂಡು) ಬಿಡಿ, ಬಿಡಿ ಸುಮ್ಮನೇ ನನ್ನ ಸಮಯ ಹಾಳು ಮಾಡಿದಿರಿ. (ಹೋಗುವನು.)

ಸುಬ್ಬಾ — (ಅವನನ್ನು ತಿರಸ್ಕಾರ - ವಿಕ್ಷಿಪ್ತ ದೃಷ್ಟಿಯಿಂದ ನೋಡುತ್ತ) ಊರಲ್ಲಿ ಹಂಚೋ ಕಾದಗಕ್ಕೆ ಎರಡಾಣೆ ಕೇಳತಾನ ಘಟಿಂಗಾ. ಚಹಾ ಕುಡಿಯ ಲಿಕ್ಕೆ ರೊಕ್ಕ ಬೇಕಾಗಿದೆಯೆಂದು ಕಾಣುತ್ತೆ ಮಗನಿಗೆ. ಉಂ, ಕೊಡ ದಿದ್ದರಿಲ್ಲ. ಹೋಗೋ ಪೋಲೀ (ಎಂದು ಹೋಗುವನು)

ಬ್ಯಾಂಕರ — ಏಕೆ ಜೋಯೀಸರೇ ಪತ್ರಿಕೆ ತರಲಿಲ್ಲ?

ಸುಬ್ಬಾ — ಮುಫತ್ತಾಗಿ ಊರಲ್ಲಿ ಹಂಚೋ ಕಾಗದಕ್ಕೆ ಎರಡಾಣೆ ಬೇಡ ತಾನೆ ಕಳ್ಳಾ.

ಬ್ಯಾಂಕರ - ಥೂ ನಿಮ್ಮ ಬುದ್ಧಿಗೆ ಬೆಂಕಿ ಯಿಕ್ಕಾ. ಅದು ನಾಟಕದ ಹ್ಯಾಂಡಬಿಲ್ ಅಲ್ಲಾ, "ಸಚಿತ್ರ ಸಂಡೇ ಟಾಯಿಮ್ಸ.,

ಶಿಷ್ಟ — (ಈತನು ಬ್ಯಾಂಕರರ ಮಿತ್ರ ವೆಂಕೋಬರಾಯ) ಬ್ಯಾಂಕರರೇ ಏನು ಅನ್ಯಾಯ ಮಾಡಿದಿರಿ! ಶೂಲಪಾಣಿಯ ಇಚ್ಛೆಯಂತೆ ಧರ್ಮಪಾಲಯ್ಯನ ಗೌರಿಯೊಡನೆ ಅವನ ಲಗ್ನ ಮಾಡಿದ್ದರೇ ಇಂದಿಗೆ ಮನೆಯಲ್ಲಿ ಸುಖವಾಗಿರುತ್ತಿದ್ದಿಲ್ಲವೇ?

ಎಲ್ಲರೂ — ಈಗಾದದ್ದೇನು ವೆಂಕೋಬರಾಯರೇ ?

ಶಿಷ್ಟ — (ಸಂಡೇ ಟಾಯಿಮ್ಸ್ ತೋರಿಸಿ) ನೋಡಿ ಬಾಂಬಿನ ಪೆಟ್ಟಾಗಿದೆ ಮುಂದೆ ಅವನ ಪರಿಣಾಮವೇನೋ !

ಕಮಲಾ — ಅಯ್ಯೋ! ದೇವರೇ! ಕನಸು ನಿಜವಾಯಿತು. ಇದ್ದೊಬ್ಬ ಮಗಾ- (ಮೂರ್ಛೆಯಿಂದ ಬೀಳುವಳು.)

ಸರೋಜ — (ಬೀಳುವ ಕಮಲಮ್ಮನನ್ನು ಸಂಬಾಳಿಸಿ) ತಾಳಿ ತಾಳಿ ಕಮಲಮ್ಮನವರೇ, "ಇದ್ದೊಬ್ಬ ಮಗಾ" ಆದದ್ದೇನು ? ಇದ್ದೊಬ್ಬ ಮಗನಿಗೆ ಪೆಟ್ಟಾಗಿದೆಯಷ್ಟೇ ಪ್ರಾಣವೇನು ಹೋಗಿಲ್ಲವಲ್ಲಾ ! ಇಷ್ಟು ಗಾಬರಿಯಾಗುವದೇಕೆ ? ಕಮಲಮ್ಮನವರೇ ಮತ್ತು ಬ್ಯಾಂಕರರೇ, ಈ ತಾಜಾ ಸುದ್ದಿಗಳನ್ನು ಓದಿರಿ. ಹಾಗೆ ವಾರ ಪತ್ರಿಕೆಗಳ ಮೇಲಿಂದ ತೂಕ ಹಾಕಬಾರದು. ಇದೋ ನೋಡಿ "ಪೆಟ್ಟಾಗಿದ್ದ S. K. ಬ್ಯಾಂಕರರು ಗುಣ ಹೊಂದುತ್ತಲಿದ್ದಾರೆ. ಬೇಗನೆ ಎಲ್ಲರೂ ಹಿಂದುಸ್ತಾನಕ್ಕೆ ಬರತಕ್ಕವರು." ಇದಾದರೂ ಎಂಟು ದಿನಗಳ ಕೆಳಗಿನ ಸಮಾಚಾರ ಈಗ್ಗ ಮತ್ತು ಗುಣವಾಗಿರಬಹುದು. ಈ ಚಿತ್ರವಾರದು ಗುರುತಿಸಿ ?

ಕಮಲಮ್ಮ — (ನೋಡಿ ಆನಂದದಿಂದ) ಅಹಹಾ ನನ್ನ ಶೂಲಯ್ಯ.

|| ಪದ ||

ಎನಕಂದ ಇದೋ ಇಲ್ಲಿ ನಿಂತಿರುವ | ಚಂದದಿ ನಗುತಿರುವಾ ||
ಅಹ ಗೌರಮ್ಮನಾತನ ಆರೈಕೆಯಾ | ನೋಡಿ ತಾ |

ಹೇಗೆ ಮಾಡುವಳು ನಿರ್ಭಯಾ ಕೊನೆಗೆ ಆಕೆ
ಪಡೆದಳತಿಶಯಶ್ರೇಯ ಶ್ರೇಯಾ ||

ಸರೋಜ — ನೋಡಿ ಶೂಲಪಾಣಿಯು ಗೌರಮ್ಮನ ಸಹಾಯದಿಂದ ಹೇಗೆ ನಡೆದಾಡುವ ಪ್ರಯತ್ನ ಮಾಡುವನು.

ಕಮಲಾ — (ಬ್ಯಾಂಕರನಿಗೆ ವಿನಯದಿಂದ) ನೋಡಿ. ನನ್ನ ಮಗನ ವಿಪತ್ಕಾಲಕ್ಕೆ ಗೌರಿಯೇ ನೆರವಾದಳು. (ಉದಾಸ ಭಾವ) ತಾಯಿ—ತಂದೆಗಳಾದ ನಾವಾರೂ ಆಗಲಿಲ್ಲ.

ಸರೋಜ — ವಿಪತ್ಕಾಲಕ್ಕೆ ನೆರವಾಗುತ್ತಿರುವ ಗೌರಿಯನ್ನು ಶೂಲಪಾಣಿಗೆ ಅವನ ಸಂಸಾರ ಸಾಗರದಲ್ಲಿ ಕೊನೆಯವರೆಗೂ ನೆರವಾಗುವಂತೆ ಮಾಡುವದು ಮತ್ತೂ ಲೇಸಲ್ಲವೇ?

ಬ್ಯಾಂಕರ — ಈ ವಿಚಾರವನ್ನು ನಾನು ಎಂದೋ ಮಾಡಿದ್ದೆನು. ಆದರೆ ವರದಕ್ಷಿಣೆ ಇಲ್ಲದೇ ಮಗನ ಲಗ್ನ ಮಾಡುವದು ಗೌರವಕ್ಕೆ ಹಾನಿ ಯೆಂದು ಇವಳು ಅಭಿಪ್ರಾಯ ಪಟ್ಟಿದ್ದರಿಂದ —

ಕಮಲಾ — (ರೇಗಿ) ಏನು ವರದಕ್ಷಿಣೆಯನ್ನು ತಕ್ಕೊಳ್ಳುವದಕ್ಕೆ ನಾನು ಆಗ್ರಹ ಪಟ್ಟೇನೇ? ಸರೋಜಮ್ಮನವರೇ, ಇವರೆಂಥ ಸುಳ್ಳರು ನೋಡಿ!

ಬ್ಯಾಂಕರ — ಅಲ್ಲ, ನಾನು ಹೇಳಿದರೇನು ನೀನು ಹೇಳಿದರೇನು? ಅಂತೂ ಇಬ್ಬರಲ್ಲಿ ಒಬ್ಬರು ಹೇಳಿದೆವು.

ಕಮಲ — ನೀವೇ ಮೊದಲು ಹೇಳಿದವರು. (ವಾದಿಸುವರು)

ಬ್ಯಾಂಕರ — (ನೆನಪು ಮಾಡಿಕೊಂಡಂತೆ ನಟಿಸಿ) ಆಹಾ! ನಾವಿಬ್ಬರೂ ಅಲ್ಲ. ಸುಬ್ಬಾಜೋಯಿಸರು ಮೊದಲು ಹೇಳಿದವರು.

ಸುಬ್ಬಾ — ಅಂತೂ ಕೊನೆಗೆ ನಾನೇ ಖೋಡಿ ಕೂಸಾದೆ.

ಸರೋಜ — ತಾವಿದ್ದದ್ದು ಹಾಗೆಯೇ.

ಸ್ವಯಂಸೇವಕ — (ಬ್ಯಾಂಕರನಿಗೆ ನಮಿಸಿ ಪತ್ರಕೊಟ್ಟು ಬುಕ್ಕಿನಲ್ಲಿ ಸಹಿ ಬೇಡು ವನು.)

ಬ್ಯಾಂಕರ — (ಅವನನ್ನು ಆಪಾದ ಮಸ್ತಕ ನೋಡಿ) ಏನು ಮಾಡಬೇಕು?

ಸ್ಟಾರಿ. ಸೇವಕ — ಬುಕ್ಕಿನಲ್ಲಿ ಟಾಯಿಮ್ ಮತ್ತು ಡೇಟ್ ಹಾಕಿ ಸಹಿ ಮಾಡ ಬೇಕು.

ಬ್ಯಾಂಕರ — ನಾನೇನು ಸಹಿ ಮಾಡುವದಿಲ್ಲ. ಬಿಳೇ ಟೊಪ್ಪಿಗೆಯ ಬಂಟರಾದ ನಿಮ್ಮ ಬುಕ್ಕಿನಲ್ಲಿ.

ಸರೋಜ — ಪತ್ರವನ್ನು ಓದಿನೋಡಿಯಾದರೂ ಸಹಿ ಮಾಡಿ.

ಬ್ಯಾಂಕರ — ಹಾಗಾದರೆ ಪರವಿಲ್ಲಾ (ಪತ್ರ ನೋಡಿ ಅತ್ಯಾನಂದದಿಂದ) ಆಹಹಾ ನನ್ನ ಶೂಲಪಾಣಿ ಇಂದೇ ನಾಲ್ಕು ಘಂಟೆಯ ಟ್ರೇನಿನಲ್ಲಿ ಬರುವನು.

ಕಮಲ — ಈಗ್ಗೆ ಮೂರಾಗಿದೆ. ನಡಿಯಿರಿ, ಅವನನ್ನು ಕರೆದುಕೊಂಡು ಬರುವಾ. ಶಿಪಾಯಿ, ಮೋಟರ ತರಲಿಕ್ಕೆ ಡ್ರಾಯ್ವ್ಹರನಿಗೆ ಹೇಳು.

ಬ್ಯಾಂಕರ — ಹಾಗವನು ಫಕ್ಕನೇ ಮನೆಗೆ ಬರಲಾರಾ; ಕಾಂಗ್ರೆಸ್ ಅಧ್ಯಕ್ಷರು ಸ್ಟೇಶನ್ನಿನಲ್ಲಿ ಅವರನ್ನು ಸ್ವಾಗತಿಸುವರು. ಆ ಮೇಲೆ ಸಕಲರನ್ನೂ ಮೆರವಣಿಗೆಯಿಂದ ಆಜಾದ ಮೈದಾನಿಗೆ ಕರೆತಂದು ಅಲ್ಲಿ ಝೆಂಡಾ ವಂದನೆಯಾಗಿ ಆ ಮೇಲೆ ಕೀರ್ತಿವಂತರಾಗಿ ಬಂದ ಆ ಯುವಕ-ಯುವತಿಯರ ದಲವನ್ನು ಸಾರ್ವಜನಿಕವಾಗಿ ಸನ್ಮಾನಿಸಿದಮೇಲೆ ಶೂಲಪಾಣಿಯು ಮನೆಗೆ ಬರುವನು.

ಕಮಲಾ — ನಡೆಯಿರಿ, ನಾವೂ ಆ ಸಮಾರಂಭದಲ್ಲಿ ಸೇರುವಾ.
ಮೋಟಾರ ತಯ್ಯಾರ ಹೈ ರಾವಸಾಬ್, (ತೆರೆಯಲ್ಲಿ)

ಕಮಲಾ — ನಡೆ ಸರೋಜಮ್ಮಾ, ವೈದಿಕ ಮುತ್ತೈದೆ. ನೀನೂ ಜೊತೆಗೆ ಬಾ.

ಬ್ಯಾಂಕರ — ಸುಬ್ಬಾಭಟ್ಟರೂ ಬರಲಿ. ಅನಾಯಾಸವಾಗಿ ದಂಪತಿಗಳು.

ಸರೋಜ — ದಿಬ್ಬಣದೊಂದಿಗೆ ಹೊರಡುವದಕ್ಕೆ ಅಲ್ಲೇನು ಲಗ್ನವಿದೆಯೇ ?

ಕಮಲ — ಅಹುದು, ನಾನು ಗೌರೀ-ಶೂಲಪಾಣಿಯರ ಲಗ್ನ ನಿಶ್ಚಯವನ್ನು ಅಲ್ಲಿಯೇ ಮಾಡತಕ್ಕವಳು.

ಬ್ಯಾಂಕರ — ನಾನೂ ಹಾಗೆಯೇ ನಿಶ್ಚಯಿಸಿದ್ದೇನೆ. ನೋಡಿ ಸುಬ್ಬಾ ಜೋಯಿಸರೇ ನಮ್ಮ ಇವಳ ಸ್ವರವು ಹೇಗೆ ಒಂದಾಯಿತು !

ಸುಬ್ಬಾ — ಕೇಳುವದೇನು ರಾಯರೇ! ಸ್ವರದಲ್ಲಿ ಸ್ವರವು ಸೇರಿ ದೊಡ್ಡ ಸ್ವರವಾಯಿತು.

ಸರೋ — ವರದಕ್ಷಿಣೆಯನ್ನೇನು ಕಾಂಗ್ರೆಸ್ಸಿನವರಿಂದ ತಕ್ಕೊಳ್ಳುವಿರಾ ?

ಬ್ಯಾಂಕರ — ಬೆಂಕಿ ಇಕ್ಕಿ ಆ ವರದಕ್ಷಿಣೆಗೆ! ಹುಂ ನಡೆಯಿರಿ ಸ್ಟೇಶನ್ನಿಗೆ. ನಾವು ಸ್ಟೇಶನ್ನಿನಲ್ಲಿಳಿದು ತಿರುಗಿ ಮೋಟಾರ ಕಳುಹಿಸಿ ಕೊಟ್ಟು ಧರ್ಮಣ್ಣ ವಸುಂಧರಾದೇವಿಯವರನ್ನು ಅಲ್ಲಿಗೇನೇ ಕರೆಯಿಸಿಕೊಳ್ಳುವಾ.

ಬ್ಯಾಂಕರ — ಕಾಂಗ್ರೆಸ್ಸಿಗರೆಲ್ಲರೂ ಕಲೆಯುವ ಆ ಸಮಾರಂಭಕ್ಕೇನೋ ಹೊರಡುವ ಸಿದ್ಧತೆಯಾಯಿತು. ಆದರೆ ?

ಕಮಲ — ಅನುಮಾನವೇನು ಮತ್ತೆ ?

ಬ್ಯಾಂಕರ — ಶುದ್ಧ ಖಾದೀ ವಸನಧಾರಿಗಳಾದ ಆ ದೇಶಭಕ್ತರ ಗುಂಪಿನಲ್ಲಿ ಈ ವಿಲಾಯತಿ ವೇಷದಿಂದ ಹೇಗೆ ಹೋಗುವದೂಂತ !

ಸರೋಜ — D. L. B. ಚುನಾವಣೆಗೆ ನಿಂತಾಗ್ಗೆ ತಾವು ಶುದ್ಧ ಖಾದೀ ಉಡುಪು ಧಾರಣ ಮಾಡಿದ್ದು ನನಗೆ ಚನ್ನಾಗಿ ಜ್ಞಾಪಕವಿದೆ.

ಬ್ಯಾಂಕರ — ಉಂ. ಆ ಬಟ್ಟೆಗಳೋ! ಡಿ. ಎಲ್. ಬಿ ಚುನಾವಣೆ ಆದ ಮರುದಿನವೇ ನಮ್ಮ ಕಮತಿಗನ ಪಾಲಾದವು. ಕಾಂಗ್ರೆಸ್ಸಿಗರ ಹೋಟು ಪಡೆಯುವದಕ್ಕಾಗಿ ಮಾಡಿಸಿದ ಬಟ್ಟೆಗಳವು. ಇಷ್ಟು ದಿನಗಳ ತನಕ ನಮಂಥವರಲ್ಲಿ ನಿಲ್ಲುವವೆ ?

ಸುಬ್ಬಾ — ರಾಯರೇ, ಇದ್ದರಿತ್ತು ಬಿಡಿ. ಈ ವಿಲಾಯತಿ ವೇಷ; ತಲೆಗೊಂದು ಬಿಳೀ ಟೊಪ್ಪಿಗೇರಿಸಿದರಾಯ್ತು. ಗಾಂಧೀ ಜನಗಳಾಗಿಯೇ ಹೋಗುವಿರಿ. ಗದ್ದಲದಲ್ಲಿ ಬುಡಕಾರು ನೋಡುವರು ?

ಬ್ಯಾಂಕರ — ಅದೂ ನಿಜ. ಏನೆ, ತಾ ಶೂಲಯ್ಯನದೊಂದು ಖಾದೀ ಟೊಪ್ಪಿಗೆ.

ಕಮಲಾ — ಅದು ತಮ್ಮ ತಲೆಗೆ ಬಹು ದೊಡ್ಡದಾಗುವದಲ್ಲ !

ಸರೋಜ — ಹಾಗಾದರೆ ಮತ್ತೆ ಅನುಕೂಲ ಪ್ರಸಂಗ ಬಂದಹಾಗೆ ತಿರುಗಿಸಲು ಬರುವದು.

ಕಮಲಾ — (ಟೊಪ್ಪಿಗೆ ಕೊಡುವಳು. ಬ್ಯಾಂಕರ ಹಾಕಿಕೊಳ್ಳುವನು) ಐ, ಮತ್ತೆ ನಾನು ?

ಸರೋಜ — ಹೆಣ್ಣು ಮಕ್ಕಳ ಸಲುವಾಗಿ ಅಷ್ಟು ಚಿಕಿತ್ಸೆಯಿರುವದಿಲ್ಲ.

ಸುಬ್ಬಾ — ರಾಯರೇ ಹೆಗಲಿಗೆ ಈ ನನ್ನ ಗಾಂಧೀ ಉಪ್ಪರಣಿ ವಪ್ಪಲಿಕ್ಕಿಲ್ಲವೇ ?

ಕಮಲಾ — ಹಾಕಿ ನೋಡಿ.

ಸುಬ್ಬಾ — (ತನ್ನ ಉಪ್ಪರಣೀ ಅವರ ಹೆಗಲಿಗೆ ಹಾಕಿ) ರಾಯರೇ ಈಗ್ಗೆ ತಾವು ಗಾಂಧೀ ಜನಗಳಿಗಿಂತ ಒಂದು ತೂಕ ಹೆಚ್ಚಾಗಿ ಒಪ್ಪುವಿರಿ. ನಿಜವಾಗಿ ರಾಯರೇ, ಈಗ್ಗೆ ತಾವಂದರೆ ಸಾಕ್ಷಾತ್ ಅರ್ಧ ನಾರೀ ನಟೇಶ್ವರರೇ.

ಸರೋಜ — ಅಥವಾ ಒಳ್ಳೇ ಬಣ್ಣದ ಷ್ಯಾಮಿಲಿಯಾನ್ !

ಸುಬ್ಬಾ — ಹಾಗಂದರೇ ?

ಸರೋಜ — ಓತೀಕಾಟ !

ಬ್ಯಾಂಕರ — ಏನು ಸರೋಜಮ್ಮನವರೇ ?

ಕಮಲಾ — ಅತ್ತ ನೋಡಿ ನಾಲ್ಕಕ್ಕೆ ಹದಿನೈದೇ ಮಿನಿಟುಗಳುಳಿದವು.

ಬ್ಯಾಂಕರ -- (ಮೋಟರ ಹಾರ್ನ ಕೇಳಿ) ಹುಂ. ತೀವ್ರ ಮೋಟರಿನಲ್ಲಿ ಕುಳಿತುಕೊಳ್ಳಿರಿ. (ಸಕಲರೂ ಹೋಗುವರು)

—: ರಸ್ತಾ :—

(ಸ್ವಯಂಸೇವಕರ ತಂಡವು ಮಾರ್ಚಿಂಗ ಪದ ಹೇಳುತ್ತ ಹೋಗಿ, ಪದ್ಧತಿಯಂತೆ ಝುಂಡಾ ವಂದನೆಯಾಗತಕ್ಕದ್ದು. ದೊಡ್ಡದೊಂದು ಮೈದಾನಿನಲ್ಲಿ ವೇದಿಕೆ ಹತ್ತರವೇ ಉನ್ನತವಾದ ರಾಷ್ಟ್ರಧ್ವಜ ಹಾರುತ್ತಲಿದೆ. ವೇದಿಕೆಯ ಮೇಲೆ ರಾಷ್ಟ್ರಪತಿಗಳು, ಎಡ ಬಲಕ್ಕೆ ಶೂಲಪಾಣಿ ಗೌರಿಯರು ಮತ್ತು ಅವರ ಬಳಗವೂ, ಮಿಕ ಸಭಾಸದರು.)

ರಾಷ್ಟ್ರಪತಿ — (ಉಪಸಂಹಾರ ಹೇಳಿಕೆ ಎದ್ದು ನಿಂತು) ಹಿಂದ ಬಾಂಧವರೇ, ಇಂದು ನಾವೆಲ್ಲರೂ ಇಲ್ಲಿ ಕಲೆತಿರುವ ವಿಚಾರವು ಹಸ್ತಪತ್ರಿಕೆಗಳ ಪರಿ ಮುಖವಾಗಿ ತಮ್ಮೆಲ್ಲರಿಗೂ ಗೊತ್ತಾಗಿರಬಹುದು. ಈಗಿನ ಪ್ರಥಮ ಕಾರ್ಯಕ್ರಮವೆಂದರೆ (ಗೌರಿಯನ್ನು ಮುಂದೆ ಕರೆದು ನಿಲ್ಲಿಸಿ) ಈ ನಮ್ಮ ಬಾಲಿಕಾ-ಪಥಕ ಕ್ಯಾಪ್ಟನ್ ಕುಮಾರಿ ಗೌರಮ್ಮನು, ಆ ಚೀನ ಸಮರ ಭೂಮಿಯಲ್ಲಿ ಸಲ್ಲಿಸಿದ ಸೇವೆಗೆ ಈ ಇಡೀ ಭೂಮಂಡಲವೇ ಬೆರಳು ಕಚ್ಚಿದೆ. ಕೇಳಿ! ಸಾಯಂಕಾಲ ಸಮಯ, ದೊಡ್ಡದಾದ ಹಳದೀ ನದಿಗೆ ಮೇರೆದಪ್ಪಿ ನೆರೆ ಬರುತ್ತಲಿದೆ. ಇವರಿರುವ ಕ್ಯಾಂಪಿನ ಮೇಲೆ, ಗಗನ ದಿಂದ ಜಪಾನಿಯರು ಬಾಂಬು ಚಲ್ಲುತ್ತಲಿದ್ದಾರೆ. ಬೋರ್ಗರೆಯುತ್ತ ಏರಿ ಬರುತ್ತಿರುವ ಹುಚ್ಚು ಹೊಳೆಯು ಶುಶ್ರೂಷಾಶಿಬಿರ ಭಾಗವನ್ನು ಮೆಲ್ಲನೆ ಕೊಚ್ಚಿ ಒಯುತ್ತಲಿದೆ. ಜನರು ಹೌಹಾರಿ ದಿಕ್ಕುಪಾಲಾಗಿ ಓಡಿ ಹೋಗುತ್ತಲಿದ್ದಾರೆ. ಅಂತಹ ಭೀಕರ ಸಂಧಿಯಲ್ಲಿ ಈ ನಮ್ಮ ವೀರ ಕುಮಾರಿ ಗೌರಮ್ಮನು, ತನ್ನ ಆರೈಕೆಯಲ್ಲಿದ್ದ ೩-೪ ಮಕ್ಕಳು ಮತ್ತು ಒಬ್ಬ ಹೆಣ್ಣು ಮಗಳನ್ನು ಕೈಗಾಡಿಯಲ್ಲಿ ಹಾಕಿಕೊಂಡು ಆ ದುರಂತ ಪ್ರದೇಶದಿಂದ ಹೊರಬಿದ್ದು ಬೆಳತನಕ ಎಳೆದೊಯ್ದು ೭-೮ ಮೈಲು ದೂರದಲ್ಲಿರುವ ಒಂದು ನಿರ್ಭಯ ಏರಿಯ ಪ್ರದೇಶದಲ್ಲಿ ತಂದು ಬಿಡುವಾಗ್ಗೆ ಅಲ್ಲಿಯೇ ಕರ್ಮ ಧರ್ಮ ಸಂಯೋಗದಿಂದ ಮೂರ್ತಿ ಮಂತ ದೇಶಾಭಿಮಾನಿಗಳೂ ಆದರ್ಶ ಮುತ್ಸದ್ದಿಗಳೂ ಮತ್ತು ವೀರಾಧಿ ವೀರರೂ ಅಲ್ಲದೇ ಆ ಮಹಾ ಯುದ್ಧನಿಯಾಮಕರಾದ ಕಮಾಂಡರ ಇನ್ ಚೀಫ್ ಜನರಲ್ ಚೆಂಗ ಕೈಷೇಕ ಧೊರೆಗಳು ಸಪತ್ನೀಕರಾಗಿ ನಿಂತಿದ್ದರು. ಈ ಗೌರಮ್ಮನ ಆ ಅಪ್ರತಿಮ ಸಾಹಸವನ್ನು ನೋಡಿ, ಆ ರಾಷ್ಟ್ರ ಪ್ರೇಮಿಗೆ ಎಷ್ಟು ಆನಂದವಾಗಿರಬಹುದು! ಅದೇ ಕ್ಷಣವೇ ಅವರ ಧರ್ಮ ಪತ್ನಿಯವರಾದ ಲೇಡೀ ಚೆಂಗ ಕೈಷೇಕದೊರೆಸಾನಿ ಯವರು ಈ ಗೌರಮ್ಮನನ್ನು ಪ್ರೇಮದಿಂದ ತಬ್ಬಿ ಮುದ್ದಿಕ್ಕಿ, ತಮ್ಮ ಕೊರಳೊಳಗಿನ ಲಕ್ಷಾವಧಿ ರೂಪಾಯಿ ಬೆಲೆ ಬಾಳುವ ಈ ಮುತ್ತಿನ ಹಾರವನ್ನು ಈಕೆಯ ಕೊರಳಲ್ಲಿ ಹಾಕ ಹೋದರೆ "ತನ್ನ ಕಾಂಗ್ರೆಸ್ಸಿನ ಅಪ್ಪಣೆಯಿಲ್ಲದೇ ಅದನ್ನು ಕೊಳ್ಳಲಾರೆ" ನೆಂದು ವಿನಯ ಪೂರ್ವಕ

ನಿರಾಕರಿಸಿದಾಗ್ಗೆ ಮೂರ್ತಿಮಂತ ದೇಶಾಭಿಮಾನಿಗಳಿಂದ ಆ ಚೆಂಗ ಕೈಷೇಕ ದಂಪತಿಗಳಿಗಾದ ಆನಂದವನ್ನು ಬಣ್ಣಿಸಲು ತಕ್ಕದಾದ ಶಬ್ದಗಳು ದೇವ ಭಾಷೆಯಲ್ಲಿ ಸಹ ಸಿಕ್ಕಲಿಕ್ಕಿಲ್ಲ. ಆ ಮೇಲೆ ಅವರು ಈ ಹಾರವನ್ನು ನಮ್ಮ ಕಡೆಗೆ ಕಳುಹಿಸಿ, ಪತ್ರಮುಖೇನ ತಮ್ಮಭಿಪ್ರಾಯವನ್ನು ತಿಳುಹಿಸಿದ್ದಾರೆ. ಕುಮಾರೀ ಗೌರಮ್ಮಾ! ಅವರ ಅಪೇಕ್ಷೆಯಂತೆ ಈ ಹಾರವನ್ನು ಸಾರ್ವಜನಿಕರ ಸಮ್ಮುಖದಲ್ಲಿ ಸ್ವೀಕರಿಸಬೇಕೆಂದು ರಾಷ್ಟ್ರಾಧ್ಯಕ್ಷನಾದ ನಾನು ನಿನಗೆ ಅಪ್ಪಣೆ ಮಾಡುವೆ.

ಗೌರಿ — (ಹಾರ ತಕ್ಕೊಂಡು ಅಧ್ಯಕ್ಷರಿಗೂ ಸಭೆಗೂ ನಮಿಸುವಳು. ಜನರು ಚಪ್ಪಳಿಕ್ಕುವರು.)

ರಾ. ಪತಿ — (ಪ್ರೆಸ್ಸ ಮಾಡಿಕೊಂಡು ಶೂಲಪಾಣಿಯನ್ನು ಮುಂದಕ್ಕೆ ಕಲೆತ ಜನರಿಗೆ ತೋರಿಸಿ) ಈ ಶೂರ ಸಾಹಸಿ ಯಾರು ಗುರ್ತಿಸಿದಿರಾ? ನಿಮ್ಮ ಪಟ್ಟಣದ ಬ್ಯಾಂಕರ ಕನಕರಾಯರ ಮಗಾ. ಎಂ. ಎ. ಪದವೀ ಧರನಾದ ಶೂಲಪಾಣಿ.ವರದಕ್ಷಿಣೆಯ ಶಿಷ್ಟ ಹೆಸರಿನಲ್ಲಿ ಯಾವಳಾದರೋರ್ವ ವಧುವಿನ ಗೌರವ ಗುಲಾಮನಾಗುವದನ್ನು ಧಿಕ್ಕರಿಸಿ ರಾಷ್ಟ್ರಾಜ್ಞೆಯಂತೆ ಚೈನಾ ಸಂಕಟಗ್ರಸ್ಥರ ಸಹಾಯಕ್ಕೆ ಹೋಗಿ ಮಿತಿಮೀರಿ ಸಾಹಸದೋರಿ ಬಾಂಬ ಪರಿಮುಖವಾಗಿ ಜಪಾನಿಯರು ಸಲ್ಲಿಸಿದ ವೀರಾಗ್ರೇಸರತ್ವದ ಬಿರಿದು ಬಿರಿದಾವಳಿಗಳನ್ನು ಚಿರವಾಗಿ ಮೈ ಮೇಲೆ ಧರಿಸಿ ನಿಮ್ಮೆದುರು ನಿಂತಿರುವನು. ಮನೆಗೂಳಿಗಳಾಗಿ ಕ್ರಾಪಿನ ಬೈತಲೆ ತೆಗೆದುಕೊಂಡು ಮುರುಕು ಮಾಡುತ್ತ ಅಲೆದಾಡುವ ತರುಣ ಉತ್ತರ ಕುಮಾರರು ಈತನನ್ನು ನೋಡಿ ನಾಚಿ ರಾಷ್ಟ್ರಕಾರ್ಯಕ್ಕೆ ಪ್ರವರ್ತರಾಗಲಿ! ಇಂತಹ ಆದರ್ಶ ವೀರನಿಗೆ ನಾವೇ ನಮ್ಮ ರಾಷ್ಟ್ರದ ಪತಿಯಿಂದ ಸ್ವತಃ ಮಹಾತ್ಮಾಜೀಯವರೆ ನೂತ ಈ ನೂಲಿನ ಅಮೌಲಿಕ ಮಾಲೆಯನ್ನು ಹಾಕಿ ಸನ್ಮಾನಿಸುವೆವು. (ಹಾರ ಹಾಕುವಾಗ್ಗೆ ಜನರ ಕರತಾಡನ)

ಸೆಕ್ರೆಟರಿ — (ಚೀಟಿ ಅಧ್ಯಕ್ಷರ ಕೈಗೆ ಕೊಡತಕ್ಕದ್ದು)

ರಾ. ಪತಿ—(ಓದಿನೋಡಿ ಆನಂದದ ನಗೆಯಿಂದ) ಕೇಳಿ! ಇಂತಹ ಆದರ್ಶ ಯುವಕ ಯುವತಿಯರ ವಿವಾಹ ಸಮಾರಂಭವನ್ನು ಇದೇ ಶುಭ ಮುಹೂರ್ತ

ದಲ್ಲಿ ರಾಷ್ಟ್ರಧ್ವಜದಡಿಯಲ್ಲಿ ಸಕಲ ದೇಶ ಬಂಧು ಭಗಿನಿಯರ ಸಮ್ಮುಖದಲ್ಲಿ ಜರುಗಿಸಬೇಕೆಂದು ಇವರ ಮಾತಾ ಪಿತೃಗಳ ಅಭಿಪ್ರಾಯ ಈ ಮಂಗಲ ಕಾರ್ಯಕ್ಕೆ ನಾವೇ ಪೌರೋಹಿತ್ಯವನ್ನು ವಹಿಸಬೇಕೆಂದು ಅವರು ವಿಜ್ಞಾಪಿಸಿಕೊಂಡಿರುವರಾದ್ದರಿಂದ ನಾವಾದರೂ ಈ ಸುಸಂಧಿಯನ್ನು ಅಗತ್ಯವಾಗಿ ಸಾಧಿಸುವೆವು. ಗೌರಮ್ಮ-ಶೂಲಪಾಣಿಯರೇ ಹೀಗೆ ಬನ್ನಿ. ಕೈಗಳನ್ನು ಕೊಡಿ.

ಗೌರಿ — ಭಾವೀ ಬ್ಯಾಂಕರ ಮೂವಯ್ಯನವರು ತಮ್ಮ ಮಕ್ಕಳನ್ನು ವರಿಸ ತಕ್ಕವರು. ೫ ಸಾವಿರ ರೂಪಾಯಿಯಿಗಳನ್ನು ತಮ್ಮ ಬ್ಯಾಂಕಿಗೆ ಭರ್ತಿ ಮಾಡಬೇಕೆಂದು ಕರಾರು ಹಾಕಿದ್ದಾರೆ. ಅದಕ್ಕಾಗಿ ನನ್ನದಾದ ಈ ಹಾರವನ್ನು ಅವರಿಗೆ ಕೊಡುವೆನು. ಇದರ ಕ್ರಯದಲ್ಲಿ ತಮ್ಮ ೫ ಸಾವಿರದ ಹಣ ತಕ್ಕೊಂಡು ಮಿಕ್ಕುವದನ್ನು ನನ್ನ ಬಡ ತಾಯಿ ತಂದೆಗಳಿಗೆ ಕೊಡಬೇಕು.

ರಾ. ಪತಿ — (ಜಗ್ಗಿ ನಕ್ಕು) ಮೂವಯ್ಯನಿಗೆ ಸಾರ್ವಜನಿಕವಾಗಿ ಒಳ್ಳೇ ಉಡುಗೊರೆ ಮಾಡಿದಿಯಮ್ಮಾ! (ಅನ್ನುವಾಗ್ಗೆ ಗೌರಿಯು ಕೈ ಹಾರವನ್ನು ಶೂಲಪಾಣಿಯ ಕೊರಳಲ್ಲಿ ಹಾಕಿಸಿ ಕೈ. ಕೈ. ಹಿಡಿಸುವನು.)

ಮಂಗಲಂ

ಉದಯವಾಗಲಿ ನಮ್ಮ । ಚಲುವ ಕನ್ನಡ ನಾಡು ||
ಬದುಕು ಬಲುಹೀನ ನಿಧಿಯು । ಸದಭಿಮಾನದ ಗೂಡು ||

— ಸಮಾಪ್ತಿ —

ಪರಿಶಿಷ್ಟ ೧

ಪುಟ	ಸಾಲು	ತಪ್ಪು	ಒಪ್ಪು
೧	೭	ಅಲ್	ಅಲ್ಲಾ
೬	೨೫	ಸಾಕ್ಷ್ಯಾತ್	ಸಾಕ್ಷಾತ್
೮	೨೨	ನನಗೆ	ನಿನಗೆ
೯	೧	ಇವರು	ಇವಳು
೧೩	೧೪	ಇಲ್ಲಗೊಡಬಾರದು	ನಿಲ್ಲಗೊಡಬಾರದು
೧೬	೨	ಸತ್ಯಗ್ರಹವನ್ನು	ಸತ್ಯವನ್ನು
,,	೧೧	ಈಗ ನನ್ನ	ಈ ನನ್ನ
೩೬	೫	ಉರುಸುವೆನು	ಉರುಳಿಸುವೆನು
೩೭	೧೦	ವಸುಂದರಾ ದೇವಿ	ವಸುಂಧರಾದೇವಿ
೪೧	೫	ರಹಾಹ್ಯೆ	ರಹಾಹೈ
೪೨	೨	ಜಾಂವ್	ಜಾವ
,,	೩	ಜಾಯವ	ಜಾಯ
,,	೨೪	ದುರಂತ	ದುರಂತ !
೪೪	೨	ಗಾಳಿಯ	ಗಾಳಿಯು
೪೫	೧೯	ಭುಲೇಗಿ	ಭೂಲೇಗಿ
,,	೨೪	ದಿಲ್‌ಕೂ	ಬಿಲ' ಕೂ
೪೬	೧	ಬಿಜಲೀಸೆ	ಬಿಜಲೀಸಿ
,,	೪	ದೇಖೀಜೀಯೆ	ದೇಖೀಜಿಯೆ
,,	೪೧	ಮಜೂರೊಂಕೆ	ಮಾಜೂರೊಂಕೆ
೪೭	೨	ಎಹ್ ಮೇರಿ	ಯಹ್ ಮೇರಿ

ಪುಟ	ಸಾಲು	ತಪ್ಪು	ಒಪ್ಪು
೪೭	೨೦	ಲಾರ್ಡ್‌ಚೆಂಗ್‌ಕೈಶೇಕ	ಜನರಲ್ ಚೆಂಗ್ ಕೈ ಶೇಕ
೪೮	೧	ಅಮಂಗಲ ಮಾಶು	ಅಮಂಗಲ ಮಾತು
೫೪	೧೫	ಶೂಲಪಾಣಿಯಲ್ಲಿ ?	ಶೂಲಪಾಣಿಯೆಲ್ಲಿ ?
೫೫	೨೩	ಔದಾಸಿನ್ಯ	ಔದಾಸೀನ್ಯ
೫೬	೨೪	ಮಹಿಮಾಶಾಲಿನವರು	ಮಹಿಮಾಶಾಲಿನರರು
೫೭	೧೧	ದಃಖ	ದುಃಖ
೫೯	೨೩	ಸೀದ್ಯಾ	ಸೀದ್ಯಾರ್
೬೦	೨	ತುಟ್ಟಿ ಕಚ್ಚುವನು	ತುಟಿಕಚ್ಚುವನು
೬೨	೨೫	ಹೇಳಬೇಕಾದರೆ	ಹೇಳು ಬೇಕಾದರೆ
೬೪	೨೧	ಆರ್ಟ್	ಆಟ್ಸ್‌
೬೯	೨೪	ಎನಕಂದ	ಎನ್ನ ಕಂದ
೭೩	೨೩	ಮಿಕಸಭಾಸದರು	ಮಿಕ್ಕ ಸಭಾಸದರು
೭೬	೮	ರೂಪಾಯಿಯಿಗಳನ್ನು	ರೂಪಾಯಿಗಳನ್ನು
,,	೧೮	ಬಲುಹೀನನಿಧಿಯು	ಬಲುಹಿನನಿಧಿಯು

ಪರಿಶಿಷ್ಟ ೨

ಕೆಲವು ಪದಗಳನ್ನು ಅನ್ನುವ ಮಟ್ಟನ್ನು ಈ ಕೆಳಗೆ ಕೊಡಲಾಗಿದೆ. ಅಭಿನಯಕಾರರು ಅದರ ಉಪಯೋಗವನ್ನು ಮಾಡಿಕೊಳ್ಳಬಹುದು.

ಪುಟ ೬ ಸರೋಜೆಯ ನಾಲ್ಕನೆ ಮಾತಿನ ಬದಲು ಈ ಕೆಳಗಿನ ಪದ ಅನ್ನಬಹುದು.

ಖವಾಲಿ-ಮಟ್ಟು: ಖಾಜಾಕೇ ಕಲಪ್ಯೆ ಮೈತೋ

ಗಂಡನಾದರೆ ಹೆಂಡತಿಯೋಳ್ । ಪುಂಡತನವದೇಕೆ ?
ಬಂಢ ಮಾತುಗಳನು ಕಂಡೂ ಕಂಡೂ ಆಡಬೇಕೆ ॥ ಪ ॥

ಪುಟ ೧೧ ('ನೋಡುವಾ ಬನ್ನಿರೆ ' ಎಂಬ ಪದದ ಮಟ್ಟು)

ರಾಗ-ಮಾಂಡ-ತಾಳ : ಖವಾಲ-ದಾದರ ಮಟ್ಟು : ಸುದಿನರಜನಿ

ಪುಟ ೧೨; ಸರೋಜೆಯ ೨ನೇ ಮಾತು 'ಏನು ನಲ್ಲ'.... ಇತ್ಯಾದಿ ಆದಬಳಿಕ ಈ ಕೆಳಗಿನ ಪದ ಅನ್ನಬಹುದು.

ರಾಗ-ದೇಸ, ತಾಳ: ಧುಮಾಳಿ; ಮಟ್ಟು: ಜಯ ಅಂಬೆಗೌರಿ

ಹಲ್ಲುಳು ಕಳಚಿದರೇನಾಯ್ತು । ಕೂದಲು ಬೆಳಗಿದರೇನಾಯ್ತು ॥
ಪ್ರಿಯದ ನಟನೇ ನಿನ್ನಯ । ಬಾರದು ತರುಣರಿಗೆ ॥
ಬಾಗಿದ ಬೆನ್ನಿನ ಶೋಭೆಯ ಭಾಗ್ಯವು । ಬರುವದೇ ಮಕ್ಕಳಿಗೆ ॥

ಪುಟ ೧೯ 'ಅಕ್ಕತಂಗಿಯರೇ' ಪದದ ಮಟ್ಟು

ರಾಗ-ಖಮಾಜಿ ತಾಳ: ತ್ರಿಪಟಿ, ಮಟ್ಟು: ಪರಿಣಾಮ ಹೋಯಿಲ್ ಸುಖಾಚಾ

ಪುಟ ೨೩ 'ದೇವರಾಜ್ಞೆಯೆಂದರೆ' ಪದದ ವಟ್ಟು

ರಾಗ: ಖಂಬಾವತಿ ತಾಳ: ರಾಗ ಸಾರಂಗ

ಪುಟ ೩೭; ಸರೋಜೆ: 'ದೇಶ ಸೇವಾಬದ್ಧ' ಪದ

ವಟ್ಟು: ರಾಗ ಸಾರಂಗ

ಪುಟ ೪೪ ಗೌರಿ (ಪದ) ' ದೇವ ನಿನ್ನ ಮಹಿಮೆ' (ವಟ್ಟು ಭಜನೆ)

ಪುಟ ೫೧; ಗೌರಿ (ಪದ) 'ಕರುಣಾಳೋ ಕಮಲಾವರ'

ರಾಗ: ಪಹಡಿ ಜಂಗಲ ತ್ರಿಪಟ

ಪುಟ ೫೫ ಶೂಲಪಾಣಿ (ಪದ) 'ಈ ತನುವಾ ಏತಕೆ'

ವಟ್ಟು : ಭೈರವಿ, ತೋಡಿ; ತಾಳ ಅದಿ ಧುಮಾಳಿ ಮಿಶ್ರ

ಪುಟ ೬೩; ಶೂಲಪಾಣಿ (ಪದ) 'ವೇಷದ ಕಾರ್ಯವು ತೀರಲು'

ರಾಗ ತಾಳ ದೀಪಚಂದಿ

ಪುಟ ೬೪ ಕಮಲಮ್ಮ (ಪದ) 'ಎನ್ನ ಕಂದ ಇದೋ ಇಲ್ಲಿ ನಿಂತಿರುವ'

ರಾಗ ಭೈರವಿ, ತಾಳ ಕೇರವಾ